

ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ



ಎಕ್ಸ್‌ಪ್ರೆಸ್ ಕಾರಿಡಾರ್ ಎಂಬ ಹೆದ್ದಾರಿ ದರೋಡ !





ಟೆಲಿಕಾಂ : ವಿದೇಶ ಬಂಡವಾಳಕ್ಕೆ ವಿರೋಧ ಏಕೆ?



ಬೀದರ್ : ಹೊಸ ಫಲಿತಾಂಶದ ನಿರೀಕ್ಷೆ

ವೃತ್ತಿ ಶಿಕ್ಷಣ : ಪ್ರತಿಭೆ-ಸಾಮಾಜಿಕ ನ್ಯಾಯದ ರಕ್ಷಣೆಗಾಗಿ...

- ಬಿಜೆಪಿಯೊಳಗಿನ ಗುದ್ದಾಟವೂ ಉಮಾಭಾರತಿ ಸನ್ಯಾಸತ್ವವೂ...
- ಮಲ್ಯ ಇಲ್ಲಿ ಇಲ್ಲ !
- ಉದ್ಯೋಗಾಕಾಂಕ್ಷಿಗಳ ಹೆಚ್ಚಳ

ದೂರದರ್ಶನದಲ್ಲಿ

ಚಿರಸ್ಮರಣೆ

ಈ ಸಮಾಜವನ್ನು ಪುನರ್ರಚಿಸುವುದು ಗಾಂಧಿಯವರ ಗುರಿಯಾಗಿರಲಿಲ್ಲ. ಪ್ರತಿಯೊಂದು ಮಾನವ ಹೃದಯವನ್ನು ಪರಿವರ್ತಿಸುವುದು ಅವರ ಗುರಿಯಾಗಿತ್ತು. ಪ್ರತಿಯೊಬ್ಬ ಮನುಷ್ಯನ ಅಂತರಂಗದಲ್ಲಿರುವ ಒಳ್ಳೆಯತನ ಈಚೆ ಬರುವಂತೆ ಮಾಡುವುದು ಅವರ ಉದ್ದೇಶವಾಗಿತ್ತು.
ಗಾಂಧೀಜಿಯವರ ಅನೇಕ ವಿಚಾರಗಳಲ್ಲಿ ವಿರೋಧಾಭಾಸಗಳಿದ್ದರೂ ಸತ್ಯವನ್ನು ಕುರಿತ ಅವರ ನಿಷ್ಠೆ ಮಾತ್ರ ತುಂಬಾ ನಿಜವಾದುದಾಗಿತ್ತು.

ಗಾಂಧೀಜಿಯವರೊಂದಿಗೆ......

ಗಾಂಧೀಜಿ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಅವರ ಚಿಂತನೆಯತ್ತ ಒಂದು ಇಣುಕು... ಖ್ಯಾತ ಪತ್ರಕರ್ತೆ ಬರ್ಕ್‌ವೈಟ್ - ಗಾಂಧೀಜಿಯವರ ಮುಖಾಮುಖಿಯಿಂದ

ಮಾಲನೇ ದಿನ ಬಿರ್ಲಾ ಭವನದ ಕಡೆ ಹೊರಟೆ. ಭಾರತದಲ್ಲಿ ನನ್ನ ವಾಸ್ತವ್ಯದ ಕೊನೇ ದಿನ ನಾನು ಗಾಂಧಿಯವರ ಸಂದರ್ಶನ ಮಾಡುತ್ತಿದ್ದೆ. ಈ ಅಂತಿಮ ದಿನ ಇದಕ್ಕಿಂತ ಹೆಚ್ಚು ರೋಚಕವಾಗಿರಲು ಸಾಧ್ಯವಿರಲಿಲ್ಲ.

ಬಿರ್ಲಾ ಭವನದ ಹಿಂಭಾಗದಲ್ಲಿರುವ ತೋಟದ ಭಾಗಕ್ಕೆ ನಾನು ಬಂದಾಗ ಗಾಂಧಿಯವರು ಬಿಸಿಲು ಬೀಳುವ ಕಡೆ ಮಂಚದ ಮೇಲೆ ಕೂತಿದ್ದರು. ನಾನು ನನ್ನ ಮೊದಲ ಪ್ರಶ್ನೆ ಕೇಳಿದೆ. ಆ ಸಂದರ್ಭಕ್ಕೆ ಆ ಪ್ರಶ್ನೆ ತುಂಬ ಸಿಲ್ಲಿಯಾಯಿತೇನೋ ಅನ್ನಿಸಿತ್ತು. ಆದರೆ ಈಗ ಹಾಗನ್ನಿಸುತ್ತಿಲ್ಲ. 'ನಾನು ನೂರಾ ಇಪ್ಪತ್ತೈದು ವರ್ಷ ಬದುಕುತ್ತೀನಿ ಎಂದು ನೀವು ಯಾವಾಗಲೂ ಹೇಳುತ್ತಿರುತ್ತೀರಿ. ಯಾವ ಭರವಸೆಯಿಂದ ಹಾಗೆ ಹೇಳುತ್ತೀರಿ ಎಂದೆ: ಈ ಪ್ರಶ್ನೆಗೆ ಗಾಂಧಿಯವರು ನೀಡಿದ ಉತ್ತರಕ್ಕೆ ನಾನು ಬೆಚ್ಚಿಬಿದ್ದೆ. ಅವರು ಹೇಳಿದರು 'I have lost the hope'. ಯಾಕೆ ಹೀಗೆ ಎಂದು ಕೇಳಿದೆ. ಗಾಂಧಿ ಹೇಳಿದರು - 'ಯಾಕೆಂದರೆ ಈ ಜಗತ್ತಿನಲ್ಲಿ ನಾನು ಬದುಕಲು ಇಷ್ಟಪಡುವುದಿಲ್ಲ. ನನನಗೆ ಬದುಕುವ ಆಸೆಯಿಲ್ಲ' ಎಂದರು. 'ಆದರೆ ನನ್ನಸೇವೆ ಅಗತ್ಯವಾದರೆ ಅಥವಾ ಆ ರೀತಿ ನನಗೆ ಅಪ್ಪಣೆಯಾದರೆ ನಾನು ನೂರಾ ಇಪ್ಪತ್ತೈದು ವರ್ಷ ಇರುತ್ತೇನೆ' ಎಂದರು. ಹೀಗೆ ಹೇಳಿ ಲಯಬದ್ಧವಾಗಿ ಚರಕಾ ಕೆಲಸ ಮುಂದುವರೆಸಿದರು.



ನಾನು ಈಗ ಟ್ರಸ್ಟೀಶಿಪ್‌ನ ಪ್ರಶ್ನೆಯನ್ನು ಕೈಗೆತ್ತಿಕೊಂಡೆ. ಭಾರತ ಈಗಷ್ಟೇ ಸ್ವಾತಂತ್ರ್ಯ ಗಳಿಸಿದ್ದು ಈ ದೇಶವನ್ನು ಹೇಗೆ ಬೇಕೋ ಹಾಗೆ ರೂಪಿಸುವ ಅವಕಾಶವಿರುವುದರಿಂದ ಈ ಸಂದರ್ಭಕ್ಕೆ ಈ ಪ್ರಶ್ನೆ ಸೂಕ್ತ ಎನ್ನಿಸಿತು. 'ನಿಮ್ಮ ದೃಷ್ಟಿಯಲ್ಲಿ ಉತ್ತಮ ಟ್ರಸ್ಟಿ ಯಾರು' ಎಂದು ಕೇಳಿದೆ.

'ಯಾರು ಟ್ರಸ್ಟಿಶಿಪ್‌ನ ತತ್ವವನ್ನು ಅಕ್ಷರಶಃ ಪಾಲಿಸುತ್ತಾರೋ ಮತ್ತು ಆ ಮನೋಭಾವಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತಾರೋ ಅವರು' ಎಂದರು ಗಾಂಧಿ.

'ಭಾರತದ ಕೈಗಾರಿಕೋದ್ಯಮಿಗಳಲ್ಲಿ ನಿಮ್ಮ ಪ್ರಕಾರ ಯಾರು ಆ ರೀತಿ ನಡೆದುಕೊಳ್ಳುತ್ತಿದ್ದಾರೆ' ಎಂದು ಕೇಳಿದೆ.

'ನನಗೆ ಗೊತ್ತಿರುವವರಲ್ಲಿ ಯಾರೂ ಆ ಪ್ರಕಾರ ಇಲ್ಲ ಎಂದರು. ನಿಮ್ಮ ಟ್ರಸ್ಟೀಶಿಪ್ ಆದರ್ಶಕ್ಕನುಗುಣವಾಗಿ ನಡೆದುಕೊಳ್ಳುವಂಥವರೊಬ್ಬರು ರೂಪುಗೊಳ್ಳಲು ಇನ್ನೂ ಎಷ್ಟು ಕಾಲ ಬೇಕು ಎಂಬ ಪ್ರಶ್ನೆಗೆ 'ಭವಿಷ್ಯದಲ್ಲಿರುವುದು ಯಾರಿಗೆ ಗೊತ್ತು?' ಎಂದರು. ಆದರೆ ಈ ಉತ್ತರದಿಂದ ನನಗೆ ಸಮಾಧಾನವಾಗಲಿಲ್ಲ. ಈ ತತ್ವದ ಪ್ರಯೋಜನ ಪಡೆದುಕೊಳ್ಳಲು ಸಾವಿರಾರು ಜನ ದೀರ್ಘಕಾಲದಿಂದ ಕಾಯುತ್ತಿದ್ದಾರೆ. ಇಂತಹ ಒಂದು ಆದರ್ಶವನ್ನು ಸ್ಪಷ್ಟವಾಗಿ ವಿವರಿಸದೆ ಸುಂದರವಾದ ಮಾತುಗಳ ಹಿಂದೆ ತಲೆಮರೆಸಿಕೊಳ್ಳುವುದು ಸರಿಯಲ್ಲ ಎಂದು ಪ್ರತಿಭಟನೆ.

'ನೋಡಿ, ನಿಮ್ಮ ಸಮೀಪವರ್ತಿಗಳಲ್ಲಿ ಯಾರಾದರೊಬ್ಬರು, ನಾನು ಟ್ರಸ್ಟಿಯಾಗಬೇಕು ಎಂದು ನಿಮ್ಮ ಹತ್ತಿರ ಹೇಳಿದರೆ ನೀವು ಅವರಿಗೆ ಏನು ಹೇಳುತ್ತೀರಿ' ಎಂದು ಕೇಳಿದೆ.

ಅದಕ್ಕೆ ಗಾಂಧಿಯವರು, 'ಹಾಗೆ ನೋಡುವುದಾದರೆ ಹೆಚ್ಚು ದೂರ ಹೋಗುವ ಅಗತ್ಯವಿಲ್ಲ. ಈ ಭವನದ ಮಾಲೀಕರೇ ಇದ್ದಾರೆ. ಆತ ಟ್ರಸ್ಟಿಯಾಗುವ ಬಯಕೆ ಹೊಂದಿದ್ದಾರೆ. ಅವರೊಬ್ಬರೇ ಅಲ್ಲ. ನಾಮ ಹೇಳಿದ ಅರ್ಥದಲ್ಲಿ ನಡೆದುಕೊಳ್ಳಲು ಅನೇಕರು ಪ್ರಯತ್ನಿಸುತ್ತಿದ್ದಾರೆ. ಅವರು ನನಗೆ ಮೋಸ ಮಾಡುವುದಿಲ್ಲ ಎಂದು ಆಶಿಸುತ್ತೇನೆ.' ಇದ್ದಕ್ಕಿದ್ದಂತೆ ಚರಕಾ ತಿರುಗುವುದು ನಿಂತಿತು. ಗಾಂದಿ ಮೌನ ತಾಳಿದರು. ಅನಂತರ ತುಂಬ ನಿಧಾನವಾಗಿ, ಬಹಳ ಕಾಲದಿಂದ ಮುಚ್ಚಿಯೆದಿದ್ದ ಬಾಗಿಲನ್ನು ತೆಗೆಯುತ್ತಿರುವ ಹಾಗೆ ಅವರು ಹೇಳಿದರು 'ಬಿರ್ಲಾ ನನಗೆ ಮೋಸ ಮಾಡುತ್ತಿದ್ದಾರೆ ಎಂದೇನಾದರೂ ಗೊತ್ತಾದ ಒಂದು ಕ್ಷಣವೂ ಅವರ ಮನೆಯಲ್ಲಿ ನಾಸಿರುವುದಿಲ್ಲ. ಬಿರ್ಲಾ ಹೇಳುವುದರಲ್ಲಿ ನನಗೆ ವಿಶ್ವಾಸ ಇರುವುದರಿಂದ ನಾನು ಇಲ್ಲಿದ್ದೇನೆ. ಅವರು ನನಗೆ ತುಂಬ ಸಮಯದಿಂದ ಗೊತ್ತು' ಅನ್ನುತ್ತಾ ಒಂದು ಎರಡು ಎಂದು ಲೆಕ್ಕ ಹಾಕಿ 'ಮೂವತ್ತೆರಡು ವರ್ಷಗಳಿಂದ ನನ್ನ ಜೊತೆಗಿದ್ದಾರೆ. ಅವರು ವಂಚಿಸುತ್ತಾರೆ ಎಂದು ನನಗನ್ನಿಸಿಲ್ಲ' ಎಂದರು. ಬಿರ್ಲಾ ಬಗ್ಗೆ ಇಷ್ಟೆಲ್ಲಾ ಹೇಳಿದ್ದಕ್ಕಾಗಿ ಅವರು ಏನೋ ಗೊಂದಲಕ್ಕೊಳಗಾದಂತೆ ಕಂಡರು.

'ನಾನು ಬಿರ್ಲಾವರನ್ನು ಮಾತ್ರ ಉದ್ದೇಶಿಸಿ ಈ ಮಾತು ಹೇಳುತ್ತಿಲ್ಲ. ಒಟ್ಟು ಈ ಪರಿಕಲ್ಪನೆಯ ಬಗ್ಗೆ ಕೇಳುತ್ತಿದ್ದೇನೆ ಅಷ್ಟೆ ಎಂದು ಸ್ಪಷ್ಟಪಡಿಸುತ್ತ ಇದನ್ನು ಯಾವ ರೀತಿಯಲ್ಲಿ ಆಚರಣೆಗೆ ತರಬೇಕು? ಉದಾಹರಣೆಗೆ ಒಬ್ಬ ಕೈಗಾರಿಕೋದ್ಯಮಿ ವರ್ಷಕ್ಕೆ ಅರ್ಧ ಮಿಲಿಯನ್ ರೂಪಾಯಿ ಲಾಭ ಮಾಡುತ್ತಾನೆ. ಕಾರ್ಮಿಕರು ತಿಂಗಳಿಗೆ ಪಡೆಯುವ ವೇತನ 24 ರೂಪಾಯಿಗಳಾಗಿರುತ್ತವೆ. ಆಗ 'ಹೇಗೆ' ಎಂದೆ?

'ಟ್ರಸ್ಟಿಯಾದವನು ಒಂದೇ ಒಂದು ಪೈಸೆಯನ್ನೂ ತನಗಾಗಿ ಮಾಡಿಕೊಳ್ಳಬಾರದು. ಗಳಿಸಿದ್ದರ ಕಮಿಷನ್ ಮೇಲೆ ಮಾತ್ರ ಅವನಿಗೆ ಹಕ್ಕು. ತಾನು ಯಾರಿಗೆ ಟ್ರಸ್ಟಿಯೋ ಅವರ ಅಂದರೆ ತನ್ನ ಪೋಷಕರು (Guards) ಇಲ್ಲ ಇಲ್ಲ ಈ ಪದವೂ ಸರಿಯಲ್ಲ ತನ್ನ 'ಕಾವಲುಗಾರರ' (wards) ಎಂಬ ಪದ ಸರಿಹೋಗಬಹುದೇನೋ. ಅವರ ಸಮ್ಮತಿಯಿಂದ, ಅವನು ತಮ್ಮ ಕಮಿಶನ್ ತೆಗೆದುಕೊಳ್ಳಬೇಕು. ನೀನು ತಿಂಗಳಿಗೆ ಐದು ರೂಪಾಯಿಗಿಂತ ಹೆಚ್ಚು ತೆಗೆದುಕೊಳ್ಳಬಾರದು ಎಂದು ಕಾವಲುಗಾರರು ಹೇಳಿದರೆ ಅವನು ಅದನ್ನು ಪಾಲಿಸಬೇಕು. ಇಲ್ಲದಿದ್ದರೆ ಟ್ರಸ್ಟನ್ನು ಬಿಟ್ಟುಕೊಡಬೇಕು.

'ನೀವು ಇದನ್ನು ಬಿರ್ಲಾಗೆ ಹೇಳಿದ್ದೀರಾ? ಈ ಬಗ್ಗೆ ಅವರ ಹತ್ತಿರ ಮಾತಾಡಿದ್ದೀರಾ?'

ಗಾಂಧಿಯವರು 'ಹೂಂ ಯಾಕಿಲ್ಲ' ಎಂದರು. ಈಗ ಒಳಬಾಗಿಲು ಮುಚ್ಚಿಕೊಳ್ಳುತ್ತಿದೆ ಅನ್ನಿಸಿತು. 'ಯಾಕಿಲ್ಲ' ಎಂದು ಅವರು ಮತ್ತೊಮ್ಮೆ ಹೇಳಿದಾಗ ಬಾಗಿಲು ಇನ್ನು ತೆರೆಯಲಾರದಂತೆ ಮುಚ್ಚಿಕೊಂಡಿದೆ ಎಂದು ಅರ್ಥಮಾಡಿಕೊಂಡೆ. ಈ ಮೂವತ್ತೆರಡು ವರ್ಷಗಳಲ್ಲಿ ಗಾಂಧಿಯವರು ಎಂದಾದರೊಂದು ದಿನ ಕೆಲವೇ ಮೈಲುಗಳಷ್ಟು ದೂರ ಹೋಗಿ ನೋಡಿಕೊಂಡು ಬಂದಿದ್ದರೆ ತಾವು ಟ್ರಸ್ಟಿಯಲ್ಲಿಟ್ಟಿದ್ದ ನಂಬಿಕೆಗೆ ಅನುಗುಣವಾಗಿ ಟ್ರಸ್ಟ್ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ಸ್ವತಃ ಕಂಡುಕೊಳ್ಳಬಹುದಿತ್ತು. ಅಥವಾ ಇದಕ್ಕಿಂತ ಮುಖ್ಯವಾಗಿ ಟ್ರಸ್ಟಿಶಿಪ್ ತತ್ವದಲ್ಲಿ ತಾವಿಟ್ಟಿರುವ ವಿಶ್ವಾಸ ಸರಿ ಇದೆಯೇ ಇಲ್ಲವೇ ಎಂದು ಕಂಡುಕೊಳ್ಳಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅಥವಾ ಒಂದು ವೇಳೆ ನೋಡಿದ್ದರೂ ತಾವು ಏನು ನೋಡಿದರೋ ಅದನ್ನು ತಾವು ನಂಬಿಕೊಂಡ ತತ್ವಕ್ಕೆ ಹೋಲಿಸಿ ನೋಡಲು ಹೋಗುತ್ತಿರಲಿಲ್ಲ. ಈ ರೀತಿಯ ಧೋರಣೆಯನ್ನು ನನ್ನ ಭಾರತೀಯ ಸ್ನೇಹಿತರು ಕುರುಡುಗಣ್ಣು ಎಂದು ಕರೆಯುತ್ತಿದ್ದರು. ಇದು ಗಾಂಧಿಯವರಿಗೆ ಮಾತ್ರ ವಿಶಿಷ್ಟವಾದ ಲಕ್ಷಣವಲ್ಲ. ಉಚ್ಚ ಆದರ್ಶಗಳನ್ನು ಹೇಳುವ ಭಾರತದ ಇನ್ನೂ ಅನೇಕ ನಾಯಕರುಗಳ ಸ್ವಭಾವದಲ್ಲಿಯೂ ಈ ಅಂಶ ಕಾಣುತ್ತಿತ್ತು.

ಗಾಂಧಿಯವರಿಗೆ ಪ್ರಿಯವಾದ ಹರಿಜನರು ಮತ್ತು ಇತರ ಕಾರ್ಮಿಕ ಜನರು ದರಿದ್ರಾವಸ್ಥೆಯಲ್ಲಿ ಜೀವಿಸುತ್ತಿದ್ದರೂ ಅವರ ಸ್ಥಿತಿಗತಿಗಳನ್ನು ಸರಿಪಡಿಸುವ ಕ್ರಮಕೈಗೊಳ್ಳುವಂತೆ ಗಾಂಧಿಯವರಿಗೆ ಪ್ರಚೋದನೆಯಾಗಲಿಲ್ಲ. ಹೀಗಾದುದಕ್ಕೆ ಅವರಲ್ಲಿ ಆಳವಾಗಿ ಬೇರೂರಿದ ಮತ್ತು ಸ್ವಭಾವತಃ ಅವರಲ್ಲಿ ರೂಪುಗೊಂಡಿದ್ದ ದೃಷ್ಟಿಕೋನವೇ ಕಾರಣ. **ಗಾಂಧಿಯವರು ಕೇವಲ ಬಿರ್ಲಾ ಅಥವಾ ಬಿರ್ಲಾಗಳು, ದಾಲ್ಮಿಯಾಗಳು, ಮಹಾರಾಜರುಗಳನ್ನು ಹಾಗೂ ಸಂಪತ್ತಿನ ಮಾಲೀಕರನ್ನು ಮಾತ್ರ ರಕ್ಷಿಸ ಹೊರಟಿರಲಿಲ್ಲ. ಹಳೆಯ ವ್ಯವಸ್ಥೆಯನ್ನು ಸರಳವಾದ ಯಂತ್ರಪೂರ್ವ ಯುಗವನ್ನು ಹಾಗೇ ಕಾಪಾಡಿಕೊಳ್ಳುವುದು ಅವರ ಗುರಿಯಾಗಿತ್ತು.** ಇದು ಬದಲಾಗುವುದು ಅವರಿಗೆ ಬೇಕಿರಲಿಲ್ಲ.

ಈ ಸಮಾಜವನ್ನು ಪುನರ್ರಚಿಸುವುದು ಗಾಂಧಿಯವರ ಗುರಿಯಾಗಿರಲಿಲ್ಲ. ಪ್ರತಿಯೊಂದು ಮಾನವ ಹೃದಯವನ್ನೂ ಪರಿವರ್ತಿಸುವುದು ಅವರ ಗುರಿಯಾಗಿತ್ತು. ಪ್ರತಿಯೊಬ್ಬ ಮನುಷ್ಯನ ಅಂತರಂಗದಲ್ಲಿರುವ ಒಳ್ಳೆಯತನ ಈಚೆ ಬರುವಂತೆ ಮಾಡುವುದು ಅವರ ಉದ್ದೇಶವಾಗಿತ್ತು. 'ಬಡವನಾಗಿರುವ ಮನುಷ್ಯ ಬಡವನಾಗೇ ಇರಬೇಕು. ಅವನಿಗೆ ಸಂಪತ್ತು ದೊರೆತರೆ ಆಸೆ ಹೆಚ್ಚುತ್ತದೆ. ಐಶ್ವರ್ಯವು ದೈಗಳ್ಳತನಕ್ಕೆ ಪಾಪಕೃತ್ಯಗಳಿಗೆ ಎಡೆ ಮಾಡಿಕೊಡಬಹುದು. ವ್ಯಕ್ತಿಯು ನೂರಾರು ಮಂದಿಯ ಭವಿಷ್ಯವನ್ನು ನಿರ್ಧರಿಸುವಂತಹ ಶ್ರೀಮಂತಿಕೆ, ಅಧಿಕಾರವನ್ನು ಹೊಂದಿದ್ದರೆ ಆತನ ಹೃದಯ ಪರಿವರ್ತನೆ ಮಾಡುವುದೂ ಅಷ್ಟೆ ಮುಖ್ಯ. ಆದರೆ ಮಹಾರಾಜನಲ್ಲಿ ಆಗಲೀ, ಕೈಗಾರಿಕೋದ್ಯಮಿಯಲ್ಲಿ ಆಗಲಿ ಈ ಬದಲಾವಣೆ ಅಂತಃಪರಿವರ್ತನೆಯಿಂದ ಸಾಧ್ಯವಾಗಬೇಕೇ ಹೊರತು ಬಲಾತ್ಕಾರದಿಂದಲ್ಲ' ಎಂದರು ಗಾಂಧೀ.

'ಈ ವ್ಯಕ್ತಿಗಳಲ್ಲಿ ಯಾರಿಗಾದರು ನಾನು, ನೀವು ನಿಮ್ಮಲ್ಲಿರುವುದನ್ನೆಲ್ಲ ಕೊಟ್ಟುಬಿಡಬೇಕು ಎಂದು ಹೇಳಿದ್ದೇ ಆದರೆ ಅಲ್ಲಿಗೆ ನನ್ನ ಸೇವೆಯ ಉದ್ದೇಶವೇ ಕೊನೆಗೊಂಡಂತೆ' ಎಂದು ಗಾಂಧಿ ಹೇಳಿದರು.

ನನಗೆ ಇದು ಅರ್ಥವಾಗಲಿಲ್ಲ. ಇಂತಹ ಸಂತನಾದ, ಋಜುಮಾರ್ಗದಲ್ಲಿ ನಡೆಯುತ್ತಿರುವ ಹಾಗೂ ತಾನು ಬಹುಕಾಲದಿಂದ ನಂಬಿಕೊಂಡು ಬಂದ ವಿಚಾರವನ್ನು ಜಾರಿಗೆ ತರಲು ಶ್ರಮಿಸುತ್ತಿರುವ ಗಾಂಧಿಯವರಿಗೆ ಸರ್ವಾಧಿಕಾರತ್ವ ಎಂಬ ಪದ ಪ್ರಯೋಗಿಸಬಹುದೆ? ಕೈಗಾರಿಕೋದ್ಯಮಿಗಳನ್ನು ಹಾಗೂ ಫ್ಯೂಡಲ್ ಮಹಾರಾಜರನ್ನು ಟ್ರಸ್ಟೀಶಿಪ್‌ನ ದಾರಿಯಲ್ಲಿ ಕರೆದೊಯ್ಯುವುದು ಹಿಟ್ಲರ್ ಶಾಹಿಯಾಗುವುದೆ? ಟ್ರಾಕ್ಟರ್‌ಗಿಂತ ನೇಗಿಲಿಗೆ ಹೆಚ್ಚು ಗೌರವ ಇರುವ, ಯಂತ್ರ ಸ್ಪರ್ಶವಿರುವ ವಸ್ತುಗಳಿಗಿಂತ ಮಾನವನ ಹಸ್ತಗಳಿಂದ ತಯಾರಾದ ವಸ್ತುಗಳಿಗೆ ಹೆಚ್ಚಿನ ಮೌಲ್ಯವಿರುವ ಮಧ್ಯಕಾಲೀನ ಯುಗ ಗಾಂಧಿಯವರಿಗೆ ಪ್ರಿಯವಾಗಿತ್ತು. ಭೂಸುದಾರಣೆ ತರುವುದಕ್ಕಾಗಿ ಇಲ್ಲಿ ಭೂಮಾಲೀಕರನ್ನಂತೆ ಹಾಗೇ ಬೆಳೆಯ ಗೇಣಿದಾರರನ್ನು ಮನವಿ ಮಾಡಿಕೊಳ್ಳಬೇಕೆಂಬುದು ಗಾಂಧೀ ವಿಚಾರವಾಗಿತ್ತು. ಟ್ರಸ್ಟಿಶಿಪ್ ಎಂದರೆ ಅದು ರಾಜರಿಗೂ, ಬಡವರಿಗೂ ಒಂದೇ ರೀತಿಯ ಹಕ್ಕುಗಳನ್ನು ಪ್ರತಿಪಾದಿಸುವ ಕನಸು ಎಂದು ಗಾಂಧಿಯವರು ಒಮ್ಮೆ ವಿವರಿಸಿದ್ದರು. ಬಹುಶಃ ಈ ವಿಷಯದಲ್ಲಿ ಗಾಂಧಿಯವರಿಗೂ ಅವರ ಕೆಲವು ನಿಷ್ಠಾವಂತ ಅನುಯಾಯಿಗಳಿಗೂ ಸಹಮತ ಮೂಡಲೇ ಇಲ್ಲ. ಗಾಂಧಿಯವರಿಗೆ ಬೇರೆಲ್ಲರಿಗಿಂತ ಹೆಚ್ಚು ನಿಕಟವಾಗಿದ್ದ ವ್ಯಕ್ತಿ ನೆಹರೂ. ಈ ವ್ಯತ್ಯಾಸ ಕುರಿತು ಅವರು ಅನೇಕ ಸಲ ಮಾತಾಡಿದ್ದರು. ಬರೆದಿದ್ದರು. ಗಾಂಧಿಯವರು ಈ ಎರಡರ ನಡುವೆ

ಪುಟ 4 ಕ್ಕೆ

ನೈತಿಕತೆ

ನಿಜ ನುಡಿದ ಗಾಂಧೀಜಿ ಆ ಯೇಸು ಕ್ರಿಸ್ತ
ಕ್ರೂರಿಗಳ ಕೈಯಲ್ಲಿ ಅದಕ್ಕೆ ಅಸ್ತ
ಧರ್ಮಗುತ್ತಿಗೆ ಪಡೆದ ಮಂತ್ರಿಗಳು ಕೂಡಿ
ಕಡಿಯುತ್ತ ಬಂದಿಹರೊ ನೈತಿಕತೆ ನಾಡಿ

- ವಿಡಂಬಾರಿ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 1, 2004**
  ಡಿವೈಎಫ್ಐ - ದಕ್ಷಿಣ ಭಾರತ ಸಂಘಟನಾ ಶಿಬಿರ, ಹೈದರಾಬಾದ್
- **ಸೆಪ್ಟೆಂಬರ್ 29, 2004**
  ವಿದ್ಯಾರ್ಥಿನಿಯರ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ರಾಷ್ಟ್ರವ್ಯಾಪಿ ಪ್ರತಿಭಟನೆ - ಎಸ್ಎಫ್ಐ ಕರೆ.
- **ಅಕ್ಟೋಬರ್ 1, 2004**
  ಎಡ ವಿದ್ಯಾರ್ಥಿ ಸಂಘಟನೆಗಳ ರಾಷ್ಟ್ರಮಟ್ಟದ ಸಮಾವೇಶ, ನವದೆಹಲಿ
- **ಅಕ್ಟೋಬರ್ 1, 2004**
  ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನ ಉಡುಪಿ
- **ಅಕ್ಟೋಬರ್ 8, 2004**
  ಅರಣ್ಯ ಭೂಮಿಯ ಸಕ್ರಮಕ್ಕಾಗಿ, ಕೂಲಿ ಹೆಚ್ಚಳ, ವಿದ್ಯುತ್, ರೇಷನ್ ಕಾರ್ಡ್ ಮುಂತಾದ ಪ್ರಶ್ನೆಗಳಿಗಾಗಿ ರೈತ - ಕೂಲಿಕಾರರ ವಿಧಾನಸಭಾ ಚಲೋ
- **ಅಕ್ಟೋಬರ್ 15, 2004**
  ನಿರುದ್ಯೋಗ ಭತ್ಯೆ, ಖಾಲಿ ಇರುವ ಹುದ್ದೆಗಳ ಭರ್ತಿ; ಕೃಪಾಂಕ ನೌಕರರಿಗೆ ಶಾಶ್ವತ ಪರಿಹಾರಕ್ಕೆ ಆಗ್ರಹಿಸಿ ಯುವಜನರ ವಿಧಾನಸೌಧ ಚಲೋ

ಬೀದರ್ ಚುನಾವಣೆ : ಹೊಸ ಫಲಿತಾಂಶದ ನಿರೀಕ್ಷೆ

ಮೊನ್ನೆಯ ಲೋಕಸಭಾ ಸಾರ್ವತ್ರಿಕ ಚುನಾವಣೆಗಳು ಮುಕ್ತಾಯವಾಗಿ, ಫಲಿತಾಂಶ ಹೊರಬರುತ್ತಿರುವಂತೆ ಮರು ಚುನಾವಣೆ ಬಹುತೇಕ ಖಚಿತವಾದಂತಿತ್ತು. ಪ್ರಶ್ನೆ ಇದ್ದದ್ದು ಎಂದು, ಯಾವಾಗ ಎಂಬುದಷ್ಟೆ. ಬಿಜೆಪಿ ಗೆದ್ದಿದ್ದರೂ ಅಲ್ಲೊಂದು ಅನಿಶ್ಚತತೆ, ಹೇಗೋ ಲೆಕ್ಕಕಾದರೂ ಒಂದು ಸಂಖ್ಯೆ - ಒಬ್ಬ ಎಂಪಿ ಇರುವುದು ಅದಕ್ಕೂ ಅತೀ ಅನಿವಾರ್ಯವಿತ್ತು. ಎಲ್ಲವನ್ನು ಗೆಲ್ಲುವುದಾಗಿ ಹೊರಗೆ ಅದೆಷ್ಟೇ ಅಬ್ಬರಿಸಿ ಬೊಬ್ಬಿರಿದರೂ ಕೇಂದ್ರದಲ್ಲಿ ಸರ್ಕಾರ ರಚಿಸುವುದು ಗ್ಯಾರಂಟಿ ಇರಲಿಲ್ಲ. ಹೀಗಾಗಿ ತೀರಾ ಅಸ್ವಸ್ತರಾಗಿದ್ದ, ಹೃದಯಬೇನೆ, ಅಸ್ತಮಾ, ಮೂತ್ರಪಿಂಡದ ವಿಫಲತೆಗಳಿಂದ ಆಸ್ಪತ್ರೆಯಲ್ಲಿ ಹಾಸಿಗೆ ಹಿಡಿದಿದ್ದರೂ ಬೀದರ್ ಕ್ಷೇತ್ರಕ್ಕೆ ಮತ್ತೆ 'ಮುತ್ತ್ಯಾ'ನಿಗೆ ಬಿಜೆಪಿ ಟಿಕೇಟ್ ನೀಡಿ ಕಣಕ್ಕಿಳಿಸಿತ್ತು. ಫಲಿತಾಂಶ ಹೊರಬರುತ್ತಿರುವಂತೆ ಆಯ್ಕೆಯ ಪ್ರಮಾಣ ಪತ್ರ ಸ್ವೀಕರಿಸಲು ಮುತ್ತ್ಯಾ ರಾಮಚಂದ್ರಪ್ಪ ವೀರಪ್ಪನವರು ಅಲ್ಲಿರಲಿಲ್ಲ. ಮೂರು ತಿಂಗಳು ತುಂಬುವ ಒಳಗೆ ಮುತ್ತ್ಯಾರ ಉಸಿರು ನಿಂತಿತು. ಉಪಚುನಾವಣೆ ಘೋಷಿತವಾಯಿತು.

ಈಗ ಬೀದರ್ ಲೋಕಸಭಾ ಮೀಸಲು ಕ್ಷೇತ್ರದಲ್ಲಿ ಮತದಾನ ಅಕ್ಟೋಬರ್ 13 ರಂದು ನಡೆಯಲಿದೆ. ಸ್ಪರ್ಧಾ ಅಖಾಡ ಸಿದ್ದಗೊಂಡಿದ್ದು, ಪ್ರಮುಖವಾಗಿ ಬಿಜೆಪಿ, ಕಾಂಗ್ರೆಸ್, ಜನತಾದಳ(ಜಾತ್ಯತೀತ) ಮೊದಲ ಮೂರು ಪಕ್ಷಗಳ ನಡುವೆಯೇ ಹಣಾಹಣಿ. ಕಳೆದ ಐದು ಸಲದಿಂದಲೂ ಸತತವಾಗಿ ಗೆಲ್ಲುತ್ತಿರುವ ಬಿಜೆಪಿಯನ್ನು ಸೋಲಿಸಲು ಉತ್ಸುಕತೆ ತೋರಿಸುತ್ತಿವೆ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳು. ಆರಂಭದಲ್ಲಿ ಈ ಮೈತ್ರಿಕೂಟ ಸರ್ಕಾರದ ಈ ಎರಡು ಪಕ್ಷಗಳು ಒಂದಾಗಿ ಸಾಮಾನ್ಯ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವ ಮಾತುಗಳು ಕೇಳಿಬಂದವು. ಆದರೆ ಯಾರೂ ತಮ್ಮ ಅಸ್ತಿತ್ವವನ್ನು ಅಲ್ಲಿ ಕಳೆದುಕೊಳ್ಳಲು ಸಿದ್ಧರಿಲ್ಲವೆಂಬುದನ್ನು ಅಲ್ಪಕಾಲದಲ್ಲೇ ಉಭಯ ಪಕ್ಷಗಳೂ ಸ್ಪಷ್ಟಪಡಿಸಿದವು. ವಿಶೇಷವಾಗಿ ಕಾಂಗ್ರೆಸ್ ಪಕ್ಷವು ಜೆಡಿ(ಎಸ್)ನ ಬೆಂಬಲ ಬಯಸಿತು. ತಾವು ಎರಡನೇ ಸ್ಥಾನದಲ್ಲಿ ಅದರಲ್ಲಿಯೂ ಕೇವಲ23,00 ದಷ್ಟು ಮತಗಳಿಂದ ಸೋತಿದ್ದು, ಈ ಬಾರಿ ಗೆಲ್ಲುವ ನಿರೀಕ್ಷೆ ವ್ಯಕ್ತಪಡಿಸಿತು. ಆದರೆ ಜೆಡಿ(ಎಸ್) ಸಹ ತಮಗೆ ಅಸ್ತಿತ್ವ ಮುಖ್ಯ. ತನ್ನ ಕಾರ್ಯಕರ್ತರು, ಸಂಘಟನೆಯ ಸಂಪರ್ಕ-ಬಿಗಿಬಂಧ ತೀರಾ ಅಗತ್ಯ. ಮಾತ್ರವಲ್ಲ ಈ ಬಾರಿ ಆ ಕ್ಷೇತ್ರ ವ್ಯಾಪ್ತಿಯಲ್ಲಿ ಆಳಂದ, ಬಸವಕಲ್ಯಾಣ, ಹುಮ್ನಾಬಾದ್ ಮೂರು ಜನ ಶಾಸಕರು ತಮ್ಮ ಪಕ್ಷದವರೇ ಆಗಿದ್ದು, ಈಗ ಹೆಚ್ಚಿನ ಅವಕಾಶ ಇದೆ. ಜನಬೆಂಬಲವೂ ಹೆಚ್ಚಿದೆ ಎಂದು ಸ್ಪಷ್ಟಪಡಿಸಿತು. ಬಾಬು ಹೊನ್ನಾನಾಯಕ್‌ರನ್ನು ಅಭ್ಯರ್ಥಿಯನ್ನಾಗಿ ಘೋಷಿಸಿತು. ಈ ಬಳಿಕ ಬೀದರ್‌ನ ಸ್ವತಂತ್ರ ಶಾಸಕ ಜೆಡಿ(ಎಸ್) ಬೆಂಬಲಕ್ಕೆ ಇಳಿದಿರುವುದು, ಜೆಡಿ(ಎಸ್) ವಲಯದಲ್ಲಿ ಹೆಚ್ಚಿನ ಹುರುಪು ಮೂಡಿಸಿದೆ. 'ಮುತ್ತ್ಯಾ'ನ ಪ್ರಭಾವವೊಂದೇ ಬಿಜೆಪಿ ಬೆಂಬಲಕ್ಕಿದ್ದ ಪ್ರಧಾನ ಅಂಶ. ಈಗ ಅವರ ಮಗ ಬಸವರಾಜನಿಗೆ ಅಭ್ಯರ್ಥಿ ಮಾಡಿದ್ದರೂ ತಂದೆಯ ವ್ಯಕ್ತಿತ್ವ ಸಹಾಯಕ್ಕೆ ಬರುವುದಿಲ್ಲ, ಹೀಗಾಗಿ ಕೇಂದ್ರ/ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವ, ಬದಲಾದ ರಾಜಕೀಯ ಸಂದರ್ಭವೂ ತಮ್ಮ ನೆರವಿಗೆ ಬರಲಿದೆ ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರ. ಹೊಸಶಕ್ತಿಗಳು, ತಮ್ಮ ಜೊತೆಗೆ ಬರಲಿವೆಯೆಂಬುದು ನಿರೀಕ್ಷೆ. ತಂದೆಯನ್ನು ನೆನೆದು ಮಗನಿಗೆ ಮತ ನೀಡಿ ಎಂಬುದು ಬಿಜೆಪಿಯ ಕೇಳಿಕೆ.

ಅಂತೂ ಇದು ಉಪಚುನಾವಣೆ - ಕೇಂದ್ರದಲ್ಲಿ ಯಾರು ಗೆದ್ದರೂ ಸರ್ಕಾರದ ಸಂಖ್ಯಾ ಅಸ್ತಿತ್ವದ ಮೇಲೆ ಏನೂ ಅಂತಹ ಪ್ರಭಾವ ಬೀರುವುದಿಲ್ಲ, ಆದರೆ ರಾಜ್ಯದ ರಾಜಕಾರಣದ ಮೇಲೆ ಖಂಡಿತ ಪ್ರಭಾವ ಬೀರಲಿದೆ. ಮುಖ್ಯಮಂತ್ರಿಯಾಗಿರುವ ಧರಂ ಸಿಂಗ್‌ರವರು ತಮ್ಮ ನಾಯಕತ್ವಕ್ಕೆ ಒಂದು ಸವಾಲು ಎಂದೇ ಬಾವಿಸಿದ್ದು ಈ ಕ್ಷೇತ್ರ ಗೆದ್ದಲ್ಲಿ ವರ್ಚಸ್ಸು ಹೆಚ್ಚಲಿದೆ. ದಳ(ಎಸ್) ಗೆದ್ದರೂ ತಾವು ಬೆಳೆಯುತ್ತಿರುವ, ಶಕ್ತಿ ಭವಿಷ್ಯಕ್ಕೆ ಇದು ಅನುಕೂಲ ಎಂಬುದು ಬಿಂಬಿತವಾಗಲಿದೆ. ಬಿಜೆಪಿ ಗೆದ್ದರೆ ಕ್ಷೇತ್ರದಲ್ಲಿ ಮಾತ್ರವಲ್ಲ, ರಾಜ್ಯದಲ್ಲಿ-ದೇಶದಲ್ಲಿ ತಮ್ಮ ಶಕ್ತಿ ಕುಂದಿಲ್ಲ, ಅಧಿಕಾರದ ಅವಕಾಶ ತಮಗೆ ಎಂದು ಹೇಳಿಕೊಳ್ಳಲೂ ಬಹುದು. ಮತ್ತು ತನ್ನ ಉಗ್ರ ಹಿಂದುತ್ವವಾದಿ ಅಜೆಂಡಾ ಮುಂದೊತ್ತಲು ಬಳಸಿಕೊಳ್ಳಲಿದೆ. ರಾಜ್ಯದಲ್ಲಿ ಹಾಗೂ ಬೀದರ್ ಕ್ಷೇತ್ರದಲ್ಲಿ ಸತತವಾಗಿ ಕೋಮುವಾದ ಹರಡಲು, ಹಿಂದು-ಮುಸ್ಲಿಂ ವಿಭಜನೆ ತರಲು ಹಲವಾರು ಕಾರ್ಯಕ್ರಮ ಹಾಕಿಕೊಂಡು ಗಲಭೆ ಎಬ್ಬಿಸುವುದು ನಡೆಸಿಕೊಂಡೇ ಬಂದಿದೆ. ಬೀದರ್ ಕ್ಷೇತ್ರವನ್ನು ಬಿಜೆಪಿ ಐದು ಬಾರಿ ಸತತ ಗೆದ್ದರೂ ಆ ಕ್ಷೇತ್ರಕ್ಕೆ ಮಾಡಿದ್ದು ಶೂನ್ಯ. ಏನೂ ಮಾಡದಿದ್ದರೂ ತಮ್ಮ ಮಾತಿಗೆ ಮಣೆ ಹಾಕುವವರು ಇದ್ದರೆ ಸಾಕು ಎಂದೇ ಬಹುತೇಕ ಬಿಜೆಪಿ ಬೆಂಬಲಿಸಿದ ಸ್ಥಾಪಿತ ಹಿತಾಸಕ್ತಿಗಳ ನಿರ್ಧಾರ.


ಒಟ್ಟಾರೆ ಈ ಉಪಚುನಾವಣೆಯಲ್ಲಿ ಕೋಮುವಾದಿ ಬಿಜೆಪಿ ಸೋಲಲೇಬೇಕು. ಅಂತಹ ಅವಕಾಶ ಈಗ ಜನತೆಯ ಮುಂದಿದೆ. ಈ ಕ್ಷೇತ್ರದಲ್ಲಿ ಸಿಪಿಐ(ಎಂ) ಶಕ್ತಿಯೂ ಪರಿಗಣನೀಯವಾಗಿದ್ದು ಮಹತ್ವದ ಪಾತ್ರ ವಹಿಸಲಿದೆ. ನಾಮಪತ್ರ ಹಿಂತೆಗೆದುಕೊಂಡ ಬಳಿಕ ಸ್ಪರ್ಧಾ ಕಣ ನಿಖರವಾಗಲಿದೆ. ಬಿಜೆಪಿಯನ್ನು ಸೋಲಿಸುವ ಮುಂದಿನ ಬೆಳವಣಿಗೆಗಳನ್ನು ಕಾದು ನೋಡೋಣ.

ಈವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ರಾಜಕೀಯ ಅರಳು-ಮರಳು

ಎನ್.ತಿಪ್ಪಣ್ಣನವರಿಗೆ ಜೆಡಿ(ಎಸ್)ನ ಹಾಲಿ ಅಧ್ಯಕ್ಷರು ಎಂಬುದು ಮರೆತು ಹೋದಂತಿದೆ. ಇನ್ನೂ ಜೆಡಿ(ಯು)ನಲ್ಲೇ ಇರುವ ಗುಂಗು ಆವರಿಸಿಕೊಂಡಿರಬೇಕು. ಮೊನ್ನೆ ಬೀದರ್‌ನಲ್ಲಿ ಜೆಡಿ(ಎಸ್) ನ ಅಭ್ಯರ್ಥಿ ನಾಮಪತ್ರ ಸಲ್ಲಿಕೆಯ ಸಂದರ್ಭದಲ್ಲಿ ಮಾಧ್ಯಮಗಳೆದುರು ಕಾಂಗ್ರೆಸ್‌ಗೆ ತಮ್ಮ ಕಡು




ವಿರೋಧವನ್ನೇನೋ ಪ್ರಕಟಿಸಿದರು. ಆದರೆ ಆ ಭರದಲ್ಲಿ ಒಂದು ವೇಳೆ ಅಂತಹ ಸಂದರ್ಭ ಬಂದರೆ ನಾವು ಬಿಜೆಪಿಗೆ ಮತ ಹಾಕುತ್ತೇವೆಯ ಹೊರತು ಕಾಂಗ್ರೆಸ್‌ಗೆ ಬೆಂಬಲಿಸುವುದಿಲ್ಲ ಎಂದು ಘೋಷಿಸಿಯೇ ಬಿಟ್ಟರು. ಇತ್ತ 'ಕೋಮುವಾದಿ ಬಿಜೆಪಿ ಅತ್ಯಂತ ಅಪಾಯಕಾರಿ, ಅಂತಹ ಶಕ್ತಿಗಳನ್ನು ದೂರವಿಡುವುದೇ ತಮ್ಮ ಪ್ರಧಾನ ಗುರಿ, ಅದಕ್ಕಂದೇ ಅನಿವಾರ್ಯವಾಗಿ ಕಾಂಗ್ರೆಸ್ ಜೊತೆ ಸೇರಿ ಸರ್ಕಾರ ರಚಿಸಿದ್ದೇವೆ' ಎಂದು ರಾಷ್ಟ್ರಾಧ್ಯಕ್ಷರಾದ ದೇವೇಗೌಡ, ಸಿದ್ದರಾಮಯ್ಯ ಮುಂತಾದ ಮುಖಂಡರು ಹೇಳುತ್ತಲೇ ಬರುತ್ತಿದ್ದಾರೆ. ಮೈತ್ರಿಕೂಟದ ಸರ್ಕಾರ ಅಧಿಕಾರಕ್ಕೆ ಯಾಕೆ ಬಂತು ಎಂಬುದು ಹಿರಿಯ ನಾಯಕ ತಿಪ್ಪಣ್ಣನವರಿಗೆ ಗೊತ್ತಿಲ್ಲವೇ? ಅಥವಾ ನಿನ್ನೆಮೊನ್ನೆಯವರೆಗೂ ಬಿಜೆಪಿಯ ಬಾಲಂಗೋಚಿಯಾಗಿದ್ದ ಜೆಡಿ(ಯು) ಪಕ್ಷದಿಂದ ಮಾನಸಿಕವಾಗಿ ಅವರಿನ್ನೂ ಹೊರಬಂದಿಲ್ಲವೇ - ಅಥವಾ ಜೆಡಿ(ಎಸ್) ನಲ್ಲಿರುವುದೇ ಮರೆತು ಹೋಗಿದೆಯೇ? 'ಅಧಿಕಾರದಲ್ಲಿರುವುದೇ ಸತ್ಯ, ಅದಕ್ಕೆ ಇದಕ್ಕೆ ಎಂಬೋದು ಕೇವಲ ನಿಮಿತ್ತ' ಎಂಬ ಸಾಫ್ ಸೀದಾ ಸಜ್ಜನಿಕೆಯೋ! 'ಇದು ಬರೀ ಅರಳುಮರಳಲ್ಲ ಸ್ವಾಮಿ ರಾಜಕೀಯ ಅರಳು-ಮರಳು ಎನ್ನೋಣವೇ?

ಬಿಜೆಪಿಯೊಳಗಿನ ಗುದ್ದಾಟವೂ ಮತ್ತು ಉಮಾಭಾರತಿ ಸನ್ಯಾಸತ್ವವೂ...

ತುರಂಗಾವಾಸದ ಬಳಿಕ 'ತಿರಂಗಾ ಯಾತ್ರೆ' ನಡೆಸುತ್ತಾ ತಮ್ಮೂರು ತಲುಪು ಹಾದಿಯಲ್ಲಿರುವ ಉಮಾ ಭಾರತಿಯವರಲ್ಲಿ ಇದ್ದಕ್ಕಿದ್ದಂತೆ ವೈರಾಗ್ಯದ ಭಾವವೊಂದು ಪ್ರಕಟಗೊಂಡುಬಿಟ್ಟಿದೆ. ಝುಂಡಾವಿನ್ನೂ ಜಲಿಯನ್ ವಾಲಾಬಾಗ್ ತಲುಪಿಲ್ಲ, ಅಷ್ಟರೊಳಗೇ ಖಾವೀ ಧಾರಣೆ, ಆದರೆ ಸಾರ್ವಜನಿಕ ಲೌಕಿಕ ವ್ಯವಹಾರಗಳಲ್ಲಿ ಒಂದಿಷ್ಟು ಆಸಕ್ತಿ ಕಳೆದುಕೊಳ್ಳದ ಸನ್ಯಾಸಿನಿ ರಾಜಕಾರಣಿ ಉಮಾಭಾರತಿಯವರು "ಈ ಯಾತ್ರೆ ಮುಗಿಯುತ್ತಿದ್ದಂತೆ ರಾಜಕೀಯ ಸನ್ಯಾಸ ಸ್ವೀಕರಿಸುತ್ತೇನೆ' ಎಂದು ತಮ್ಮ ಸನ್ಯಾಸತ್ವದ ವಿಸ್ತರಣೆಯನ್ನು ಪ್ರಕಟಿಸಿಯೇ ಬಿಟ್ಟರು! ಈ ಮಾತುಗಳ ತರಂಗಗಳು ಬಿಜೆಪಿ ನಾಯಕರನ್ನು ತಟ್ಟಿದ ಕೂಡಲೇ ಅನುಸಂಧಾನಕ್ಕೆ ಆಹ್ವಾನವೂ ಹೋಯಿತು. ಅಲ್ಲಿಂದ ಹೊರಬಂದ ಉಮಾ ಧ್ವನಿವರ್ಧಕದ ಪ್ಲೇಟ್ ಬದಲಾಯಿಸಿದರು. 'ನಾನು ಹೇಳಿದ್ದು ಹಾಗಲ್ಲ, 2 ವರ್ಷ ಸಕ್ರಿಯ ರಾಜಕೀಯದಿಂದ ಬಿಡುಗಡೆ ಪಡೆದು ಭಾರತ ಪರಿಕ್ರಮಾ ಯಾತ್ರೆ' ಮಾಡುತ್ತೇನೆ. ಅದಕ್ಕಾಗಿ ನಾಯಕರು ನನ್ನನ್ನು ಬಿಡುಗಡೆ ಮಾಡಬೇಕು ಎಂದು ಕೋರಿದ್ದೆ' ಎಂದರು.

ಬಿಜೆಪಿಯ ಆಂತರಿಕ ವ್ಯವಹಾರಗಳನ್ನು ಹತ್ತಿರದಿಂದ ಬಲ್ಲವರು ಈ ಮಾತನ್ನು ನಂಬಿಲ್ಲ. ಅಧಿಕಾರ ಕಳೆದುಕೊಂಡು ಹತಾಶೆ ಅನುಭವಿಸುತ್ತಾ, ಜನಾದೇಶವನ್ನು ಧಿಕ್ಕರಿಸುತ್ತಾ, ದುರ್ಬಲ ಮನಸ್ಸಿನಿಂದ ಆಕ್ರಮಣಕಾರಿಯಾಗಿ ಚೀರಾಡುತ್ತಾ ಇರುವ ಬಿಜೆಪಿಯೊಳಗೆ ಪ್ರಮುಖ ನಾಯಕರಲ್ಲೇ ತೀವ್ರವಾದ ಗುದ್ದಾಟಗಳು ನಡೆದಿರುವುದು ಗುಟ್ಟಿನ ವಿಷಯವೇನಲ್ಲ. ಈದ್ಗಾ ಪ್ರಕರಣದ ಹೊದಿಕೆಯಲ್ಲೇ ಝುಂಡಾ ಹಿಡಿಸಿ, ಮುಖ್ಯಮಂತ್ರಿ ಸ್ಥಾನ ಪದಚ್ಯುತಿಯಾದ ಬಳಿಕ ದೇಶ ಸುತ್ತುವ ಕಾರ್ಯಕ್ರಮವನ್ನು ಹಾಕಿಕೊಟ್ಟಿದ್ದು ಉಮಾಗೆ ಅರಿವಿಲ್ಲದಿಲ್ಲ. ಇಲ್ಲೂ ಮುಸುಕಿನ ಗುದ್ದಾಟಕ್ಕೆ ದೇಶಪ್ರೇಮದ ಸೋಗು.



ಉಮಾಭಾರತಿ :ವೈರಾಗ್ಯದ ಹಲವು ಮುಖಗಳು

ಬೇಡವಾದ ಅತಿಥಿಯನ್ನು ಬರಮಾಡಿಕೊಳ್ಳುವ ಶುಭವಾರ್ತೆ

ಹಾದಿಬೀದಿ ರಂಪಾಟ ಮತ್ತು ಕಾಂಗ್ರೆಸ್‌ನ ಚಂಚಲತೆ, ರಾಜೀತನದ ದುರ್ಲಾಭ ಹೊಡೆದು ಈದ್ಗಾ ಮೈದಾನದ ಕ್ರಿಮಿನಲ್ ಕೇಸ್‌ನಿಂದ ಪಾರಾ(ಪರಾರಿ)ದೆಯೆಂದುಕೊಂಡಿದ್ದ ಉಮಾಭಾರತಿ ಮತ್ತಿತರರಿಗೆ ಬೇಜಾರಾಗುವ, ಧರ್ಮನಿರಪೇಕ್ಷತೆ, ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನಂಬಿಕೆ ಇರುವವರಿಗೆ ಆಶಾದಾಯಕವಾದ ಸುದ್ದಿಯೊಂದು ಹೊರಬಿದ್ದಿದೆ. ಸರ್ಕಾರ ಮೊಕದ್ದಮೆ ಹಿಂತೆಗೆದುಕೊಂಡಿದ್ದರಿಂದ ಬಚಾವಾದೆ ಎಂದು ಹಾರುತ್ತಿದ್ದ ಉಮಾ ಭಾರತಿ ಮತ್ತೇ ಹುಬ್ಬಳ್ಳಿಗೆ ವಾಪಸಾಗಲೇಬೇಕಿದೆ. ಇವರ ಮೇಲಿದ್ದ ಮೊಕದ್ದಮೆಯನ್ನು ಜೆಎಂಎಫ್‌ಸಿ ನ್ಯಾಯಾಲಯದಿಂದ ವಾಪಾಸು ತೆಗೆದುದನ್ನು ಪ್ರಶ್ನಿಸಿ ಪತ್ರಕರ್ತೆ ಗೌರಿ ಲಂಕೇಶ್, ಬಸವರಾಜ ಸೂಳಿಭಾವಿ ಮುಂತಾದವರು ಸಲ್ಲಿಸಿದ್ದ ಅರ್ಜಿಯನ್ನು ಜಿಲ್ಲಾ ಸತ್ರ ನ್ಯಾಯಾಲಯ ವಿಚಾರಣೆಗೆ ಅಂಗೀಕರಿಸಿ, ಭಾರತಿ ಒಳಗೊಂಡು 19 ಜನರಿಗೆ ನೋಟೀಸ್ ಜಾರಿ ಮಾಡಿದೆ. ಅಕ್ಟೋಬರ್ 14 ರಂದು ನ್ಯಾಯಾಲಯಕ್ಕೆ ಹಾಜರಾಗಲು ನಿರ್ದೇಶಿಸಿದೆ. ಆದ್ದರಿಂದ ಉಮಾಭಾರತಿ ಬಾವುಟದ ಕಂಬ ಸುತ್ತಬೇಕಿದೆ, ರೈಲು-ಜೈಲುಕಂಬಿ ಹಿಡಿಯುವ ರಿಪೀಟ್ ಶೋ ಆರಂಭ. ಬೇಡವಾದ ಈ ಅತಿಥಿಗೆ ಮಾಡಿದ ಅನ್ಯಾಯಕ್ಕೆ ಶಿಕ್ಷೆ ಸಿಗಲು ನಾಡಿಗೆ ನ್ಯಾಯ ದೊರೆವ ನಿರೀಕ್ಷೆಯಲ್ಲಿ ಮತ್ತೆ ಸ್ವಾಗತ.

ಪೀಠ : ಪ್ರಾಮಾಣಿಕ ಯತ್ನ ಅಗತ್ಯ

ಉತ್ತರ ಕರ್ನಾಟಕದಲ್ಲಿ ಇನ್ನೊಂದು ನ್ಯಾಯಪೀಠ ಅಸಾಧ್ಯ ಎಂದಿದ್ದ ಮುಖ್ಯನ್ಯಾಯಮೂರ್ತಿಗಳ ಅಭಿಪ್ರಾಯವನ್ನು ಪ್ರತಿಭಟಿಸಿ ಚಳುವಳಿ ನಡೆದದ್ದು, ಪ್ರತ್ಯೇಕರಾಜ್ಯ ಕೇಳಿದ್ದು ಆಯ್ತು. ಪೀಠದ ಪ್ರಶ್ನೆಯನ್ನು ಪರಿಗಣಿಸುವಂತೆ ಮುಖ್ಯಮಂತ್ರಿ ಧರಂಸಿಂಗ್ ರವರ ಜೊತೆ ಆ ಭಾಗದ ಪ್ರತಿನಿಧಿಗಳ ನಿಯೋಗ ಮು.ನ್ಯಾ. ಜೈನ್‌ರನ್ನು ಭೇಟಿ ಮಾಡಿ ಚರ್ಚಿಸಿದ ಬಳಿಕ ಮೂಲಭೂತ ಸೌಲಭ್ಯಒದಗಿಸಿದಲ್ಲಿ ಪೀಠ ಕೊಡಲು ವಿರೋಧವಿಲ್ಲ ಎಂದು ಹೇಳಿರುವುದು ವರದಿಯಾಗಿದೆ. ಇಂತಹ ಪೀಠ ಸ್ಥಾಪನೆ ಪ್ರಕ್ರಿಯೆ ದೀರ್ಘ ಪ್ರಕ್ರಿಯೆ ಅವಲಂಬಿಸಿದ್ದು, ಆದಷ್ಟು ಶೀಘ್ರ ಸರ್ಕೀಟ್ ಪೀಠವನ್ನು ಒದಗಿಸುವ ಇಂಗಿತ ಹೊರಬಂದಿದೆ. ಹೈಕೋರ್ಟ್ ಪೀಠ ಎಲ್ಲಿ ಸ್ಥಾಪಿಸಬೇಕೆಂಬ ಬಗ್ಗೆ ಎಲ್ಲರಲ್ಲಿಯೂ ಪೂರ್ಣ ಸಹಮತವಿಲ್ಲ. ಈ ಸರ್ಕೀಟ್ ಪೀಠದ ವಿಷಯದಲ್ಲಿ ಹಾಗಾಗದಿರಲಿ. ಬೆಳಗಾಂ, ಗುಲ್ಬರ್ಗಾ ವಿಭಾಗಗಳ ಕಕ್ಷಿದಾರರಿಗೆ ಕೊಂಚ ನೆರವಾಗುವಂತೆ, ಹೈಕೋರ್ಟ್‌ನ ಇನ್ನೊಂದು ಪೀಠ ಶೀಘ್ರ ಸ್ಥಾಪಿತವಾಗುವಂತೆ ಕ್ರಮ ವಹಿಸುವುದು ಅಗತ್ಯ. ಆ ಪ್ರದೇಶದ ಜನತೆಯ ಸಮಸ್ಯೆಗಳನ್ನು, ಕೇಳಿಕೆಗಳನ್ನು ಕೇವಲ ಭಾವನಾತ್ಮಕ ಎನ್ನದೇ ಆಳವಾಗಿ ಪರಿಶೀಲಿಸಿ ಕ್ರಮ ವಹಿಸಲು ಸರ್ಕಾರದ ಪ್ರಾಮಾಣಿಕ ಯತ್ನ ಅಗತ್ಯ.

ಪುಟ 4 ನೋಡಿ

ಯೋಜನಾ ಆಯೋಗದಲ್ಲಿ ವಿದೇಶಿ ಸಲಹೆಗಾರರು?

ಯೋಜನಾ ಆಯೋಗದ ಸಲಹಾ ಸಮಿತಿಗಳಲ್ಲಿ ವಿದೇಶಿ ತಜ್ಞರನ್ನು ಸೇರಿಸಿಕೊಳ್ಳುವ ವಿಷಯಕ್ಕೆ ಸಂಬಂಧಿಸಿ ಮಾಧ್ಯಮದ ಒಂದು ವಿಭಾಗ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲೆ ಗೂಬೆ ಕೂರಿಸುವ ಪ್ರಯತ್ನಗಳನ್ನು ನಡೆಸುತ್ತಿವೆ. ನವ ಉದಾರವಾದಿ ಬಾಲಬಡುಕರು ಮತ್ತು ಜಾಗತೀಕರಣದ ನಾಯಕರುಗಳು ಸಿಪಿಐ(ಎಂ) ಪಕ್ಷದ ಮೇಲೆ 'ಇಬ್ಬಂದಿಗಳು', 'ಅಷಾಢಭೂತಿತನ' ಹೀಗೆ ಆರೋಪಗಳ ಸರಮಾಲೆಯನ್ನು ಹೆಣೆಯುತ್ತಿದ್ದಾರೆ. ಇವೆಲ್ಲವನ್ನೂ ಪರಿಶೀಲಿಸುವ ಅಗತ್ಯವಿದೆ.

ಈ ವಿಷಯ ಮತ್ತು ವಿದೇಶಿ ನೇರ ಹೂಡಿಕೆ, ವಿಮಾನ ನಿಲ್ದಾಣಗಳ ಖಾಸಗೀಕರಣ ಇಂತಹ ಅನೇಕ ವಿಷಯಗಳನ್ನು ಎಡಪಕ್ಷಗಳು ಸೃಷ್ಟಿಸಿದ ಗೊಂದಲಗಳು ಎನ್ನುವ ರೀತಿಯಲ್ಲಿ ಮಾಧ್ಯಮಗಳು ತಮ್ಮ ತಲೆಬರಹಗಳಲ್ಲಿ ಬಿಂಬಿಸುತ್ತಿವೆ. ಯುಪಿಎ ಸರ್ಕಾರದ ಬಹಿರಂಗ ಏಕಮುಖೀಯ ಹೇಳಿಕೆಗಳಿಗೆ ಎಡಪಕ್ಷಗಳು ಪ್ರತಿಕ್ರಿಯಿಸಿವೆ.

ವಿಶ್ವಬ್ಯಾಂಕ್, ಏಶಿಯಾ ಅಭಿವೃದ್ಧಿ ಬ್ಯಾಂಕ್, ಮೆಕೆನ್ಸಿ ಮತ್ತಿತರೆ ವಿದೇಶಿ ಸಂಸ್ಥೆಗಳ ಪ್ರತಿನಿಧಿಗಳನ್ನು ಯೋಜನಾ ಆಯೋಗದಲ್ಲಿ ಸೇರಿಸಿಕೊಳ್ಳುವ ಆಯೋಗದ ಏಕಪಕ್ಷೀಯ ತೀರ್ಮಾನದಿಂದ ಈ ಎಲ್ಲವೂ ಆರಂಭವಾದವು. ಸಹಜವಾಗಿ ಬಹಳಷ್ಟು ಭಾರತದ ರಾಷ್ಟ್ರಪ್ರೇಮಿಗಳಿಗೆ ಇದು ಆಘಾತ ಮತ್ತು ಗೊಂದಲವನ್ನುಂಟುಮಾಡಿತು. **ಯೋಜನಾ ಆಯೋಗವು ಭಾರತದ ಯೋಜಿತ ಆರ್ಥಿಕ ಅಭಿವೃದ್ಧಿಯನ್ನು ಪರಿಶೀಲಿಸುವ, ಉಸ್ತುವಾರಿ ನೋಡಿಕೊಳ್ಳುವ ಅಧಿಕಾರವಿರುವ ಪ್ರಭುತ್ವದ ಸಾರ್ವಭೌಮ ಅಂಗ. ಇಂತಹದರಲ್ಲಿ ವಿದೇಶಿ ತಜ್ಞರನ್ನು ಸೇರಿಸಿಕೊಳ್ಳುವುದು ಸಹಜವಾಗೇ ಆತಂಕವನ್ನುಂಟುಮಾಡುತ್ತದೆ.** ಈ ಕೆಲಸವನ್ನು ಮಾಡಬೇಕಿರುವುದು ಭಾರತ ಮತ್ತದರ ಪ್ರಭುತ್ವ.

ಯೋಜಿತ ಆರ್ಥಿಕ ಬೆಳವಣಿಗೆ ವಿರೋಧವಿರುವ ದೃಷ್ಟಿಕೋನ ಹೊಂದಿರುವ ವಿದೇಶಿ ತಜ್ಞರನ್ನು ನೇಮಿಸಿಕೊಳ್ಳುವುದರಿಂದ ಈ ಯೋಜಿತ ಬೆಳವಣಿಗೆಯ ಉದ್ದೇಶವೇ ತಿರುವು ಮುರುವಾಗುತ್ತದೆ. ಜಾಗತೀಕರಣದ ಅಧ್ವೈರ್ಯರು ಮಾರುಕಟ್ಟೆಯನ್ನು ದೇವರೆಂದು ನಂಬಿ ಯೋಜಿತ ಆರ್ಥಿಕ ಬೆಳವಣಿಗೆಗೆ ನಿರಂತರವಾಗಿ ವಿರುದ್ಧ ಕೆಲಸ ಮಾಡಿದ್ದಾರೆ.

ಈ ತಜ್ಞರು ಕೇವಲ ಸಮಾಲೋಚನೆ ಗಿರುವುದರಿಂದ ಅವರೊಡನೆ ಸಮಾಲೋಚನೆ ನಡೆಸುವುದರಲ್ಲಿ ಏನು ತಪ್ಪಿದೆ ಎಂದು ಸ್ಥಾಪಿತ ಹಿತಾಸಕ್ತಿಗಳು ಮತ್ತು ಮಾಧ್ಯಮದ ಒಂದು ವಿಭಾಗ ಕೇಳುತ್ತಿದೆ. ಆದರೆ ಸಲಹೆಗಳನ್ನು ಮಾತ್ರ ನೀಡುವುದು ಇವರ ಕೆಲಸವಲ್ಲ ಎಂಬುದನ್ನು ಯೋಜನಾ ಆಯೋಗದ ವಿವಿಧ ಸುತ್ತೋಲೆಯೇ ತಿಳಿಸಿವೆ. ಅಂದರೆ ಅವರಿಗೆ ಸರ್ಕಾರದ ಕಡತಗಳನ್ನು ನೋಡುವ, ಪರಿಶೀಲಿಸುವ ಅಧಿಕಾರವೂ ಇದೆ.

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಅವರೊಡನೆ ಕೆಲಸ ಮಾಡುತ್ತಿರುವಾಗ, ಅವರನ್ನು ಸೇರಿಸಿಕೊಳ್ಳುವುದಕ್ಕೆ ಸಿಪಿಐ(ಎಂ) ವಿರೋಧಿಸುತ್ತಿರುವುದು ದ್ವಿಮುಖ ನೀತಿ ಎಂದು ಟೀಕಿಸಲಾಗುತ್ತಿದೆ. ಆ ಸಂಸ್ಥೆಗಳೊಡನೆ ವ್ಯವಹಾರ ಮಾಡಿ, ಸಲಹೆ ಪಡೆಯುವುದೇ ಬೇರೆ, ಅವರನ್ನು ಸಲಹಾ ಗುಂಪುಗಳಲ್ಲಿ ಸೇರಿಸಿ ಸರ್ಕಾರಿ ದಾಖಲೆಗಳನ್ನು ನೋಡಲು ಅವಕಾಶ ಕೊಡುವುದೇ ಬೇರೆ. ಅವರೊಡನೆ ಚರ್ಚಿಸಲಿ, ಸಲಹೆ ಪಡೆಯಲಿ. ಆದರೆ ಭಾರತದ ಸಾರ್ವಭೌಮ ಪ್ರಭುತ್ವದ ಭಾಗವಾಗಿ ಕೆಲಸ ಮಾಡಿಸುವುದು ಸಾಧ್ಯವಾಗಲಾರದು.

ಎಲ್ಲಾ ಜನರಿಗೂ ತಿಳಿದಿರುವಂತೆ ಈ ಸಂಸ್ಥೆಗಳಿಗೆ ತಮ್ಮದೇ ಆದ ಅಜೆಂಡಾಗಳಿವೆ. ಅವು ಯಾವುದೇ ಕಾರಣಕ್ಕೂ ಭಾರತದ ಹಿತಕ್ಕೆ ಸರಿಹೊಂದಲಾರವು. ನಮ್ಮ ಆರ್ಥಿಕ ಸಾರ್ವಭೌಮತೆಗೆ ತೀವ್ರ ವಿರುದ್ಧವಾದವು.

ಅಕ್ಟೋಬರ್ 8, 2004 ರಂದು ರೈತರ ರಾಜ್ಯಮಟ್ಟದ ವಿಧಾನಸೌಧ ಚಲೋ

ಭೂಮಿ, ರೇಷನ್ ಕಾರ್ಡ್, ಕೃಷಿ ಸಾಲ, ವಿದ್ಯುತ್ ಮತ್ತಿತರೆ ಕೃಷಿ ಪ್ರಶ್ನೆಗಳ ರೈತರ ಪರ ಇತ್ಯರ್ಥಕ್ಕಾಗಿ ಆಗ್ರಹಿಸಿ ಅಕ್ಟೋಬರ್ 8, 2004 ರ ಶುಕ್ರವಾರದಂದು ರಾಜ್ಯಮಟ್ಟದ ರೈತರ ಮತ್ತು ಕೂಲಿಕಾರರ ಬೃಹತ್ 'ವಿಧಾನಸೌಧ ಚಲೋ' ಹೋರಾಟವನ್ನು ಸಂಘಟಿಸುತ್ತಿದ್ದೇವೆ.

ಕಳೆದ 13 ವರ್ಷಗಳಿಂದ ಅನುಸರಿಸಲಾಗುತ್ತಿರುವ ವಿಶ್ವಬ್ಯಾಂಕ್ ಪ್ರೇರಿತ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ನೀತಿಗಳು, ದೇಶದ ಕೃಷಿ ಬಿಕ್ಕಟ್ಟನ್ನು ಮತ್ತಷ್ಟು ತೀವ್ರಗೊಳಿಸಿದೆ. 'ಅನ್ನದಾತ' ನಾದ ರೈತರು ಆತ್ಮಹತ್ಯೆಗಳಿಗೆ ಮೊರೆ ಹೋಗುತ್ತಿದ್ದಾರೆ, ಕೂಲಿಕಾರರು ಹಸಿವಿನಿಂದ ಸಾವನ್ನಪ್ಪುತ್ತಿದ್ದಾರೆ. ಬದುಕಿರುವವರ ನೋವುಗಳು ಹೇಳತೀರದು.

ಸಾಮಾನ್ಯ ಜನರ ಈ ಸಾವು, ನೋವುಗಳಿಗೆ ಅಲಭ್ಯವಾಗಿರುವ ಬ್ಯಾಂಕ್ ಸಾಲ, ವಿಪರೀತ ಬಡ್ಡಿಯ ಖಾಸಗಿ ಸಾಲದ ಕಾಟ, ಲಕ್ಷಾಂತರ ಕುಟುಂಬಗಳಿಗೆ ತನ್ನದು ಎಂದು ಹೇಳಿಕೊಳ್ಳಲು ಇಲ್ಲದ ತುಂಡು ಭೂಮಿಯ ಸಮಸ್ಯೆ, ಬಡವರಿಗೆ ದೂರವಾಗಿರುವ ರೇಷನ್ ವ್ಯವಸ್ಥೆ, ಖಾಸಗೀಕರಣಗೊಂಡು ದುಬಾರಿಯಾಗಿ ರೈತ, ಬಡ ಕೂಲಿಕಾರರಿಗೆ ಎಟುಕದ ವಿದ್ಯುತ್ ಇತ್ಯಾದಿ ಹಲವು ಸಮಸ್ಯೆಗಳು ಕಾರಣವಾಗಿವೆ.

ಹೊಸ ಭರವಸೆಗಳೊಂದಿಗೆ ಹೊಸದಾಗಿ ಅಧಿಕಾರಕ್ಕೆ ಬಂದಿರುವ ಸರ್ಕಾರಗಳು, ರೈತ-ಕೂಲಿಕಾರರ ಈ ಹತ್ತಾರು ಜ್ವಲಂತ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದು ಆಗ್ರಹಿಸಲು ನಡೆಯುತ್ತಿರುವ ಈ ಬೃಹತ್ 'ವಿಧಾನಸೌಧ ಚಲೋ' ಹೋರಾಟದಲ್ಲಿ ರೈತ ಮತ್ತು ಕೂಲಿಕಾರರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಗಳು ವಿನಂತಿಸುತ್ತವೆ.

ಗಾಂಧೀಜಿಯವರೊಂದಿಗೆ......

ಪುಟ 2 ರಿಂದ

ಸಮನ್ವಯ ತರಲು ವಿಫಲರಾಗಿದದಾರೆ ಎಂದೂ ಅವರು ಹೇಳಿದ್ದರು. ನೆಹರೂ ಅವರ ಪ್ರಕಾರ ಒಂದು ವ್ಯವಸ್ಥಿತ ಅರ್ಥವ್ಯವಸ್ಥೆ ಇಲ್ಲದೆ ಹಿಂದುಳಿದಿರುವ ಭಾರತವನ್ನು ಸುಧಾರಿಸಬೇಕಾದರೆ ರಾಜ್ಯದ ನಿಯಂತ್ರಣದಲ್ಲಿ ಕೈಗಾರಿಕಾ ಯೋಜನೆಯನ್ನು ರೂಪಿಸುವ ಅಗತ್ಯವಿತ್ತು. ಎರಡು ಹೊತ್ತಿನ ಕೂಳಿಗ ಗತಿಯಿಲ್ಲದ ಸಹಸ್ರಾರು ಜನರಿಗೆ ಸರಿಯಾದ ರೀತಿಯಲ್ಲಿ ಆಹಾರ ಒದಗಿಸಬೇಕಾದರೆ ಆದಷ್ಟು ಬೇಗನೆ, ಪೂರ್ಣಪ್ರಮಾಣದಲ್ಲಿ ವೈಜ್ಞಾನಿಕ ಕೃಷಿಯನ್ನು ಜಾರಿಗೆ ತುರುವುದು ಅಗತ್ಯ ಎಂದು ನೆಹರೂ ಹೇಳುತ್ತಿದ್ದರು.

'ನೀವು ವ್ಯವಸಾಯದಲ್ಲಿ ವಿಜ್ಞಾನ ಮತ್ತು ಯಂತ್ರಗಳ ಬಳಕೆಯನ್ನು ವೈಯಕ್ತಿಕವಾಗಿ ವಿರೋಧಿಸುತ್ತೀರಾ' ಎಂದು ಗಾಂಧಿಯವರನ್ನದು ಕೇಳಿದೆ. ಇದಕ್ಕೆ 'ಹೌದು' ಎಂದು ಹೇಳಿದ ಗಾಂಧಿಯವರು 'ಟ್ರಾಕ್ಟರ್‌ನ ಬಳಕೆ ಮನುಷ್ಯನ ಶ್ರಮಕ್ಕೆ ಬದಲಿಯಾಗಿ ಬರುತ್ತದೆ. ಇದರಿಂದ ಮನುಷ್ಯನ ಕೈಗಳಿಗೆ ಕೆಲಸವಿಲ್ಲದಂತಾಗುತ್ತದೆ. ರಾಜ್ಯದ ನಿಯಂತ್ರಣದಲ್ಲಿರುವ ಅಥವಾ ರಾಷ್ಟ್ರೀಕೃತ ಕೈಗಾರಿಕೆಗಳಿಂದ ದೇಶವು ಗುಲಾಮರ ರಾಷ್ಟ್ರವಾಗುತ್ತದೆ' ಎಂದರು. ಭಾರತದ ಬಡತನ ಹಾಗೂ ಹಿಂದುಳಿದಿರುವಿಕೆಯ ನಿವಾರಣೆ ಹೇಗೆ ಸಾಧ್ಯ ಎಂಬ ಪ್ರಶ್ನೆಗೆ 'ಜನ ಪರಿಶ್ರಮದಿಂದ, ಮಿದುಳನ್ನು ಬಳಸಿ ಕೆಲಸಮಾಡಬೇಕು. ಕೈ ಕಸುಬುಗಳಿಂದ ಭಾರತವು, ಅಮೆರಿಕಾವಷ್ಟೇ ಅಲ್ಲ ಜಗತ್ತಿನ ಬೇರಾವುದೇ ದೇಶಕ್ಕಿಂತ ಸಂತೋಷಭರಿತ ದೇಶವಾಗಬಹುದು' ಎಂದು ನನ್ನತ್ತ ನೋಡಿ ನಕ್ಕರು. 'ಆದರ ಅದಲ್ಲ ಬರೀ ಬಡಾಯಿ ಅಷ್ಟೆ' ಎಂದರು.

'ಇಲ್ಲ, ಇದು ಬಡಾಯಿಯ ಮಾತಲ್ಲ. ಈಚಿನ ದಿನಗಳಲ್ಲಿ ಅಮೆರಿಕ ಸಂಪೂರ್ಣ ಸಂತೋಷ ಭರಿತವೇನೂ ಆಗಿಲ್ಲ' ಎಂದೆ. ಅಮೆರಿಕಾ ವಿಷಯ ಬಂದ ಕೂಡಲೇ ನಾನು ಗಾಂಧಿಯವರೊಂದಿಗೆ ಬಹಳ ದಿನಗಳಿಂದಲೂ ಚರ್ಚಿಸಬೇಕು ಅಂದುಕೊಂಡಿದ್ದ ವಿಷಯವನ್ನು ಪ್ರಸ್ತಾಪಿಸಿದೆ. ಪರಮಾಣು ಯುದ್ಧಭೀತಿಯ ಬಗ್ಗೆ ಪ್ರಸ್ತಾಪಿಸಿದೆ.

ಭಾರತದ ಸಹಸ್ರಾರು ಮಂದಿ ಬಾಪು, ತಂದೆ ಎಂದು ಒಪ್ಪಿಕೊಂಡಿರುವ ಈ ವ್ಯಕ್ತಿಯು ನಿಸ್ಸಂದೇಹವಾಗಿಯೂ ಒಬ್ಬ ಮಹಾಪುರುಷ ಎಂದು ನನಗೆ ಮನವರಿಕೆಯಾಗಲು ಸಾಕಷ್ಟು ಕಾಲ ಹಿಡಿಯಿತು. ನನ್ನಂತಹ ಅಮೆರಿಕನ್ ಪ್ರಜೆಗೆ ಯಂತ್ರ ಯುಗ ಕುರಿತ ಅವರ ಪ್ರಾಚೀನ ಆಲೋಚನಾಧಾರೆ ಒಪ್ಪಿತವಾಗುವುದು ಕಷ್ಟ. ಯಂತ್ರವನ್ನು ನಿಜಕ್ಕೂ ಅದ್ಭುತ ಸೃಷ್ಟಿ ಎಂದು ಒಪ್ಪಿಕೊಂಡಿರುವ ನನಗೆ ಗಾಂಧಿಯವರ ವಿಚಾರಗಳು ಈಗಲೂ ಒಪ್ಪಿಗೆಯಾಗುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಭಾರತದ ಒಂದು ಮಹತ್ವದ ಸಂದರ್ಭವನ್ನು ನಾನು ನೋಡಿದ್ದೆ. ಧಾರ್ಮಿಕ ವಿದ್ವೇಷದ ಬೆಂಕಿಯನ್ನು ತಣಿಸಲು ಗಾಂಧಿ ತಮ್ಮ ಜೀವವನ್ನೇ ಪಣವಾಗಿಟ್ಟಿದ್ದರು. ನೆಹರೂ ಹೇಳಿದಂತೆ ಮುಳುಗಿಹೋಗುತ್ತಿರುವ ಜಗತ್ತಿನಲ್ಲಿ ತಮ್ಮ ಉದ್ದೇಶಸಾಧನೆಗೆ ಬದ್ಧವಾಗಿದ್ದ ಗಾಂಧಿಯವರು ಒಂದು ಅಚಲಶಿಲೆಯಂತಿದ್ದರು. ಸತ್ಯದ ಬೆಳಕನ್ನು ತೋರಿಸಿದ್ದರು.

ಅಮೆರಿಕಾ ಆಟಂಬಾಂಬ್ ತಯಾರಿಕೆಯನ್ನು ನಿಲ್ಲಿಸಬೇಕು?' ಎಂದು ಗಾಂಧಿಯನ್ನು ಕೇಳಿದೆ. ಅವರು ಒಂದಿಷ್ಟೂ ಹಿಂಜರಿಕೆಯಿಲ್ಲದೆ 'ಹೌದು ನಿಲ್ಲಿಸಬೇಕು' ಎಂದು ಹೇಳಿದರು.

'ಆಟಂಬಾಂಬನ್ನೂ ನೀವು ಅಹಿಂಸೆಯಿಂದಲೇ ಎದುರಿಸುತ್ತೀರಾ?' ಎಂದು ನಾನು ಕೇಳಿದೆ. 'ಹೌದು, ಅದಕ್ಕೆ ನಾನು ಹೇಗೆ ಉತ್ತರಿಸಲಿ' ಎನ್ನುತ್ತ ವೇಗವಾಗಿ ಚರಕಾ ತಿರುಗಿಸಿದರು ಗಾಂಧಿ. ಅನಂತರ ಹೇಳಿದರು 'ನಾನು ಅದನ್ನು ಪ್ರಾರ್ಥನಾ ಕ್ರಿಯೆಯಿಂದ(Prayerful Action) ಎದುರಿಸುತ್ತೇನೆ.

'ಅದು ಯಾವ ರೂಪದಲ್ಲಿರುತ್ತದೆ' ಎಂದು ನಾನು ಕೇಳಿದೆ. ಅದಕ್ಕೆ ಅವರು ಹೇಳಿದರು 'ನಾನು ಭೂಗತನಾಗುವುದಿಲ್ಲ. ಅಡಗುದಾಣಗಳಿಗೆ ಹೋಗುವುದಿಲ್ಲ. ನಾನು ಹೊರಗೆದ್ದು ಬಂದು ತಲೆ ಎತ್ತಿ ನಿಲ್ಲುತ್ತೇನೆ. ತನ್ನ ಬಗ್ಗೆ ಈ ವ್ಯಕ್ತಿಗೆ ಯಾವ ದುರುದ್ದೇಶವೂ ಇಲ್ಲ ಎಂದು ನನ್ನ ಮುಖದಲ್ಲಿ ಕಾಣುವುದಿಲ್ಲ ಎಂದು ಗೊತ್ತು. ಆದರೆ ನಮ್ಮ ಹೃದಯದಲ್ಲಿ ಆತನ ವಿರುದ್ಧ ಯಾವುದೇ ಕೇಡಿನ ಭಾವನೆಯಿಲ್ಲ ಎಂಬುದು ಆತನಿಗೆ ಗೊತ್ತಾಗುತ್ತದೆ. ಆಗ ಆತನ ಕಣ್ಣು ತೆರೆಯುತ್ತವೆ. ಹಿರೋಶಿಮಾದಲ್ಲಿ ಸತ್ತ ಆ ಸಹಸ್ರಾರು ಮಂದಿ ಕೂಡ ಇಂಥದೇ ಪ್ರಾರ್ಥನಾ ಕ್ರಿಯೆಯಲ್ಲಿ ಸತ್ತಿದ್ದರೆ ಹೃದಯದಲ್ಲಿ ಇಂಥ ಪ್ರಾರ್ಥನೆ ತುಂಬಿಕೊಂಡು ಬಯಲಿಗೆ ಬಂದಿದ್ದರೆ ಆಗ ಈ ಯುದ್ಧ ಇಷ್ಟು ಕಳಂಕಕರವಾದ ರೀತಿಯಲ್ಲಿ ಕೊನೆಯಾಗುತ್ತಿರಲಿಲ್ಲ. ಈಗಿನ ಪ್ರಶ್ನೆಯೆಂದರೆ ಗೆದ್ದವರು ಯಾರು? Whether the victors are really victors or victims'. ಗಾಂಧಿ ತುಂಬ ನಿಧಾನವಾಗಿ ಮಾತಾಡುತ್ತಿದ್ದರು. ಅವರ ದನಿ ತುಂಬ ಮೆಲುವಾಗಿತ್ತು.

ಇದಾಗಿ ಕೆಲವೇ ಗಂಟೆಗಳಾಗಿದ್ದವು. **ಆಟಂಬಾಂಬನ್ನು ಸಹ ಅಹಿಂಸೆಯಿಂದಲೇ ಎದುರಿಸಬಹುದು ಎಂದು ನಂಬಿದ್ದ ಈ ವ್ಯಕ್ತಿ ರಿವಾಲ್ವರ್‌ನ ಬುಲೆಟ್‌ಗೆ ಬಲಿಯಾಗಿದ್ದ. ನಮಗೆಲ್ಲ ಈಗ ತಿಳಿದಿರುವಂತೆ ಅವರು ಕೆಳಗೆ ಬೀಳುವಾಗ** ಕೈಗಳನ್ನು ಪ್ರಾಥನಾ ಭಂಗಿಯಲ್ಲಿ ಮೇಲೆತ್ತಿ ಹಿಡಿದಿದ್ದರು. ಅವರ ಬಾಯಿಂದ 'ರಾಮ್' ಎಂಬ ಶಬ್ದ ಹೊರಟಿತ್ತು.

ಕರ್ನಾಟಕ ಈ ವಾರ

ಮಲ್ಯ ಈಗ ಇಲ್ಲ!



ಸಮೃದ್ಧ ಕರ್ನಾಟಕವನ್ನು ಕಟ್ಟಲು ಯುವಕರನ್ನು ಎದ್ದೇಳಿಸುತ್ತಿದ್ದ ವಿಜಯ ಮಲ್ಯ ಎಲ್ಲಿ? 'ಎಲ್ಲಿಯೇ ಇರಲಿ, ಕೊಡಬೇಕಾದದ್ದನ್ನು ಕೊಡಲಿ' ಎಂದು ಒಂದಿಷ್ಟು ಜನ ಸೇವಕರು 'ಯು.ಬಿ.' ಕಂಪನಿಯ ಮುಂದೆ ಜಮಾಯಿಸಿದ್ದಾರೆ! ಅವರ ಬಾಧೆ ಇಷ್ಟು 'ಮಲ್ಯರ ಆಕರ್ಷಕ ವ್ಯಕ್ತಿತ್ವಕ್ಕೆ(?) ಮರುಳಾಗಿ, ಸಮೃದ್ಧ ಕರ್ನಾಟಕ ಕಟ್ಟಲು ಪಣತೊಟ್ಟು ಜನತಾಪಕ್ಷ ಸೇರಿದರಂತೆ. ವಿಧಾನಸಭೆಯ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವನ್ನು ನೀಡಿದ ಮಲ್ಯ, ಹೇಳಿದಂತೆ ಚುನಾವಣಾ ಖರ್ಚಿಗೆ ಹಣ ನೀಡಲಿಲ್ಲ(ಆಯೋಗದ ಮಿತಿಯಂತೆ ಕನಿಷ್ಟ 10 ಲಕ್ಷವಾದರೂ ಕೊಡಬಾರದೆ ಎನ್ನುತ್ತಿದ್ದಾರೆ.) ಹೀಗೆ ಕಂಡವರನ್ನು ಚುನಾವಣೆ ಭಾವಿಗೆ ತಳ್ಳಿ ದಂಡೆಯ ಮೇಲೆ ಉಳಿದರೂ ಹೇಗೋ ಸಾಲಸೋಲ ಮಾಡಿ ದಂಡೆ ಹತ್ತಿದ ಅಭ್ಯರ್ಥಿಗಳು ಮಾತನಾಡಿಸೋಣ ಎಂದರೆ ಅಧ್ಯಕ್ಷ ಮಲ್ಯ ನಾಪತ್ತೆ! ಟೊಂಕಕಟ್ಟಿ ಎಲೆಕ್ಷನ್‌ಗೆ ನಿಂತು ಡಿಪಾಸಿಟ್ ಜಪ್ತಿಯಾಗಿ ಹೋದ ನೊಂದ 150 ಅಭ್ಯರ್ಥಿಗಳು ಮಹಾನಾಯಕನ 'ಭರವಸೆ'ಯ ವಸೂಲಿಗಾಗಿ ಮಲ್ಯನ ಮನೆ ಮುಂದೆ ಧರಣಿಗೆ ಕುಳಿತಿದ್ದಾರೆ. ಕೋಟ್ಯಾಧಿಪತಿ ಮನೆಯಂಗಳದಲ್ಲಿ ಸೇರಿದವರಿಗೆ 'ತಿನ್ನಲು ಇರಲಿ, ಕುಡಿಯಲೂ ಸಿಗದ' ಸ್ಥಿತಿ ಇರುವಾಗ ಹೇಗೂ ಸಾಲಮಾಡಿ ಬೆಂಗಳೂರು ತಲುಪಿಯಾಗಿದೆ ಇನ್ನು ಸಿಂಗಾಪೂರ-ಆಫ್ರಿಕಾದಲ್ಲಿ ಎಲ್ಲಿ ಇದ್ದಾನೆ ಮಲ್ಯ ಎಂದು ಹುಡುಕಲು ಆದೀತೆ? ಆ ದೇಶ- ಈ ದೇಶ, ಆ ಕ್ಲಬ್ - ಈ ಬೀಚ್ ಎಂದೆಲ್ಲಾ ಸುತ್ತುವ ಬಡವರ ಬಂಧು ಮಲ್ಯನಿಗೆ ಇಲ್ಲದವರ ಈ ಆರ್ತನಾದ ಕೇಳೀತೆ? ಹೌದು ಈಗ ಇಂತಹವರ ಅಗತ್ಯವಾದರೂ ಏನಿದೆ ಆತನಿಗೆ? ಹೇಗೂ ತನ್ನ ಗುರು ರಾಮಕೃಷ್ಣ ಹೆಗಡೆ-ಎಸ್.ಎಂ.ಕೃಷ್ಣ, ಅನಂತಕುಮಾರ್‌ರವರು ಜೆಡಿ(ಎಸ್) ನ್ನು ಮುಗಿಸಲು ಹೆಣೆದ ಕುತಂತ್ರದ ಪಾತ್ರ ಮುಗಿದ ಮೇಲೆ, ಮಲ್ಯನಿಗೇಕೆ ಕರ್ನಾಟಕ ರಾಜಕೀಯದ ಒಣ ಹುಲ್ಲಿನ ಚಿಂತೆ?

ವಿಜಯಮಲ್ಯರ ಆಸ್ತಿ
(ಅವರು ಹೇಳಿದಂತೆ)

1. ಮೂವರು ಮಕ್ಕಳು
2. 7 ನಾಯಿ
3. 20 ಕಂಪೆನಿಗಳು
4. 34 ಮದ್ಯ ತಯಾರಿಕಾ ಘಟಕಗಳು
5. 25 ಡಿಸ್ಟಿಲರಿ
6. 200 ಕುದುರೆಗಳು
7. 3 ವಿಮಾನ
8. 150 ಕಾರು
9. 4 ಕ್ರೀಡಾ ನೌಕೆ
10. ಜಗತ್ತಿನ ವಿವಿಧೆಡೆ 14 ಮನೆಗಳು
11. 1 ಆಸ್ಪತ್ರೆ
12. 1 ಅಂತರರಾಷ್ಟ್ರೀಯ ಮಟ್ಟದ ಶಾಲೆ

ಆಸ್ತಿಯ ಒಟ್ಟು ಮೌಲ್ಯ ತಿಳಿದಿಲ್ಲ!

ಎಡಪಕ್ಷಗಳು ಹಿಂದಿನಿಂದಲೂ ವಿಮೆ ಮತ್ತು ಟೆಲಿಕಾಂ (ದೂರ ಸಂಪರ್ಕ) ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳದ ಬಹುಮತದ ನಿಯಂತ್ರಣವನ್ನು ವಿರೋಧಿಸುತ್ತಾ ಬಂದಿವೆ. ಇದಕ್ಕೆ ಕಾರಣವನ್ನು ವಿವರವಾಗಿ ವಿವರಿಸುವ ಟಿಪ್ಪಣಿ ತಯಾರಿಸಿವೆ. ಸರ್ಕಾರಕ್ಕೂ ಮತ್ತು ಯುಪಿಎ - ಎಡಪಕ್ಷಗಳ ಸಂಯೋಜನಾ ಸಮಿತಿಗೂ ಕೊಟ್ಟಿವೆ. ಈಗ ಆ ಟಿಪ್ಪಣಿಯನ್ನು ಎಡಪಕ್ಷಗಳು ಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡಿವೆ. ಅಮೆರಿಕಾ-ಚೀನಾ ಸೇರಿದಂತೆ ಹೆಚ್ಚಿನ ದೇಶಗಳಲ್ಲಿ ಇಂತಹ ನಿರ್ಬಂಧ ಇದೆ. ಅದಕ್ಕೆ ಮುಖ್ಯ ಕಾರಣ ರಾಷ್ಟ್ರೀಯ ಭದ್ರತೆ. ಟೆಲಿಕಾಂ ಜಾಲ ವಿಸ್ತರಿಸುವುದು, ಪೈಪೋಟಿ ಹೆಚ್ಚಿಸಿ ಸೇವೆ ಉತ್ತಮಪಡಿಸಲು ವಿದೇಶಿ ಬಂಡವಾಳ ಅಗತ್ಯ ಎಂಬುದು ನಿರಾಧಾರ. ಈವ್ಯಾವುದನ್ನು ಮಾಡದೆ ಚೀನಾ ಅದ್ಭುತ ಪ್ರಗತಿ ಸಾಧಿಸಿದೆ. ಇವೆಲ್ಲವನ್ನು ಟಿಪ್ಪಣಿ ಸಾಧಾರವಾಗಿ ಚರ್ಚಿಸುತ್ತದೆ. ಈ ಟಿಪ್ಪಣಿಯ ಸಾರಾಂಶ ಇಲ್ಲಿದೆ.



ಟೆಲಿಕಾಂನಲ್ಲಿ ವಿದೇಶಿ ಬಂಡವಾಳಕ್ಕೆ ಏಕೆ ವಿರೋಧ ?


ಶರತ್‌ಚಂದ್ರ

ಬೇರೆ ಹೆಚ್ಚಿನ ದೇಶಗಳಲ್ಲಿದ್ದಂತೆ ಇಂಡಿಯಾದಲ್ಲೂ ದೂರಸಂಪರ್ಕ(ಟೆಲಿಕಾಂ) ಸೇವೆ ಸಾರ್ವಜನಿಕ ಒಡೆತನದಲ್ಲಿ ಇತ್ತು. 1994 ರಲ್ಲಿ ಮೊದಲ ಬಾರಿಗೆ ಖಾಸಗಿಯವರಿಗೆ ಮೊಬೈಲ್ ಮತ್ತು ಮೂಲಭೂತ ಸ್ಥಿರ ಫೋನು ಸೇವೆ ಲೈಸೆನ್ಸ್ ಕೊಡಲಾಯಿತು. ಆಗ ಟೆಲಿಕಾಂ ಸೇವೆ ಒದಗಿಸುವ ಕಂಪನಿ ಇಂಡಿಯಾದ್ದೇ ಆಗಿರಬೇಕು. ಒಟ್ಟು ವಿದೇಶಿ ಬಂಡವಾಳ ಶೇಕಡಾ 49 ಕ್ಕಿಂತ ಹೆಚ್ಚಿರಬಾರದು. ಅಂದರೆ ನಿರ್ವಹಣೆ ಇಂಡಿಯಾದಲ್ಲವರ ಕೈಯಲ್ಲೇ ಇರಬೇಕು. ಆಗಿನಿಂದಲೂ ವಿದೇಶಿ ಹಣಕಾಸು ಸಂಸ್ಥೆಗಳು, ಐಎಂಎಫ್-ವಿಶ್ವಬ್ಯಾಂಕ್‌ಗಳು ಟೆಲಿಕಾಂ ಸೇವಾಕ್ಷೇತ್ರದಲ್ಲಿ ವಿದೇಶಿ ಬಂಡವಾಳದ ಮೇಲೆ ಈ ನಿರ್ಬಂಧ ತೆಗೆಯಬೇಕು ಎಂದು ಒತ್ತಡ ಹಾಕುತ್ತಲೇ ಬಂದಿವೆ. ಈ ಒತ್ತಡಕ್ಕೆ ಸರ್ಕಾರ ಮಣಿಯದಿರುವುದಕ್ಕೆ ಕಾರಣ ರಾಷ್ಟ್ರೀಯ ಭದ್ರತೆಗೆ ಇದರಿಂದ ಇರುವ ಅಪಾಯವೇ.

ರಾಷ್ಟ್ರೀಯ ಭದ್ರತೆಗೆ ಅಪಾಯ

ಹಿಂದೊಮ್ಮೆ ಮತ್ತು ಇತ್ತೀಚೆಗೆ ವಾಜಪೇಯಿ ಸರ್ಕಾರ ಈ ಒತ್ತಡಕ್ಕೆ ಮಣಿಯುವ ಸೂಚನೆ ಕಂಡಾಗ, ಅದನ್ನು ತಡೆ ಹಿಡಿದದ್ದು ನಮ್ಮ ಗೂಢಚಾರ ಮತ್ತು ಭದ್ರತಾ ಸಂಘಟನೆಗಳ ತೀವ್ರ ವಿರೋಧವೆ. ಇಂದು **ಟೆಲಿಕಾಂ ಸೇವೆ** ಒದಗಿಸುವ ಕಂಪನಿ **ಈ ಜಾಲ** ಬಳಸಿ **ಮಾಡುವ ಯಾವುದೇ ಕರೆಯನ್ನು ಕದ್ದಾಲಿಸುವ ಸಾಮರ್ಥ್ಯ ಹೊಂದಿರುತ್ತದೆ.** ಆಂತರಿಕ ಭದ್ರತಾ ಕಾರಣಗಳಿಗಾಗಿ ಎಲ್ಲಾ ಟೆಲಿಕಾಂ ಉಪರಕರಣಗಳಲ್ಲಿ ಇಂತಹುದಕ್ಕೆ ತಾಂತ್ರಿಕ ಪರಿಕರ ಇರುತ್ತದೆ. ಇಂದಿನ ತಂತ್ರಜ್ಞಾನ ಬಳಸಿ ಉಪಕರಣದಲ್ಲಿ ತಕ್ಕ ಪರಿಕರ ಜೋಡಿಸಿದರೆ, ದೂರದಿಂದಲೇ ಕರೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು, ಕರೆ ಕದ್ದಾಲಿಸುವುದು, ಕರೆಗಳಲ್ಲಿ ಬೇಕಾದ ಮಾಹಿತಿಗೆ ಹುಡುಕುವುದು ಮಾತ್ರವಲ್ಲ ಇಡೀ ಟೆಲಿಕಾಂ ಜಾಲವನ್ನೇ ಬಿದ್ದು ಹೋಗುವಂತೆ ಮಾಡಲು ಸಾಧ್ಯ. ವಿದೇಶಿ ಕಂಪನಿಯೊಂದು ಈ ಜಾಲ ನಡೆಸುತ್ತಿದ್ದರೆ ಮತ್ತು ಆ ಕಂಪನಿ ತನ್ನ ದೇಶದಿಂದ ಉಪಕರಣಗಳನ್ನು ತರಿಸುತ್ತಿದ್ದರೆ ಇದು ಬಹಳ ಸುಲಭ.

ಇದೇನೂ ಕಾಲ್ಪನಿಕ ಸಾಧ್ಯತೆ ಮಾತ್ರವಲ್ಲ. ಯುರೋಪಿಯನ್ ಒಕ್ಕೂಟದಲ್ಲಿ ಅಮೆರಿಕ-ಬ್ರಿಟನ್ ಜಂಟಿ ಬೇಹುಗಾರಿಕೆ ಕಾರ್ಯಕ್ರಮವೊಂದರ ಬಗ್ಗೆ ನಡೆದ ಚರ್ಚೆಗಳೇ ಇದಕ್ಕೆ ಸಾಕ್ಷಿ. 'ಎಶೆನೊವ್' ಎಂಬ ಈ ಕಾರ್ಯಕ್ರಮದಡಿ [illegible] ಯುರೋಪಿಯನ್ ದೇಶಗಳ ಆಯಕಟ್ಟಿನ ರಾಜಕೀಯ - ಆರ್ಥಿಕ - ವಾಣಿಜ್ಯ ಮಾಹಿತಿಗಳನ್ನು ಟೆಲಿಕಾಂ ಕದ್ದಾಲಿಕೆ ಮೂಲಕ ಸಂಗ್ರಹಿಸುತ್ತಿತ್ತು. ಇದನ್ನು ಅಮೆರಿಕನ್ ಕಂಪನಿಗಳು ಯುರೋಪಿಯನ್ ಕಂಪನಿಗಳ ವಿರುದ್ಧ ಬಳಸುತ್ತಿವೆ ಎಂಬ ಬಗ್ಗೆ ಆಕ್ರೋಶ ವ್ಯಕ್ತಪಡಿಸಲಾಗಿದೆ. ಇಂತಹ ಸಾಧ್ಯತೆಗಳಿಂದಾಗಿಯೂ ನಮ್ಮ ಟೆಲಿಕಾಂ ಸೇವೆಯಲ್ಲಿ ಭದ್ರತಾ ಸಂಘಟನೆಗಳು ವಿದೇಶಿ ಬಂಡವಾಳ ಬಹುಮತದ ನಿಯಂತ್ರಣ ಪಡೆಯುವುದನ್ನು ವಿರೋಧಿಸಿವೆ.



ಬೇರೆ ದೇಶಗಳಲ್ಲಿ ನಿರ್ಬಂಧ

ಸರ್ಕಾರದ ಮತ್ತು ವಿದೇಶಿ ಕಂಪನಿಗಳ ವಕ್ತಾರರು ಪ್ರಮುಖ ದೇಶಗಳಲ್ಲೆಲ್ಲಾ ಇಂತಹ ನಿರ್ಬಂಧ ಇಲ್ಲ. ಎಡಪಕ್ಷಗಳು ಇಂಡಿಯಾಕ್ಕೆ ಅಂತರ್ರಾಷ್ಟ್ರೀಯವಾಗಿ ಇರುವ ಪದ್ಧತಿಗೆ ವಿರುದ್ಧವಾಗಿ ವಿಚಿತ್ರ ನೀತಿಯನ್ನು ವಾದಿಸುತ್ತಿವೆ ಎನ್ನುವಂತೆ ಬಿಂಬಿಸುತ್ತಾರೆ. ಪ್ರಮುಖ ವಿಕಸಿತ ಮತ್ತು ವಿಕಾಸಶೀಲ ದೇಶಗಳಲ್ಲೆಲ್ಲಾ ಟೆಲಿಕಾಂ ಸೇವಾ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಶೇಕಡಾ 49(ಅಂದರೆ ನಿಯಂತ್ರಣ ಹೊಂದದಂತೆ) ಮಿತಿ ಮೀರದಂತೆ ನಿರ್ಬಂಧದ ನೀತಿ ಪಾಲಿಸುತ್ತಿವೆ.

ಇಂತಹ ನಿರ್ಬಂಧ ತೆಗೆದುಹಾಕಲು ಒತ್ತಾಯಿಸುತ್ತಿರುವ ಅಮೆರಿಕದಲ್ಲಿ ಈ ರೀತಿಯ ನಿರ್ಬಂಧ ಇದೆ ಎಂಬುದನ್ನು ಇವರು ಮರೆಮಾಚುತ್ತಾರೆ. ಅಮೆರಿಕದ ಕಾನೂನು ಪ್ರಕಾರ ಶೇಕಡಾ 25 ವಿದೇಶಿ ಬಂಡವಾಳಕ್ಕಿರುವ ಮಿತಿ, ಇದಕ್ಕಿಂತ ಹೆಚ್ಚಿನದಕ್ಕೆ ಎಲ್ಲಾ ಸಂಪರ್ಕ ಮಾಧ್ಯಮಗಳ ನಿಯೋಜಕ FCC ವಿಶೇಷವಾಗಿ ಅನುಮತಿ ನೀಡಬೇಕು. ಇಂತಹ ವಿಶೇಷ ಅನುಮತಿಗೆ ಸಹ ಒಟ್ಟು ಶೇಕಡಾ 45 ರ ಮಿತಿ ಇದೆ. ಇಂತಹ ವಿಶೇಷ ಅನುಮತಿ ಈವರೆಗೆ ಒಂದೇ ಬಾರಿಗೆ ನೀಡಲಾಗಿದೆ. ಕೆಲವು ಪ್ರಮುಖ ದೇಶಗಳು ಹೇರಿರುವ ನಿರ್ಬಂಧವನ್ನು ಕೋಷ್ಟಕ - 1 ರಲ್ಲಿ ನೋಡಬಹುದು. ಬೇರೆ ಕ್ಷೇತ್ರಗಳು ಅನಿರ್ಬಂಧಿತ ವಿದೇಶಿ ಬಂಡವಾಳಕ್ಕೆ ಅವಕಾಶ ಮಾಡಿಕೊಡುವ ಫಿಲಿಫೈನ್ಸ್, ಥೈಲೆಂಡ್, ಮಲೇಶ್ಯಾ, ಮೆಕ್ಸಿಕೋ, ತೈವಾನ್, ಸಿಂಗಾಪೂರ್‌ಗಳಲ್ಲೂ ಶೇಕಡಾ 49 ರ ಒಳಗಿನ ಮಿತಿ ಇದೆ ಎಂಬ ಅಂಶ ಗಮನಿಸಬಹುದು.

ಕೋಷ್ಟಕ 1

ಪ್ರಮುಖ ದೇಶಗಳಲ್ಲಿ ಟೆಲಿಕಾಂ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಮಿತಿ

ದೇಶ	ವಿದೇಶಿ ಬಂಡವಾಳ ಮಿತಿ
ಅಮೆರಿಕ	ಶೇ. 25-
	ಶೇ. 45(ವಿಶೇಷ ಅನುಮತಿ)
ಕೆನಡಾ	ಶೇ. 20(ನೇರ)
	ಶೇ.46.7 (ಪರೋಕ್ಷ)
ಫ್ರಾನ್ಸ್	ಶೇ. 20
ಜಪಾನ್	ಶೇ. 20
ದ.ಕೊರಿಯಾ	ಶೇ. 33
ಮೆಕ್ಸಿಕೊ	ಶೇ. 49
ಪೊಲೆಂಡ್	ಶೇ. 49
ಟರ್ಕಿ	ಶೇ. 49
ಮಲೇಶ್ಯಾ	ಶೇ. 30
ಫಿಲಿಫೈನ್ಸ್	ಶೇ. 40
ಥೈಲೆಂಡ್	ಶೇ. 49
ತೈವಾನ್	ಶೇ. 49
ಸಿಂಗಾಪೂರ್	ಶೇ. 49
ಇಂಡೋನೇಶ್ಯಾ	ಶೇ. 35
ಆಸ್ಟ್ರೇಲಿಯಾ	ಶೇ. 35

ಒಟ್ಟಾರೆ ಮಿತಿಯಿಲ್ಲದೆ ಕೆಲವು ದೇಶಗಳು ಬೇರೆ ರೀತಿಯ ನಿರ್ಬಂಧ ಹೇರಿವೆ. ಉದಾಹರಣೆಗೆ ಮಲೇಶ್ಯಾದಲ್ಲಿ ಶೇಕಡಾ 30 ಕ್ಕಿಂತ ಹೆಚ್ಚಿನ ವಿದೇಶಿ ಬಂಡವಾಳ ಇರಬಹುದು. ಆದರೆ 3 ವರ್ಷಗಳಲ್ಲಿ ಶೇಕಡಾ 30 ಕ್ಕೆ ಇಳಿಸಬೇಕು. ಆಸ್ಟ್ರೇಲಿಯಾದಲ್ಲಿ ನಿರ್ದಿಷ್ಟ ವಿದೇಶಿ ಹೂಡಿಕೆಗೆ ಶೇಕಡಾ 5 ರ ಮಿತಿ ಹಾಕಿದೆ. ಯುರೋಪಿಯನ್ ದೇಶಗಳಲ್ಲಿ ಯುರೋಪಿನ ದೇಶೀ ಕಂಪನಿಗಳಿಗೆ ಮಿತಿ ಏರಿಸಲಾಗಿದೆ. ಆದರೆ ಬೇರೆ ದೇಶಗಳಿಗೆ ಮಿತಿ ಕಡಿಮೆ ಇದೆ. ಎಲ್ಲಾ ದೇಶಗಳಲ್ಲಿ ರಾಷ್ಟ್ರೀಯ ಭದ್ರತೆ ಇಂತಹ ಮಿತಿಗೆ ಮೂಲ ಕಾರಣ ಎಂಬುದನ್ನು ಸ್ಪಷ್ಟವಾಗಿ ಹೇಳಲಾಗಿದೆ.

ಟೆಲಿಕಾಂ ಉತ್ತಮ ಪಡಿಸಲು ವಿದೇಶಿ ಬಂಡವಾಳ ?

ವಿದೇಶಿ ಬಂಡವಾಳದ ಮೇಲಿನ ನಿರ್ಬಂಧ ತೆಗೆಯಲು ಒತ್ತಾಯ ತರುತ್ತಿರುವವರು ಯಾರು? ಅವರ ಒತ್ತಾಯಕ್ಕೆ ಮೂಲ ಕಾರಣ ಏನು? ಇಂತಹ ಒತ್ತಾಯ ಬರುತ್ತಿರುವುದು ಮೊಬೈಲ್ ಸೇವಾ ಕ್ಷೇತ್ರದ ಕಂಪನಿಗಳಿಂದ. ಈ ಕ್ಷೇತ್ರದಲ್ಲಿರುವ ಸಣ್ಣ-ಮಧ್ಯಮ ಪ್ರಮಾಣದ ಕಂಪನಿಗಳ ಲಾಭಾಂಶ ತೀವ್ರ ಪೈಪೋಟಿಯಿಂದಾಗಿ ಇಳಿಯುತ್ತಿದೆ. ವಿದೇಶಿ (ಅಂತರ್ರಾಷ್ಟ್ರೀಯ) ಕಂಪನಿಗಳಿಗೆ ಬಂಡವಾಳ ಹೂಡಿಕೆ ಟೆಲಿಕಾಂ ಕ್ಷೇತ್ರವಾಗಿ ಬೆಳೆಯುತ್ತಿರುವ ಭಾರತ ಒಂದು ದೊಡ್ಡ ಅವಕಾಶ. ಸಣ್ಣ-ಮಧ್ಯಮ ಪ್ರಮಾಣದ ಕಂಪನಿಗಳನ್ನು ದೊಡ್ಡ ಬೆಲೆಯಲ್ಲಿ ಕೊಂಡುಕೊಳ್ಳಲು ಇವು ಸಿದ್ಧವಾಗಿವೆ. ಇವಲ್ಲದೆ 'ಏರ್‌ಟೆಲ್' ನಲ್ಲಿ ಪ್ರಮುಖ ಹೂಡಿಕೆ ಮಾಡಿರುವ ಸಿಂಗ್‌ಟೆಲ್ (ಸಿಂಗಾಪೂರ್ ಟೆಲಿಕಾಂ) ಮತ್ತು 'ಹಚ್' ನಲ್ಲಿ ಪ್ರಮುಖ ಭಾಗ ಇರುವ 'ಹಚಿನ್ ಸನ್' - ಇವೆರಡೂ ವಿದೇಶಿ ಕಂಪನಿಗಳು ಬಂಡವಾಳ ಹೂಡಿಕೆ ಮಿತಿ ಶೇಕಡಾ 49 ರ ಮಿತಿಯನ್ನು ಅಕ್ರಮವಾಗಿ ದಾಟಿವೆ. ಇದನ್ನು ಸಕ್ರಮಗೊಳಿಸಲು, ಈ ಕಂಪನಿಗಳ ಮೇಲೆ ತಮ್ಮ ಹತೋಟಿ ಬಿಗಿಗೊಳಿಸಲು ಯತ್ನಿಸುತ್ತಿವೆ. ಆದರೆ ಈ ಕಂಪನಿಗಳು ಕೊಡುವ ಕಾರಣ ಬೇರೆ. ಇಂಡಿಯಾದ ಟೆಲಿಕಾಂ ಸೇವೆ ವಿಸ್ತರಿಸಲು, ಉತ್ತಮಪಡಿಸಲು ವಿದೇಶಿ ಬಂಡವಾಳ ಅಗತ್ಯ. ಇದು ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿದೆ ಎಂಬುದು.

ವಾದಗಳು ನಿರಾಧಾರ

ಇಂತಹ ವಾದದ ತಿರುಳು ಇದು


- ಟೆಲಿಕಾಂ ಸೇವೆ ವಿಸ್ತಾರಕ್ಕೆ ಬಂಡವಾಳದ ಅಭಾವವೇ ಮಿತಿ
- ಇಂಡಿಯಾದ ಟೆಲಿಕಾಂ ಸೇವೆ ವಿಸ್ತರಿಸಲು

ಪುಟ 11 ಕ್ಕೆ

ಚೀನಾದ ಅದ್ಭುತ ಪ್ರಗತಿ ಗುಟ್ಟೇನು?

ಚೀನಾ ಅದ್ಭುತ ಟೆಲಿಕಾಂ ಪ್ರಗತಿ ಸಾಧಿಸಿದೆ. ಅದರ ಗುಟ್ಟೇನು? ಸ್ಥಿರ ಕ್ಷೇತ್ರದಲ್ಲಿರುವ ಎರಡು ಮತ್ತು ಮೊಬೈಲ್ ಕ್ಷೇತ್ರದಲ್ಲಿರುವ ಮೂರು ಕಂಪನಿಗಳು ಚೀನಿ ಕಂಪನಿಗಳೇ. ಇವು ಹಿಂದಿನ ಸರ್ಕಾರಿ ಸ್ವಾಮ್ಯದ ಕಂಪನಿಗಳು. ಕ್ಷೇತ್ರದ ವಿಸ್ತಾರಕ್ಕೆ ಬೇಕಾದ ಎಲ್ಲಾ ಬಂಡವಾಳ ಅವೇ ಹೊಂಚಲು ಸಾಧ್ಯವಾಗಿದೆ. 2007 ರ ಹೊತ್ತಿಗಷ್ಟೇ ಚೀನಾ ವಿದೇಶಿ ಬಂಡವಾಳದ ಮಿತಿಯನ್ನು ಶೇಕಡಾ 49 ಕ್ಕೆ ಏರಿಸಲಿದೆ. ಅದು ಈಗ ಇನ್ನೂ ಕಡಿಮೆ.

ಆದರೆ ಚೀನಾದ ಅದ್ಭುತ ಪ್ರಗತಿಯ ಇಂಜಿನ್ ಅದು ಸ್ಥಳೀಯ ಟೆಲಿಕಾಂ ಉಪಕರಣಗಳ ಉತ್ಪಾದನೆಗೆ ಕೊಟ್ಟ ಆದ್ಯತೆ. ಭಾರಿ ಕಡಿಮೆ ಬೆಲೆಯಲ್ಲಿ ಸ್ಥಳೀಯವಾಗಿ ಟೆಲಿಕಾಂ ಉಪಕರಣಗಳ ಉತ್ಪಾದನೆ - ಲಭ್ಯತೆ ಆ ಇಂಜಿನ್. ಸ್ಥಳೀಯ ಉತ್ಪಾದನೆಗೆ ಆಧುನಿಕ ತಂತ್ರಜ್ಞಾನ-ಬಂಡವಾಳ ಆಕರ್ಷಿಸಲು ಚೀನಾ ಆದ್ಯತೆ ಕೊಟ್ಟಿತು. ಈಗ ಚೀನಾದ ಟೆಲಿಕಾಂ ಕೈಗಾರಿಕೆ ವಿದೇಶಿ ಮಾರುಕಟ್ಟೆಗಳ ಪೈಪೋಟಿ-ಪ್ರವೇಶಕ್ಕೆ ಸಿದ್ಧವಾಗಿವೆ. ಚೀನಾದ ಅದ್ಭುತ ಪ್ರಗತಿಯ ಇನ್ನೊಂದು ಇಂಜಿನ್ ಟೆಲಿಕಾಂ ಸೇವೆಯ ಬೆಲೆ. ಚೀನಾದ ಸರ್ಕಾರಿಕಂಪನಿಗಳ ಮೇಲೆ ಸರ್ಕಾರ ಇದ್ದ ಹಿಡಿತದಿಂದಲೇ ಸೇವೆಯ ಬೆಲೆ ನಿಯಂತ್ರಿಸಲು ಸಾಧ್ಯವಾಯಿತು. ವಿದೇಶಿ ಬಂಡವಾಳ ಟೆಲಿಕಾಂ ಪ್ರಗತಿಗೆ ಇಂಜಿನ್ ಅಲ್ಲ. ಪ್ರಮುಖ ಅಂಶವೂ ಅಲ್ಲ - ಎಂಬುದು ಚೀನಾದ ಉದಾಹರಣೆಯಿಂದ ಗೊತ್ತಾಗುವ ಅಂಶ.



ಚೀನಾದ ಮಾಹಿತಿ ತಂತ್ರಜ್ಞಾನ-ಸಂಪರ್ಕ-ಶೋಧನಾ ಪ್ರದೇಶ

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಭಾರೀ ಹಗರಣದ ಬಗ್ಗೆ ವಾದ-ವಿವಾದ, ಆರೋಪ-ಪ್ರತ್ಯಾರೋಪಗಳ ಸುರಿಮಳೆಯೇ ನಡೆದಿತ್ತು. ಸಿಬಿಐ ತನಿಖೆಯವರೆಗೂ ಕೂಗೆದ್ದು ಮರೆಯಾಯಿತು. ಯಾಕೆ ಹೀಗಾಯಿತು? ಅಸಲಿ ಸಂಗತಿಗಳೇನು? ಎಂಬುದನ್ನು, ವಿವಿಧ ಹಂತಗಳ ವಿದ್ಯಮಾನ-ವಿವರಗಳನ್ನಿಟ್ಟು ವಿಶ್ಲೇಷಿಸಿದ ಲೇಖನವಿಲ್ಲಿ...



ಎಕ್ಸ್‌ಪ್ರೆಸ್ ಕಾರಿಡಾರ್ ಎಂಬ

ನಿತ್ಯಾನಂದಸ್ವಾಮಿ


ಬೆಂಗಳೂರು- ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯ ಭಾರಿ ಹಗರಣದ ಭೂತವೊಂದು ರಾಜ್ಯದ ಸಮ್ಮಿಶ್ರ ಸರ್ಕಾರವನ್ನು ಕಾಡುತ್ತಿದೆ. ಹಿಂದಿನ ಕಾಂಗ್ರೆಸ್ ಸರ್ಕಾರದ ಆಡಳಿತಾವಧಿಯಲ್ಲಿ ನಡೆದಿದೆನ್ನಲಾಗುವ ಈ ಹಗರಣದ ಕುರಿತಾಗಿ ಸಮಗ್ರವಾದ ತನಿಕೆ ಆಗಬೇಕೆಂದು ಜನತಾದಳ(ಎಸ್) ಧ್ವನಿ ಎತ್ತುತ್ತಾ ಬಂದಿದೆ. ಧರಂಸಿಂಗ್ ಮಂತ್ರಿಮಂಡಲದ ವಿಸ್ತರಣೆಯ ವಿಳಂಬಕ್ಕೆ ಇದೂ ಒಂದು ಕಾರಣವಾಗಿದೆ ಎನ್ನಲಾಗುತ್ತಿದೆ. ಈ ಹಗರಣದಲ್ಲಿ ಶಾಮೀಲಾಗಿರುವ ಕೆಲವರು ಸಚಿವ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆಂದೂ ಅಂತಹವರನ್ನು ಸಚಿವ ಸಂಪುಟಕ್ಕೆ ಸೇರಿಸಬಾರದೆಂದು ಜನತಾದಳ(ಎಸ್) ಪಟ್ಟುಹಿಡಿದಂತಿದೆ.

ಬೆಂಗಳೂರು - ಮೈಸೂರು ನಡುವೆ ಕ್ಷಿಪ್ರ ಸಂಚಾರಕ್ಕೆ ಸೌಲಭ್ಯ ಒದಗಿಸುವ ಉದ್ದೇಶದಿಂದ ನಿರ್ಮಾಣ ಮಾಡಲು ಉದ್ದೇಶಿಸಿರುವ ಷಟ್ಪಥ ಹೆದ್ದಾರಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಷಟ್ಪಥ ಹೆದ್ದಾರಿ ಯೋಜನೆಗಾಗಿ ಸ್ವಾಧೀನ ಪಡಿಸಿಕೊಂಡಿರುವ ಭಾರೀ ಪ್ರಮಾಣದ ಭೂಮಿಯನ್ನು ರಿಯಲ್ ಎಸ್ಟೇಟ್ ಉದ್ಯಮಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂದೂ, ಈ ಹಗರಣದಲ್ಲಿ ಹಿರಿಯ ರಾಜಕಾರಣಿಗಳು, ಮಾಜಿ ಮಂತ್ರಿಗಳು ಮತ್ತು ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂಬುದೇ ಆರೋಪದ ಮುಖ್ಯವಸ್ತು. ಮಾಜಿ ಪ್ರಧಾನಿ, ಜನತಾದಳ(ಎಸ್) ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಹೆಚ್.ಡಿ.ದೇವೇಗೌಡರು ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ರಚನೆಯಾಗುವ ಮೊದಲಿನಿಂದಲೂ ಈ ಆರೋಪವನ್ನು ಮಾಡುತ್ತಾ ಬಂದಿದ್ದಾರೆ. ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ ನಡೆಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ. ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಸಿಬಿಐ ತನಿಖೆಗೆ ಒತ್ತಾಯಿಸಿದ್ದಾರೆ. ವಿಧಾನಸಭಾ ಚುನಾವಣೆಗಳ ನಂತರ ಕಾಂಗ್ರೆಸ್ ಪಕ್ಷದ ಜೊತೆಗೂಡಿ ಸಮ್ಮಿಶ್ರ ಸರ್ಕಾರವನ್ನು ರಚಿಸಿದ ನಂತರವೂ ದೇವೇಗೌಡರು ತಮ್ಮ ಹಿಂದಿನ ನಿಲುಮೆಗೆ ಬದ್ಧರಾಗಿರುವುದು ಮೆಚ್ಚತಕ್ಕ ಸಂಗತಿ. ಸಮ್ಮಿಶ್ರ ಸರ್ಕಾರ ರಚನೆಯಾದ ನಂತರ, ಮುಖ್ಯಮಂತ್ರಿ ಧರಮ್‌ಸಿಂಗ್ ಅವರಿಗೆ ಪತ್ರಗಳನ್ನು ಬರೆದು ಸಮಗ್ರ ತನಿಖೆಗೆ ಮತ್ತೆ ಒತ್ತಾಯಿಸಿದ್ದಾರೆ. ನಗರಾಭಿವೃದ್ಧಿ ಸಚಿವ ಸ್ಥಾನ ಕಳೆದುಕೊಂಡರೂ ಬೆಂಗಳೂರು - ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಸ್ಥಳೀಯ ಯೋಜನಾ ಏಜೆನ್ಸಿ (ಬಿಎಂಐಸಿಪಿಎ) ಅಧ್ಯಕ್ಷರಾಗಿ ಮುಂದುವರಿದಿರುವ ಡಿ.ಕೆ.ಶಿವಕುಮಾರ್ ಅವರನ್ನು ಆ ಸ್ಥಾನದಿಂದ ವಜಾ ಮಾಡಬೇಕು ಎಂದು ಅವರು ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದ್ದಾರೆ.

ಬೆಲೆ ಬಾಳುವ ಭೂಮಿ, ಭೂಗಳ್ಳರ ಪಾಲು :

ನೈಸ್ ಕಂಪೆನಿ ಎಂಬುದು ಸಂಬಂಧಪಟ್ಟ ಕೆಲವು ಮಂತ್ರಿಗಳ ಪಾಲಿಗೆ ಚಿನ್ನದ ಗಣಿಯಾಯಿತು. ಯೋಜನೆಗಾಗಿ ಭೂಮಿಯನ್ನು ಸ್ವಾಧೀನ 'ಪಡಿಸಿಕೊಳ್ಳುವ ಪ್ರಕ್ರಿಯೆಯನ್ನೇ ರಿಯಲ್‌ಎಸ್ಟೇಟ್ ದಂಧೆ ಮಾಡಿಕೊಳ್ಳಲು ಬಳಸಲಾಯಿತು. ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಅದನ್ನು ಕಬಳಿಸಲಾಗಿದೆ. ನೈಸ್ ಕಂಪೆನಿಯೊಂದಿಗೆ ಯಾವುದೇ ಅಲೈನ್‌ಮೆಂಟ್ ಇಲ್ಲದೆಯೇ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (KIADB)ದ ಮೂಲಕ ಸಾವಿರಾರು ಎಕರೆ ಖಾಸಗೀ ಜಮೀನುಗಳನ್ನು ವಶಪಡಿಸಿಕೊಳ್ಳುವ ಅಧಿಸೂಚನೆಯನ್ನು ಹೊರಡಿಸಿ ನಂತರ ತಮಗೆ ಬೇಕಾದವರ ಮತ್ತು ತಮ್ಮನ್ನು ತೃಪ್ತಿಪಡಿಸಿದವರ(!) ಜಮೀನುಗಳನ್ನು ಅಧಿಸೂಚನೆಯಿಂದ ಕೈಬಿಟ್ಟು ಸಂಬಂಧಪಟ್ಟ ಮಂತ್ರಿಗಳು ಹಾಗೂ ಅಧಿಕಾರಿಗಳು ಕೋಟಿಗಟ್ಟಲೆ ಗಳಿಸಿದ್ದಾರೆ. ಈ ಕಂಪೆನಿಗೆ ಸರ್ಕಾರದಿಂದ ಸೌಲಭ್ಯಗಳನ್ನು ನೀಡಿದವರು ಮತ್ತು ಭೂಮಿ ನೀಡುವಾಗ ಸೇವೆಯಲ್ಲಿದ್ದ ಕೆಐಎಡಿಬಿ ಅಧಿಕಾರಿಗಳು ನಿವೃತ್ತಿ ಆದ ಮೇಲೆ ಈಗ ನೈಸ್ ಕಂಪೆನಿಯಲ್ಲಿ ನೌಕಾರರಾಗಿಯೋ ಅಥವಾ ಸಲಹೆಗಾರರಾಗಿಯೋ ಕೆಲಸ ಮಾಡುತ್ತಿದ್ದಾರೆ.

1997ರಲ್ಲಿ ರಾಜ್ಯ ಮಂತ್ರಿಮಂಡಲವು ಈ ಯೋಜನೆಗಾಗಿ ಒಟ್ಟು 20,193 ಎಕರೆ ಭೂಮಿಯನ್ನು ಮಂಜೂರು ಮಾಡಿತ್ತು. ಆದರೆ ಕೆಐಎಡಿಬಿ ಒಟ್ಟು 29,140 ಎಕರೆ ಭೂಮಿ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿತು. ಹೆಚ್ಚುವರಿಯಾಗಿ 8,953 ಎಕರೆ ಭೂಮಿಗೆ ಅಧಿಸೂಚನೆಯನ್ನು ಹೊರಡಿಸಿ ಆನಂತರ ಅಧಿಸೂಚನೆಯನ್ನು ರದ್ದುಗೊಳಿಸಿ ಅನಾಯಾಸ ಬಂದ ಆದಾಯವನ್ನು ಜೇಬಿ ಗಿಳಿಸಿಕೊಳ್ಳಲಾಯಿತು. ಕೆಐಎಡಿಬಿ ಮೊದಲು ಭೂಸ್ವಾಧಿನಕ್ಕೆ ಅಧಿಸೂಚನೆ ಹೊರಡಿಸುತ್ತದೆ. ಆನಂತರ ಭೂಮಾಲಕರ ಕೋರಿಕೆಯ ಮೇರೆಗೆ ಅಧಿಸೂಚನೆಯನ್ನು ರದ್ದುಗೊಳಿಸಲಾಯಿತು ಎಂದು ಹೇಳಲಾಗುತ್ತದೆ. ದೇವೇಗೌಡರ ಪ್ರಕಾರ ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಉತ್ತರ ತಾಲ್ಲೂಕುಗಳಲ್ಲಿ ಒಟ್ಟು 8,088 ಎಕರೆ ಭೂಸ್ವಾಧೀನಕ್ಕಾಗಿ ಅಧಿಸೂಚನೆ ಹೊರಡಿಸಲಾಗಿತ್ತು. ಅದರಲ್ಲಿ 2,166 ಎಕರೆ ಸರ್ಕಾರಿ ಭೂಮಿ, 1,351 ಎಕರೆ ಸರ್ಕಾರ ವಿತರಣೆ ಮಾಡಿದ ಭೂಮಿ ಮತ್ತು 3,571 ಎಕರೆ ಸರ್ಕಾರ ವಿತರಣೆ ಮಾಡಿದ ಭೂಮಿ ಮತ್ತು 3,571 ಎಕರೆ ಖಾಸಗಿ ಭೂಮಿ. ಇಷ್ಟು



ಭೂಮಿಯನ್ನು ಯೋಜನೆಯ ಮೊದಲ ಹಂತಕ್ಕಾಗಿ ಒದಗಿಸಲಾಗಿತ್ತು. ಆದರೆ ನೈಸ್ ಕಂಪೆನಿ ಎಷ್ಟು ಭೂಮಿಯನ್ನು ಪಡೆದಿದೆ, ಎಷ್ಟು ಭೂಮಿಯನ್ನು ಯೋಜನೆಗಾಗಿ ಉಳಿಸಿಕೊಂಡಿದೆ ಮತ್ತು ಎಷ್ಟು ಭೂಮಿಯನ್ನು ರಿಯಲ್ ಎಸ್ಟೇಟ್‌ಗಾಗಿ ಮಾರಾಟ ಮಾಡುತ್ತಿದೆ ಎನ್ನುವುದು ಸಮಗ್ರ ತನಿಖೆಯಿಂದ ಮಾತ್ರ ಗೊತ್ತಾಗಬಹುದು. ನೈಸ್ ಕಂಪೆನಿ ಮಾತ್ರ ತಾನು ಕೊಂಡುಕೊಂಡ ಬೆಲೆಗಿಂತಲೂ ಅನೇಕ ಪಟ್ಟು ಅಧಿಕ ಬೆಲೆಗೆ ಭೂಮಿಯನ್ನು ಮಾರಾಟ ಮಾಡುತ್ತಿದೆ ಎಂದು ಜನ ಆಡಿಕೊಳ್ಳುತ್ತಿದ್ದಾರೆ.

ಸುಮಾರು 5000 ಎಕರೆ ಸರ್ಕಾರಿ ಭೂಮಿಯನ್ನು ಈ ಯೋಜನೆಯ ಹೆಸರಿನಲ್ಲಿ ಎಕರೆಗೆ ಕೇವಲ 10 ರೂ. ದರದಲ್ಲಿ ನೈಸ್ ಕಂಪೆನಿಗೆ ಗುತ್ತಿಗೆ ನೀಡಲಾಗಿದೆ. ಹಿಂದಿನ ಕೃಷ್ಣ ಸರ್ಕಾರ ಮನಸ್ಸಿಗೆ ಬಂದಂತೆ ಕೆಐಎಡಿಬಿ ಮೂಲಕ ಭೂಮಿಯನ್ನು ನೈಸ್ ಕಂಪೆನಿಗೆ ಕೊಡುತ್ತಾ ಹೋಗಿದೆ ಎಂಬ ಗಂಭೀರ ಆರೋಪ ಕೇಳಿಬರುತ್ತಿದೆ. ಬೆಂಗಳೂರು ನಗರದ ಸುತ್ತ ಮುತ್ತ ಇರುವ ಅತ್ಯಂತ ಬೆಲೆಬಾಳುವ ಭೂಮಿಯನ್ನು ರಿಯಲ್ ಎಸ್ಟೇಟ್ ದಂಧೆಗೆ ಬಳಸಿಕೊಳ್ಳಲು ಹಿಂದಿನ ಮುಖ್ಯಮಂತ್ರಿ ಪರವಾನಿಗೆ ನೀಡಿದ್ದಾರೆ ಎನ್ನಲಾಗುತ್ತಿದೆ.

2002 ಸಪ್ಟಂಬರ್ ತಿಂಗಳಲ್ಲಿ, ನೈಸ್ ಕಂಪೆನಿಗೆ ಶೇಕಡ 100ರಷ್ಟು ಸ್ಟಾಂಪ್ ಶುಲ್ಕ ಮತ್ತು ರಿಜಿಸ್ಟ್ರೇಷನ್ ಶುಲ್ಕ ರಿಯಾಯ್ತಿ ನೀಡಲಾಗಿದೆ. ನೈಸ್ ಕಂಪೆನಿಯು ನಿವೇಶನಗಳನ್ನು ಮಾರಿದಾಗ ಸರ್ಕಾರಕ್ಕೆ 152 ಕೋಟಿ ರೂ.ಗಳ ಆದಾಯ ಸ್ಟಾಮಪ್ ಶುಲ್ಕ ರೂಪದಲ್ಲಿ ವಾಪಸ್ಸು ಬರುತ್ತದೆ ಎಂದು ತೀರ್ಮಾನಿಸಲಾಗಿದೆ. ಈ ತೀರ್ಮಾನಕ್ಕೆ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರೇ ಅನುಮೋದನೆ ನೀಡಿದ್ದಾರೆ. ಅಂದರೆ ನಿವೇಶನಗಳನ್ನು ಮಾರಿಕೊಳ್ಳಲು ನೈಸ್ ಕಂಪೆನಿಗೆ ಮುಖ್ಯಮಂತ್ರಿಯವರೇ ಅನುಮತಿ ನೀಡಿದ್ದಾರೆ ಎಂದು ಇದರ ಅರ್ಥ ಅಲ್ಲವೆ?

ಕೆಐಎಡಿಬಿ ಕಾಯ್ದೆ ಪ್ರಕಾರ ಖಾಸಗೀ ಭೂಮಿಯನ್ನು ಕಂಪೆನಿಯೊಂದು ಪಡೆದು ಕೊಳ್ಳಬೇಕಾದರೆ ಭೂಸ್ವಾಧೀನದ ಶೇ.50 ರಷ್ಟು

ಬಿಎಂಐಸಿ ರದ್ದತಿಗೆ ಕೃಷ್ಣ ಆಗ್ರಹ - ಹೆಚ್ಚುವ ಸಂಶಯ!

ಬೆಂಗಳೂರು - ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯನ್ನು ರದ್ದುಗೊಳಿಸಿ, ಸ್ವಾಧೀನ ಪಡಿಸಿಕೊಂಡಿರುವ ಭೂಮಿಯನ್ನು ಆಯಾ ರೈತರಿಗೆ ವಾಪಸ್ ಕೊಡಬೇಕು ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಒತ್ತಾಯಿಸಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿ ಧರ್ಮಸಿಂಗ್ ಅವರಿಗೆ ಪತ್ರ ಬರೆದಿರುವ ಕೃಷ್ಣ ಈ ಕುರಿತು ಆಧಾರರಹಿತವಾದ ಆರೋಪಗಳನ್ನು ಮಾಡಿ ಪಕ್ಷದ ನಾಯಕತ್ವದ ವರ್ಚಸ್ಸಿಗೆ ಧಕ್ಕೆ ತರುವ ಸಂಚು ಪಡೆದಿದೆ ಎಂದು ಆರೋಪಿಸಿದ್ದಾರೆ.


ಕಾರಿಡಾರ್ ಯೋಜನೆಯ ಅಕ್ರಮಗಳಲ್ಲಿ ತಾವು ಭಾಗಿ ಎಂದು ದೇವೇಗೌಡರು ಮಾಡಿರುವ ಆರೋಪಗಳ ಹಿನ್ನೆಲೆಯಲ್ಲಿ ಕೃಷ್ಣ ಮುಖ್ಯಮಂತ್ರಿ ಧರ್ಮಸಿಂಗ್ ಅವರಿಗೆ ಐದು ಪುಟಗಳ ಪತ್ರ ಬರೆದಿದ್ದಾರೆ. ದೇವೇಗೌಡರ ಆಪಾದನೆಗಳು ಹಾಗೂ ವಿಧಾನಮಂಡಲದ ಒಳಗೆ ಮತ್ತು ಹೊರಗೆ ಕೇಳಿ ಬಂದ ಟೀಕೆಗಳ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಸತ್ಯಾಂಶ ಮನವರಿಕೆ ಮಾಡಿಕೊಡಲು ಈ ಪತ್ರ ಬರೆಯುತ್ತಿರುವುದಾಗಿ ಕೃಷ್ಣ ತಿಳಿಸಿದ್ದಾರೆ.

ತುಂಬ ಸೋಜಿಗವಾಗಿದೆ ಕೃಷ್ಣ ಅವರ ಈ ವಾದ! 'ಹಾದರಕ್ಕೆ ಹುಟ್ಟಿದ ಮಗು ಎಂದಾದರೆ ಅದನ್ನು ಚರಂಡಿಗೆ ಎಸೆದುಬಿಡಿ' ಎನ್ನುವಂತಿದೆ ಅವರ ಕೋರಿಕೆಯ ದಾಟಿ. ಯೋಜನೆಯಲ್ಲಿ ಅಕ್ರಮಗಳು ನಡೆದಿದ್ದರೆ, ಯೋಜನೆಯನ್ನೇ ರದ್ದುಮಾಡಿ, ಪ್ರಕರಣವನ್ನು ಮುಚ್ಚಿಹಾಕಿ ಎಂದು ಕೃಷ್ಣ ರಾಜ್ಯ ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದಾರೆ! ಇದು ಜವಾಬ್ದಾರಿಯುತ ಸ್ಥಾನವನ್ನು ಅಲಂಕರಿಸಿದ್ದ ಕೃಷ್ಣ ಅವರಿಗೆ ಶೋಭೆ ತರುವ ಮಾತಲ್ಲ. ಆರೋಪಗಳು ಸುಳ್ಳಿರಬಹುದು, ದುರುದ್ದೇಶದಿಂದ ಕೂಡಿರಬಹುದು. ಕೃಷ್ಣ ಅವರೇ ಹೇಳಿರುವಂತೆ ರಾಜ್ಯದ ಜನತೆಗೆ ನಿಜಾಂಶ ತಿಳಿಯುವ ಹಕ್ಕಿದೆ. ಸತ್ಯ ಬಯಲಿಗೆ ಬರಬೇಕಾದರೆ ತನಿಖೆ ಅನಿವಾರ್ಯ. ತನಿಖೆಯಿಂದ ಕೃಷ್ಣ ನಿರ್ದೋಷಿ ಎಂದು ಸಾಬೀತಾಗಬಹುದು. ಆಗ ಪಕ್ಷದ ನಾಯಕತ್ವದ ವರ್ಚಸ್ಸಿಗೆ ಧಕ್ಕೆಯಾಗುವ ಬದಲು ಗೌರವ ಹೆಚ್ಚಾಗಬಹುದು. ತಾನು ಯಾವುದೇ ತನಿಖೆಯನ್ನು ಎದುರಿಸಲು ಸಿದ್ಧ ಎಂದು ಹೇಳುವ ಮೂಲಕ ತಮ್ಮ ಹಸ್ತಗಳು ಶುದ್ಧವಾಗಿವೆ ಎಂದು ಅವರು ತೋರಿಸಬೇಕಾಗಿತ್ತು. ದೇವೇಗೌಡರ ಸಿ.ಬಿ.ಐ. ತನಿಖೆಯ ಪ್ರಸ್ತಾವವನ್ನು ಸ್ವಾಗತಿಸುವ ಬದಲು ಯೋಜನೆಯನ್ನೇ ರದ್ದು ಮಾಡಲು ಕೃಷ್ಣ ಸೂಚನೆ ನೀಡುತ್ತಿರುವುದು ಸಾರ್ವಜನಿಕರಲ್ಲಿ ಹೆಚ್ಚು



ಸಂಶಯಕ್ಕೆ ಕಾರಣವಾಗಿದೆ.

ಎಸ್.ಎಂ.ಕೃಷ್ಣ ಅವರು ಸುಮಾರು 5 ವರ್ಷ ಕಾಲ ರಾಜ್ಯದ ಮುಖ್ಯ ಮಂತ್ರಿಯಾಗಿದ್ದರು. ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆಯ ಬಹುತೇಕ ವ್ಯವಹಾರಗಳು ನಡೆದಿದ್ದು ಕೃಷ್ಣ ಅವರ ಅಧಿಕಾರಾವಧಿಯಲ್ಲಿ. ಈ ಯೋಜನೆಯ ಕುರಿತಾಗಿ ವಾದವಿವಾದಗಳು ಅಂದ ನಡೆಯುತ್ತಿದ್ದವು. ಯೋಜನೆಯ ಅವ್ಯವಹಾರಗಳು ಅಂದು ಕೃಷ್ಣ ಗಮನಕ್ಕೆ ಬರಲಿಲ್ಲವೆ? ಬಂದಿದ್ದರೆ ಆಗಲೇ ಯೋಜನೆಯನ್ನು ರದ್ದು ಪಡಿಸಬಹುದಿತ್ತಲ್ಲವೆ? ಅಂದಿನ ಎಲ್ಲ ಟೀಕೆಗಳನ್ನು ತಳ್ಳಿಹಾಕಿ ಯೋಜನೆಯನ್ನು ಮುಂದುವರೆಯಲು ಬಿಟ್ಟು ಈಗ ಅಧಿಕಾರ ಕಳೆದುಕೊಂಡ ನಂತರ ಯೋಜನೆಯನ್ನೇ ರದ್ದುಮಾಡಿ ಎಂದು ಹೇಳುತ್ತಿರುವುದು ಎಷ್ಟು ಸಮಂಜಸ?



...ರಿ ದರೋಡೆ

ಹಣವನ್ನು ಮುಂಗಡವಾಗಿ ಠೇವಣಿ ಇಡಬೇಕು. ನೈಸ್ ಕಂಪೆನಿಯು ಈ ಠೇವಣಿ ಇಟ್ಟಿಲ್ಲ. ಆದರೂ ಭೂಮಿ ಕಂಪೆನಿಗೆ ಹಸ್ತಾಂತರವಾಗಿದೆ. ಈ ವಿಶೇಷ ರಿಯಾಯ್ತಿಯನ್ನು ಕಂಪೆನಿಗೆ ದಯಪಾಲಿಸುವಲ್ಲಿ ಹಿಂದಿನ ಕೈಗಾರಿಕಾ ಸಚಿವರಾದ ಆರ್.ವಿ. ದೇಶಪಾಂಡೆ ಹಾಗೂ ಮುಖ್ಯ ಕಾರ್ಯದರ್ಶಿ ಬಿ.ಎಸ್.ಪಾಟೀಲರ ನಾಮಸ್ಮರಣೆಯ ಪ್ರಭಾವವಿದೆ ಎನ್ನಲಾಗುತ್ತಿದೆ!

ಸರ್ಕಾರದಿಂದ ಪಡೆದ ಭೂಮಿಯನ್ನು ನೈಸ್ ಕಂಪೆನಿಯು ಐಸಿಐಸಿಐ ಬ್ಯಾಂಕ್‌ಗೆ ಅಡವಿಟ್ಟು 150 ಕೋಟಿ ರೂ. ಸಾಲ ಪಡೆದುಕೊಂಡಿದೆ. ಈ ಪೈಕಿ ಕೇವಲ 20 ಕೋಟಿ ರೂ.ಗಳನ್ನು ಮಾತ್ರ ಕೆಐಎಡಿಬಿಗೆ ಪಾವತಿಸಿದೆ. ಆದರೆ ಅದರ ಬ್ಯಾಂಕ್ ಖಾತೆಯಲ್ಲಿ ಹಣವಿಲ್ಲ. ಹಾಗಾದರೆ ಉಳಿದ 130 ಕೋಟಿ ರೂ. ಯಾರ್‍ಯಾರ ಜೇಬಿಗೆ ಸೇರಿತು?

ನೈಸ್ ಕಂಪೆನಿಗೆ ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಲೀಸ್ ಆಧಾರದಲ್ಲಿ ನೀಡಲಾಗಿದೆ. ಆಶ್ಚರ್ಯದ ಸಂಗತಿ ಎಂದರೆ ಈ ಪೈಕಿ ಬಹಳಷ್ಟು ಭೂಮಿಯನ್ನು ಭೂಮಂಜೂರಾತಿ ಕಾಯ್ದೆ ಅಡಿಯಲ್ಲಿ ದಲಿತರಿಗೆ, ಬಡರೈತರಿಗೆ ಮಂಜೂರಾತಿ ಮಾಡಲಾಗಿತ್ತು. ಅಂತಹ ಮಂಜೂರಾತಿಗಳನ್ನು ರದ್ದು ಮಾಡದೆ, ಫಲಾನುಭವಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡದೆ ತರಾತುರಿಯಲ್ಲಿ ಭೂಮಿಯನ್ನು ಕಂಪೆನಿಗೆ ನೀಡುವ ಮೂಲಕ ಭೂಕಂದಾಯ ಕಾಯ್ದೆ ಮತ್ತು ಭೂಮಂಜೂರಾತಿ ನಿಯಮಗಳ ಉಲ್ಲಂಘನೆ ಮಾಡಲಾಗಿದೆ.

ಕವಿರಂ ವಿರೋಧ - ಹಾಸ್ಯಾಸ್ಪದ :

ಬಿಎಂಐಸಿ ಯೋಜನೆ ಯಲ್ಲಿ ನಡೆದಿರುವ ಅಕ್ರಮಗಳ ಕುರಿತಾಗಿ ವ್ಯಕ್ತವಾದ ವ್ಯಾಪಕ ಟೀಕೆ ಮತ್ತು ವಿವಾದದ ಹಿನ್ನೆಲೆಯಲ್ಲಿ ಯೋಜನೆ ಯನ್ನೇ ರದ್ದಪಡಿಸಬೇಕು ಎಂದು ಅಂದಿನ ಮುಖ್ಯಮಂತ್ರಿ ಕೃಷ್ಣ ಹೇಳುತ್ತಿರುವಾಗಲೇ ಜನರ ನಡುವೆ ನೆಲೆ ಇಲ್ಲದ ಕರ್ನಾಟಕ ವಿಮೋಚನಾ ರಂಗ ಎಂಬ ನಕ್ಸಲೀಯ ಸಂಘಟನೆಯೂ ಕೂಡಾ ಈ ಯೋಜನೆಯ ರದ್ದತಿಗೆ ಆಗ್ರಹಿಸಿದೆ. ತಾವು ಈ ಯೋಜನೆಯನ್ನು ಮೊದಲಿನಿಂದಲೂ ವಿರೋಧಿಸುತ್ತಾ ಬಂದಿದ್ದು ಈಗ ಅದು ರದ್ದಾಗಬೇಕು ಎಂಬುದು ಅದರ ವಾದ. ಅಕ್ರಮ ವ್ಯವಹಾರಗಳಲ್ಲಿ ಪಾಲುದಾರರಾಗಿರುವ ವಿರುದ್ಧ ಕ್ರಮ ಕೈಗೊಳ್ಳಬೇಕು, ಭೂಮಿ ಕಳೆದುಕೊಂಡ ರೈತರಿಗೆ ಯೋಗ್ಯ ಪರಿಹಾರ ಕೊಡಬೇಕು ಎಂದು ಪ್ರತಿಪಾದಿಸುವ ಬದಲು ಆ ಯೋಜನೆಯೇ ಬೇಕಾಗಿಲ್ಲ ಎಂಬ ಇವರ ಧೋರಣೆಗೆ ಅವರ ತಪ್ಪು ರಾಜಕೀಯ ಇನ್ನೋಟವೇ ಕಾರಣ. ನಕ್ಸಲೀಯರ ಪ್ರಕಾರ ನಮ್ಮ ದೇಶದಲ್ಲಿ ಪಾಳೆಗಾರಿ ಉತ್ಪಾದನಾ ವ್ಯವಸ್ಥೆಯೇ ಮುಂದುವರೆದಿದೆ. ಬಂಡವಾಳಶಾಹಿ ಪದ್ಧತಿ ಇನ್ನೂ ಬೆಳೆದು ಬಂದಿಲ್ಲ. 'ಇಂದಿನ ಬಂಡವಾಳಿಗರು ಕೇವಲ ದಲ್ಲಾಳಿ ಬಂಡವಾಳಶಾಹಿಗಳು' (ಲಂಕೇಶ್ ಪತ್ರಿಕೆ ಜುಲೈ 14, 2004). ತಮ್ಮ ಈ ತಪ್ಪು ತಿಳುವಳಿಕೆಯನ್ನು ಉಳಿಸಿಕೊಳ್ಳಲು ಈ ದೇಶದಲ್ಲಿ ಆಗುತ್ತಿರುವ ಬಂಡವಾಳಶಾಹಿ ಬೆಳವಣಿಗೆಯ ಮೇಲೆ ಅವರು ಕಣ್ಣು ಮುಚ್ಚಿಕೊಳ್ಳಲು ಬಯಸುತ್ತಾರೆ. ಪಾಳೇಗಾರಿ ಲಕ್ಷಣಗಳನ್ನು ಮತ್ತು ಅದರ ಪಳೆಯುಳಿಕೆಗಳನ್ನು ಉಳಿಸಿಕೊಂಡು ಹೋಗುವುದಕ್ಕಾಗಿ ಅವರು ಎಲ್ಲ ಅಭಿವೃದ್ಧಿ ಯೋಜನೆಗಳನ್ನು ವಿರೋಧಿಸುತ್ತಾರೆ. ಒಮ್ಮೆ ರೈತರ ಹೆಸರಿನಲ್ಲಿ, ಮತ್ತೊಮ್ಮೆ ಆದಿವಾಸಿಗಳ ಹೆಸರಿನಲ್ಲಿ, ಮಗದೊಮ್ಮೆ ಪರಿಸರದ ಹೆಸರಿನಲ್ಲಿ ಅವರು ಜನತೆಯನ್ನು ದಾರಿತಪ್ಪಿಸುತ್ತಿದ್ದಾರೆ. ಬಂಡವಾಳಶಾಹಿ ಅಭಿವೃದ್ಧಿಯ ಜೊತೆ ಜೊತೆಯಲ್ಲೇ ಬಂಡವಾಳಶಾಹಿ ಹಾಗೂ ಅದರ ಪೂರ್ವದ ಎಲ್ಲಾ ಶೋಷಕ ವರ್ಗಗಳನ್ನು ಎದುರಿಸಿ ಸೋಲಿಸಬಲ್ಲ ಕ್ರಾಂತಿಕಾರಿ ಶಕ್ತಿಗಳು ಬೆಳೆದು ಬರುವುದನ್ನು ಅವರು ಗಮನಿಸಲು ಸಿದ್ಧರಿಲ್ಲ.

ನೈಸ್ ಕಂಪೆನಿಯಿಂದ ಆರೋಪ ನಿರಾಕರಣೆ :

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಬಿಎಂಐಸಿ ಯೋಜನೆಯನ್ನು ರದ್ದು ಪಡಿಸಬೇಕು ಎಂದು ಹೇಳಿಕೆ ನೀಡಿದ ವಿಚಾರಕ್ಕೆ ನೈಸ್ ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಖೇಣಿ ಆಶ್ಚರ್ಯ ವ್ಯಕ್ತಪಡಿಸಿದ್ದಾರಲ್ಲದೆ ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ಸ್ವಾಧೀನ ಪಡಿಸಿ ರಿಯಲ್ ಎಸ್ಟೇಟ್‌ಗಾಗಿ ಬಳಸಿಕೊಳ್ಳಲಾಗಿದೆ ಎಂಬ ಆರೋಪವನ್ನು ಅಲ್ಲಗಳೆದಿದ್ದಾರೆ. ವಶಪಡಿಸಿಕೊಳ್ಳಲಾದ ಒಟ್ಟು ಭೂಮಿಯಲ್ಲಿ ಶೇ.40 ರಷ್ಟು ಭೂಮಿ ಉನ್ನತ ಮಟ್ಟದಲ್ಲಿ ಭಾರೀ ಪ್ರಭಾವ ಇರುವ ವ್ಯಕ್ತಿಗಳಿಗೆ ಸೇರಿದ್ದು. ಆದ್ದರಿಂದ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾಗಿದೆ. ಕೆಲ ಐಎಎಸ್ ಅಧಿಕಾರಿಗಳಿಗೆ ಸೇರಿದ ಭೂಮಿಯನ್ನು ವಶಪಡಿಸಿಕೊಳ್ಳಲಾಗಿರುವುದರಿಂದ ಅವರೂ ಸಿಡಿದೆದ್ದಿದ್ದಾರೆ. ಕೆಲವು ಭೂಗಳ್ಳರು ಭೂಮಿಯ ಮೂಲ ಒಡೆಯರಿಂದ 'ಜನರಲ್ ಪವರ್ ಆಫ್ ಆಟಾರ್ನಿ' ಪಡೆದುಕೊಂಡು ಹೆಚ್ಚಿನ ಪರಿಹಾರಕ್ಕೆ ಪೀಡಿಸತೊಡಗಿದ್ದರು. ಅವರ ಬೇಡಿಕೆಗಳಿಗೆ ಮಣೆ ಹಾಕದಿದ್ದಾಗ ಅವರು ನಮ್ಮ ವಿರುದ್ಧ ಕತ್ತಿ ಮಸೆಯತೊಡಗಿದರು ಎಂದು ಅವರು ಹೇಳುತ್ತಾರೆ. ಈ ಯೋಜನೆ ವಿಳಂಬಕ್ಕೆ ಕೆಲವು ಕಾನೂನಿನ ತೊಡಕುಗಳು ಮತ್ತು ವಿವಿಧ ಇಲಾಖೆಗಳಿಂದ ಬರಬೇಕಾಗಿದ್ದ ಪರವಾನಗಿಗಳು ಬರುವುದು ತಡವಾದದ್ದೇ ಕಾರಣ ಎನ್ನುವ ಅವರು ಈ ಯೋಜನೆ ಖಂಡಿತ ಪೂರ್ಣಗೊಳ್ಳುತ್ತದೆ, ಹಿಂದೆ ಹೋಗುವ ಪ್ರಶ್ನೆಯೇ ಇಲ್ಲ. ಸರ್ಕಾರದೊಂದಿಗೆ ಕಾನೂನು ಬದ್ಧ ಒಪ್ಪಂದವಾಗಿದೆ. ನಾವು ಯಾವುದೇ ನಿಯಮಾವಳಿಗಳನ್ನು ಉಲ್ಲಂಘಿಸಲಿಲ್ಲ. ಈ ಯೋಜನೆಯನ್ನು ನಾನು ಪೂರ್ಣಗೊಳಿಸಿದರೆ, ಐ.ಟಿ. ಕ್ಷೇತ್ರಕ್ಕೆ ನಾರಾಯಣ ಮೂರ್ತಿ ಏನು ಮಾಡಿದರೋ ಅದೇ ಸಾಧನೆಯನ್ನು ನಾನೂ ಮಾಡಿದಂತಾಗುತ್ತದೆ. ಕಾರಿಡಾರ್ ಯೋಜನೆ ಜಾರಿಗೆ ಬಂದರೆ ಇದೇ ರೀತಿಯ ಹಲವಾರು ಯೋಜನೆಗಳು ದೇಶದಲ್ಲಿ ಬರಲು ಪ್ರೇರಣೆಯಾಗುತ್ತದೆ ಎಂದು ಅಶೋಕ್ ಖೇಣೀ ಸಮರ್ಥಿಸಿಕೊಳ್ಳುತ್ತಾರೆ.

ಯೋಜನೆ ಪರಿಶೀಲನೆಗೆ ಧರಂ ಆದೇಶ

175 ಕೋಟಿ ರೂ. ಅವ್ಯವಹಾರ ನಡೆದಿದೆ ಎನ್ನಲಾದ 'ತಾಜ್ ಹೆರಿಟೇಜ್ ಕಾರಿಡಾರ್' ಹಗರಣಕ್ಕಿಂತ ಹತ್ತು ಪಟ್ಟು ದೊಡ್ಡದಾದ ಈ ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆಯನ್ನು ಮರುಪರಿಶೀಲನೆ ಮಾಡಿ, ಅಕ್ರಮಗಳು ಜರುಗಿದ್ದು ನಿಜವಾದಲ್ಲಿ ತಪ್ಪತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ಅಂದಿನ ಲೋಕೋಪಯೋಗಿ ಸಚಿವರು ಇಂದಿನ ಮುಖ್ಯಮಂತ್ರಿಗಳೂ ಆಗಿರುವ ಧರಂ ಸಿಂಗ್ ಆದೇಶ ನೀಡಿದ್ದಾರೆ. ವಿಧಾನಸಭೆಯಲ್ಲಿ ಜನತಾದಳ (ಯು)ನ ಜೆ.ಸಿ. ಮಾಧುಸ್ವಾಮಿ ಮತ್ತು ಸಿಪಿಐ(ಎಂ)ನ ಜಿ.ವಿ. ಶ್ರೀರಾಮರೆಡ್ಡಿ ಈ ಪ್ರಶ್ನೆಯನ್ನು ಎತ್ತಿದ್ದರು.

ಯೋಜನೆಯ ಹೆಸರಿನಲ್ಲಿ ರಿಯಲ್ ಎಸ್ಟೇಟ್ ದಂಧೆ ನಡೆದಿರುವುದು ಕಂಡು ಬಂದರೆ ನೈಸ್ ಕಂಪೆನಿ ಹಾಗೂ ಸಂಬಂಧ ಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂಬ ಮುಖ್ಯಮಂತ್ರಿಗಳ ನಿಲುಮೆ ಸ್ವಾಗತಾರ್ಹವಾಗಿದೆ. ಬೆಳೆಯುತ್ತಿರುವ ಜನಸಂಖ್ಯೆಯನ್ನು ಗಮನಿಸಿ, ಬೆಂಗಳೂರು - ಮೈಸೂರ್ ನಡುವಿನ ಪ್ರಯಾಣದ ಅವಧಿಯನ್ನು ಕಡಿಮೆಗೊಳಿಸುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ ಎಂದೂ ಈ ಯೋಜನೆಗಾಗಿ ಲೀಜ್ ಆಧಾರದಲ್ಲಿ ನೀಡಲಾದ 5000 ಎಕರೆ ಸರ್ಕಾರಿ ಭೂಮಿ 30 ವರ್ಷಗಳ ಅವಧಿಯ ನಂತರ ಪುನಃ ಸರ್ಕಾರದ ಆಸ್ತಿಯಾಗಲಿದೆ ಎಂದೂ ಅಭಿವೃದ್ಧಿ ಯೋಜನೆಗಳಿಗೆ ಇಂತಹ ಪ್ರೋತ್ಸಾಹ ಅಗತ್ಯವಿದೆ ಎಂದು ಅವರು ವಿವರಣೆ ನೀಡುತ್ತಾರೆ. ಈ ರಸ್ತೆ ನಿರ್ಮಾಣ ಯೋಜನೆಗೆ ತೊಡಗಿಸುವ ಹಣ ಕೇವಲ ಸುಂಕದಿಂದ ವಾಪಸ್ಸು ಬರುವುದಿಲ್ಲ ಎಂಬ ಕಾರಣಕ್ಕಾಗಿ ಐದು ಉಪನಗರಗಳ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಗಿದೆ ಎನ್ನುವ ಅವರು ಯೋಜನೆಯ ಯಾವ ಹಂತದಲ್ಲಿ ಅಕ್ರಮಗಳಾಗಿವೆ ಎನ್ನುವುದನ್ನು ಪರಿಶೀಲಿಸಿ ಸರಿಪಡಿಸಬೇಕೇ ಹೊರತು ಯೋಜನೆಯನ್ನು ನಿಲ್ಲಿಸುವ ಅಭಿಪ್ರಾಯವಿಲ್ಲ ಎಂದು ಅವರು ಹೇಳಿದ್ದಾರೆ.

ಈ ನಡುವೆ ಪ್ರಸಕ್ತ ಲೋಕೋಪಯೋಗಿ ಸಚಿವರಾದ ಎಚ್.ಡಿ.ರೇವಣ್ಣ ಮೊದಲ ಹಂತದ ರೋಡ್ ಅಲೈನ್‌ಮೆಂಟ್ ಕುರಿತಾದ ವಿವರವಾದ ವರದಿಗೆ ಆದೇಶ ನೀಡಿದ್ದಾರೆ ಮತ್ತು ಎಲ್ಲ ಭೂಸ್ವಾಧೀನ ಪ್ರಕ್ರಿಯೆಯನ್ನು ನಿಲ್ಲಿಸಿದ್ದಾರೆ. ಯೋಜನೆಯನ್ನು ಮರುಪರಿಶೀಲನೆಗೆ ಒಳಪಡಿಸುವ ಮುಖ್ಯಮಂತ್ರಿಯವರ ನಿರ್ಧಾರವನ್ನು ಹೆಚ್.ಡಿ.ದೇವೇಗೌಡರು ಸ್ವಾಗತಿಸಿದ್ದಾರೆ. ಯಾವ ರೀತಿಯ ತನಿಖೆ ನಡಸಬೇಕೆಂಬುದು ಮುಖ್ಯಮಂತ್ರಿಯವರ ನಿರ್ಧಾರಕ್ಕೆ ಬಿಟ್ಟದ್ದು. ಕಾಂಗ್ರೆಸ್ ಪಕ್ಷವನ್ನು ನಾಶ ಮಾಡುವುದು ನನ್ನ ಉದ್ದೇಶವಲ್ಲ. ಇದು ಜನತೆಗೆ ಸಂಬಂಧಪಟ್ಟ ವಿಚಾರ. ನಾನು ದಾಖಲೆ ಸಹಿತವಾಗಿ ನನ್ನ ಆರೋಪಗಳನ್ನು ಮಾಡಿದ್ದೇನೆ. ಈ ಸರ್ಕಾರ ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದ್ದಾರೆ. **ಧರಂ ಸಿಂಗ್ ಅವರು ದೇವೇಗೌಡರನ್ನು ಕಂಡು ಮಾತುಕತೆ ನಡೆಸಿದ ಬಳಿಕ ಕದನ ವಿರಾಮ ಘೋಷಣೆಯಾದಂತೆ ಕಾಣುತ್ತದೆ. ರಾಜ್ಯದ ಜನತೆ ಮಾತ್ರ ಸತ್ಯಾಂಶ ತಿಳಿಯಲು ಕಾತರವಾಗಿದೆ.** ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಬೇಕು, ಯೋಜನೆಯಿಂದ ಸಂತ್ರಸ್ಥರಾದವರಿಗೆ ಸರಿಯಾದ ಪರಿಹಾರ ನೀಡಿ ಪುನರ್ವಸತಿ ಕಲ್ಪಿಸಬೇಕು ಹಾಗೂ ಯೋಜನೆ ವಿಳಂಭವಿಲ್ಲದೆ ಪೂರ್ಣಗೊಳ್ಳಬೇಕು, ಇಡೀ ಯೋಜನೆಯಲ್ಲಿ ಸರ್ಕಾರ ಪಾರದರ್ಶಕತೆಯನ್ನು ಎತ್ತಿ ಹಿಡಿಯಬೇಕು ಎಂಬುದೇ ಎಲ್ಲ ಪ್ರಗತಿಪರ ಶಕ್ತಿಗಳ ನಿರೀಕ್ಷೆಯಾಗಿದೆ.

ಏನಿದು ಕಾರಿಡಾರ್ ಯೋಜನೆ?:

ಬೆಂಗಳೂರು - ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯ ಅಡಿಯಲ್ಲಿ ಬೆಂಗಳೂರು ಮತ್ತು ಮೈಸೂರು ನಡುವೆ 111 ಕಿ.ಮೀ. ಹೆದ್ದಾರಿ, 41 ಕಿ.ಮೀ. ಉದ್ದದ ಫೆರಿಫೆರಲ್ ರಸ್ತೆ ಮತ್ತು 9.5 ಕಿ.ಮೀ. ಉದ್ದದ ಲಿಂಕ್ ರಸ್ತೆಗಳನ್ನು ನಿರ್ಮಾಣ ಮಾಡಬೇಕಾಗಿತ್ತು. 1995ರಲ್ಲಿ ಕರ್ನಾಟಕ ಸರ್ಕಾರವು ಅಮೆರಿಕಾ ಮೂಲದ **ಏನಾಸೇ ಹ್ಯಾಂಗೆನ್ ಬ್ರೂಸ್‌ಲಿನ್ ಇಂಕ್ ಕಂಪೆನಿ** ಮತ್ತು ನಮ್ಮ ದೇಶದ **ಕಲ್ಯಾಣಿ ಗ್ರೂಪ್ ಲಿಮಿಟೆಡ್** ಇವರುಗಳಿಗೆ ಈ ಯೋಜನೆಯನ್ನು ಒಪ್ಪಿಸಿ ಒಪ್ಪಂದಕ್ಕೆ ಸಹಿ ಹಾಕಿತ್ತು. ಸದರಿ ಯೋಜನೆಗಾಗಿ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ಹೆದ್ದಾರಿಯನ್ನು ನಿರ್ಮಾಣಮಾಡಲು ಬೇಕಾಗುವ ಬಂಡವಾಳವನ್ನು ಸದರಿ ಕಂಪೆನಿಗಳ ಸಮೂಹವೇ ಹೂಡಬೇಕೆಂದೂ ಹೂಡಿದ ಬಂಡವಾಳವನ್ನು ಟೋಲ್ ವಸೂಲಿ ಮೂಲಕ 30 ವರ್ಷಗಳ ಅವಧಿಯೊಳಗೆ ವಾಪಸ್ ಪಡೆದುಕೊಳ್ಳಬಹುದಾಗಿದೆಯೆಂದು ಒಪ್ಪಿಕೊಳ್ಳಲಾಗಿತ್ತು. ಯೋಜನೆಗಾಗಿ ಹೂಡುವ ಹಣ ಕೇವಲ ಟೋಲ್ ವಸೂಲಿ ಮೂಲಕ ವಾಪಸ್ ಬರುವುದಿಲ್ಲ ಎಂಬುದನ್ನು ಪರಿಗಣಿಸಿ ಬಿಡದಿ ಮತ್ತು ರಾಮನಗರ ಬಳಿ ಎರಡೆರಡು ಉಪನಗರಗಳನ್ನು ಹಾಗೂ ಶ್ರೀರಂಗಪಟ್ಟಣದ ಬಳಿ ಒಂದು ಉಪನಗರವನ್ನು - ಹೀಗೆ ಒಟ್ಟು 5 ಉಪನಗರಗಳನ್ನು ಹೆದ್ದಾರಿ ನಿರ್ಮಾಣದೊಂದಿಗೆ ಸದರಿ ಕಂಪೆನಿಗಳು ಕೈಗೊಳ್ಳಬಹುದೆಂದು ತೀರ್ಮಾನಿಸಲಾಗಿತ್ತು. ಯೋಜನೆಯನ್ನು 10 ವರ್ಷಗಳ ಒಳಗಾಗಿ ಪೂರ್ಣಗೊಳಿಸಬೇಕೆಂದು ನಿರ್ಧರಿಸಲಾಗಿತ್ತು. ಭೂಮಿಯನ್ನು ಕಳೆದುಕೊಳ್ಳುವ ರೈತರಿಗೆ ಬದಲಿ ಭೂಮಿ ಅಥವಾ ಯೋಗ್ಯವಾದ ಮಾರುಕಟ್ಟೆ ಬೆಲೆಯನ್ನು ನೀಡುವುದೆಂದೂ ಒಕ್ಕಲೆಬ್ಬಿಸಲ್ಪಡುವ ಪ್ರತಿಯೊಂದು ಕುಟುಂಬದ ಒಬ್ಬ ಸದಸ್ಯರನಿಗೆ ಒಂದು ನೌಕರಿ ನೀಡುವುದೆಂದು ಒಪ್ಪಲಾಗಿತ್ತು.

1997 ರಲ್ಲಿ ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ (ನೈಸ್) ಎಂಬ ಕಂಪೆನಿಯು ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕುವುದರೊಂದಿಗೆ ಈ 2,000 ಕೋಟಿ ರೂ.ಗಳ ವ್ಯವಹಾರದಲ್ಲಿ ಪಾಲಿಟ್ಟಿತು. ಯೋಜನೆಯ ಮೊದಲ ಹಂತ ಮಾರ್ಚ್ 2003ರಲ್ಲಿ ಮುಕ್ತಾಯವಾಗಬೇಕೆಂದು ಒಪ್ಪಿಕೊಳ್ಳಲಾಯಿತು. ಆದರೆ ಇದುವರೆಗೆ ಒಂದು ಕಿ.ಮೀ. ರಸ್ತೆ ನಿರ್ಮಾಣ ಸಹ ಪೂರ್ಣಗೊಳ್ಳಲಿಲ್ಲ!

ಕೃಷ್ಣ ನೆರವಿಗೆ ಯಡಿಯೂರಪ್ಪ

ಜನತಾ ದಳ ಪಕ್ಷದ ಎರಡು ಬಣಗಳು ಒಂದುಗೂಡದಂತೆ ತಡೆಯುವಲ್ಲಿ ಕೃಷ್ಣರೊಂದಿಗೆ ಕೈಜೋಡಿಸಿದ ಬಿಜೆಪಿಯ ಅನಂತಕುಮಾರ, ಯಡಿಯೂರಪ್ಪ ಮತ್ತು ಈಶ್ವರಪ್ಪಗಳು, ಕಾರಿಡಾರ್ ಹಗರಣದಲ್ಲಿ



ಮುಳುಗಿ ನೀರು ಕುಡಿಯುತ್ತಿದ್ದ ಕೃಷ್ಣರ ಕೈಹಿಡಿಯಲು ಮುಂದಾದದ್ದು ರಾಜ್ಯದ ಜನತೆ ಸರಿಯಾಗಿ ಗಮನಿಸಿದಂತೆ ಕಾಣುವುದಿಲ್ಲ. ದೇವೇಗೌಡರು ದಾಖಲೆ ಸಹಿತ ಕೃಷ್ಣ ಸರ್ಕಾರದ ಭ್ರಷ್ಟಾಚಾರವನ್ನು ಬಯಲಿಗೆಳೆಯುತ್ತಿದ್ದಾಗ ವಿರೋಧ ಪಕ್ಷದ ನಾಯಕನಾಗಿ ತಾನು ಮಾಡಬೇಕಾದ್ದನ್ನು ದೇವೇಗೌಡರು ಮಾಡುತ್ತಿದ್ದಾರೆ ಎಂದು ಒಪ್ಪಿಕೊಳ್ಳಲಾಗದೆ 'ದೇವೇಗೌಡರು ಬ್ಲಾಕ್‌ಮೇಲ್ ತಂತ್ರ ಅನುಸರಿಸುತ್ತಿದ್ದಾರೆ' ಎಂದು ಯಡಿಯೂರಪ್ಪ ಹೇಳಿಕೊಂಡಿದ್ದಾರೆ. ಹಗರಣದ ತನಿಖೆಗೆ ಒತ್ತಾಯಿಸುವ ದೇವೇಗೌಡರ ಜೊತೆ ಧ್ವನಿಗೂಡಿಸುವ ಬದಲು ಇವರು ಕೃಷ್ಣ ಸರ್ಕಾರದ ಹಗರಣಗಳನ್ನು ಮುಚ್ಚಿಹಾಕಲು ಕೈ ಜೋಡಿಸುತ್ತಿರುವುದು ಆಶ್ಚರ್ಯಕರವಾಗಿದೆ. ಕೃಷ್ಣ ಅವರ ಬಗ್ಗೆ ಯಡಿಯೂರಪ್ಪನವರ ಅನುಕಂಪ ಆಕಸ್ಮಿಕವಲ್ಲ. ಹಿಂದೆ ಅನಂತಕುಮಾರ್ ಹುಡ್ಕೊ ಹಗರಣದಲ್ಲಿ ಕೃಷ್ಣರ ಅಳಿಯ ಸಿದ್ಧಾರ್ಥರಿಗೆ ನೆರವಾಗಿದ್ದು ಈಗ ಗುಟ್ಟಾಗಿ ಉಳಿದಿಲ್ಲ. ಜನತಾದಳ(ಎಸ್) ಮೊದಲಿನಿಂದಲೂ ಕೃಷ್ಣ ಸರ್ಕಾರದ ಅಕ್ರಮಗಳ ಬಗ್ಗೆ ಧ್ವನಿ ಎತ್ತುತ್ತಾ ಬಂದಿದೆ. ಈಗ ಸಮ್ಮಿಶ್ರ ಸರ್ಕಾರದಲ್ಲಿ ಪಾಲುದಾರರಾಗಿರುವಾಗಲೂ ಹಗರಣದ ಬಗ್ಗೆ ತನಿಖೆಗೆ ಒತ್ತಾಯಿಸುವ ಅದರ ನಿಲುವು ಸ್ವಾಗತಾರ್ಹವೇ ಆಗಿದೆ.



ವೃತ್ತಿ ಶಿಕ್ಷಣ ರಂಗದಲ್ಲಿ ಉದ್ಭವಿಸಿದ್ದ ಬಿಕ್ಕಟ್ಟು ಬಗೆಹರಿದಂತೆ, ತಣ್ಣಗಾದಂತೆ ಕಾಣುತ್ತಿದೆ. ಆದರೆ ಇದು ತಾತ್ಕಾಲಿಕ ತೆರೆಗೆ ಸರಿಸಲಾದ ವಿಷಯ ! ಹೊಸ ಪ್ರವೇಶ ಹಾಗೂ ಶುಲ್ಕ ನೀತಿಯನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಪೂರ್ಣವಾಗಿ ಒಪ್ಪಿಲ್ಲ. ಅವರು ಮತ್ತೆ ಕದನ ಹೂಡುವ ಗುಟುರು ಹಾಕಿವೆ. ಇಡೀ ಈ ರಂಗದ ಬಿಕ್ಕಟ್ಟಿನ ಕಾರಣ, ಬೆಳೆದುಬಂದ ಪ್ರತಿಭಟನೆ ಹಾಗೂ ವರ್ತಮಾನ, ಭವಿಷ್ಯತ್ತಿನ ಪ್ರಶ್ನೆಗಳತ್ತ ಒಂದು ಹಿನ್ನೋಟ ಬೀರಿದ್ದಾರೆ ವಿದ್ಯಾರ್ಥಿ ನಾಯಕ ರಾಜಶೇಖರಮೂರ್ತಿ

ವೃತ್ತಿ ಶಿಕ್ಷಣದಲ್ಲಿ ಪ್ರತಿಭೆ-ಸಾಮಾಜಿಕ ನ್ಯಾಯಕ್ಕಾಗಿ

ವಿದ್ಯಾರ್ಥಿಗಳ ಸಂಘರ್ಷ

ಬಿ.ರಾಜಶೇಖರಮೂರ್ತಿ

ಶೋಷಣೆಯ ಅಸ್ತ್ರವಾದ ಜಾಗತೀಕರಣದ ಪರಿಣಾಮ ಕೃಷಿ ಕೈಗಾರಿಕಾ ವಲಯಗಳು ದಿವಾಳಿಯಾಗಿರುವಂತೆ ಶಿಕ್ಷಣ ರಂಗವೂ ತೀವ್ರತರ ಬಿಕ್ಕಟ್ಟಿಗೆ ನಿಲುಕಿದೆ.

ಕರ್ನಾಟಕ ರಾಜ್ಯದಲ್ಲಂತೂ ಇಡಿಯಾಗಿ ಶಿಕ್ಷಣ ವ್ಯಾಪಾರೀಕರಣ, ಖಾಸಗೀಕರಣದ ಪರಮಾವಧಿಗೆ ತಲುಪಿದೆ. ವೃತ್ತಿಶಿಕ್ಷಣ ಸಮಸ್ಯೆ ದಿನದಿನಕ್ಕೆ ತಾರಕಕ್ಕೇರುತ್ತಿದೆ. ಆಳುವ ಸರ್ಕಾರಗಳು ಬಂಡವಾಳಶಾಹಿಗಳ ಬಾಲಂಗೋಚಿಗಳಾಗಿ ಜಾಗತೀಕರಣದ ನೀತಿಗಳನ್ನು ಚಾಚೂತಪ್ಪದೇ ಜಾರಿಗೊಳಿಸುವುದರಿಂದ ಹಾಗೂ ನ್ಯಾಯಾಲಯಗಳಿಗೂ ಸಹ ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ ನೀಡಿವೆ. ಈ ಎಲ್ಲವುಗಳ ಪರಿಣಾಮ ಬಡವಿದ್ಯಾರ್ಥಿಗಳು ತಮ್ಮ ಭವಿಷ್ಯದ ಬಗ್ಗೆ ಆತಂಕಗೊಂಡು ಆತ್ಮಹತ್ಯೆಯ ಹಾದಿ ಹಿಡಿದಿದ್ದಾರೆ.

ಕರ್ನಾಟಕದಲ್ಲಿ ವೃತ್ತಿಶಿಕ್ಷಣ ಬಿಕ್ಕಟ್ಟು ಪ್ರಮುಖವಾಗಿ ಟಿ.ಎಂ.ಎ.ಪೈ ಫೌಂಡೇಷನ್ ಪ್ರಕರಣದ ತೀರ್ಪು ಅಕ್ಟೋಬರ್ 2002 ರಂದು ಹೊರಬಿದ್ದ ನ್ಯಾಯಾಲಯದ ತೀರ್ಪಿನಿಂದಲೇ ಉಲ್ಬಣಗೊಂಡಿತ್ತು. ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಟಿ.ಎಂ.ಎ.ಪೈ. ಫೌಂಡೇಷನ್ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳ ಹಕ್ಕನ್ನು ಪ್ರತಿಪಾದಿಸಿ ಸುಪ್ರೀಂ ಕೋರ್ಟ್ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಯ ಹಕ್ಕಿನ ಬಗ್ಗೆ ಮಾತ್ರ ತೀರ್ಪನ್ನು ನೀಡಬಹುದಿತ್ತು. ಬದಲಾಗಿ ಅನುದಾನರಹಿತ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಹಕ್ಕನ್ನು ಕುರಿತು ತಾನೇ ಚರ್ಚಿಸಿ ತೀರ್ಪನ್ನು ನೀಡಿತ್ತು. ಸರ್ಕಾರದಿಂದ ಅನುದಾನ ಪಡೆಯದ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಪ್ರವೇಶ ನೀತಿ ಮತ್ತು ಶುಲ್ಕ ಸ್ವರೂಪ ನಿಯಂತ್ರಿಸುವ ಹಕ್ಕಿಲ್ಲವೆಂದು ತೀರ್ಪು ಹೊರಬಿದ್ದಿತ್ತು. ಇದರಿಂದ ಚುನಾಯಿತ ಸರ್ಕಾರಗಳ ಸಂವಿಧಾನಬದ್ಧ ಅಧಿಕಾರ ಹಲ್ಲುಕಿತ್ತ ಹಾವಿನಂತಾಗಿತ್ತು. ಸುಪ್ರೀಂಕೋರ್ಟ್ ತಾನೇ ನೀಡಿದ್ದ ಕೆ.ಪಿ. ಉನ್ನಿಕೃಷ್ಣನ್ ತೀರ್ಪನ್ನು ತಿರಸ್ಕರಿಸಿತ್ತು. ಹೀಗಾಗಿ ಅಕ್ಟೋಬರ್ 2002ರ ಟಿ.ಎಂ.ಎ.ಪೈ ಫೌಂಡೇಷನ್ ಪ್ರಕರಣದ ಸುಪ್ರೀಂ ಕೋರ್ಟ್ ತೀರ್ಪು ಬಡ ಪ್ರತಿಭಾವಂತ ವಿದ್ಯಾರ್ಥಿಗಳನ್ನು ವೃತ್ತಿ ಶಿಕ್ಷಣದಿಂದ ವಂಚಿಸಿ ಹಣವುಳ್ಳ ಶ್ರೀಮಂತ ವಿದ್ಯಾರ್ಥಿಗಳಿಗೆ ಮಾತ್ರ ವೃತ್ತಿ ಶಿಕ್ಷಣ ಎಂಬ ನಿಲುವಿಗೆ ಕೋರ್ಟ್‌ಗಳು ಬಂದಾಗಿದೆ. ಈ ತೀರ್ಪನ್ನೇ ಆಧಾರವಾಗಿಟ್ಟು ಹರ್ಷಗೊಂಡ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳು ಉದ್ಧಟತದಿಂದ ವರ್ತಿಸತೊಡಗಿದವು.

ಕರ್ನಾಟಕ ರಾಜ್ಯದಲ್ಲಿ ಈ ಕೆಳಕಂಡಂತೆ ಸರ್ಕಾರಿ ಹಾಗೂ ಖಾಸಗಿ ವೃತ್ತಿ ಶಿಕ್ಷಣ ಕಾಲೇಜುಗಳಿವೆ.

1. ವೈದ್ಯಕೀಯ ಕಾಲೇಜುಗಳು ಒಟ್ಟು-20
ಸರ್ಕಾರಿ ವೈದ್ಯಕೀಯ ಕಾಲೇಜುಗಳು-4
ಖಾಸಗಿ ವೈದ್ಯಕೀಯ ಕಾಲೇಜುಗಳು-16
2. ದಂತ ವೈದ್ಯಕೀಯ ಕಾಲೇಜುಗಳು-40
ಸರ್ಕಾರಿ ದಂತ ವೈದ್ಯಕೀಯ ಕಾಲೇಜುಗಳು-1
ಖಾಸಗಿ ದಂತ ವೈದ್ಯಕೀಯ ಕಾಲೇಜುಗಳು-39
3. ತಾಂತ್ರಿಕ ಕಾಲೇಜುಗಳು-134
ಸರ್ಕಾರಿ ತಾಂತ್ರಿಕ ಕಾಲೇಜುಗಳು-3
ಅನುದಾನಿತ ತಾಂತ್ರಿಕ ಕಾಲೇಜುಗಳು-8
ಖಾಸಗಿ ತಾಂತ್ರಿಕ ಕಾಲೇಜುಗಳು-123

ಈ ರೀತಿಯಲ್ಲಿ ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳು ಅಗಾಧ ಸಂಖ್ಯೆಯಲ್ಲಿರುವ ಸಂದರ್ಭದಲ್ಲಿ ಟಿ.ಎಂ.ಎ.ಪೈ ಫೌಂಡೇಷನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಅನುಸರಿಸಿದರೆ ಈ ಖಾಸಗಿ ಕಾಲೇಜುಗಳಿಗೆ ಶುಲ್ಕಗಳು ಮತ್ತು ಪ್ರವೇಶ ನೀತಿಯನ್ನು ತಾವೇ ನಿಗದಿ ಮಾಡಿಕೊಳ್ಳುವುದಾದರೆ ವಿದ್ಯಾರ್ಥಿ-ಪೋಷಕರ ಗತಿ ಏನು? ಸುಪ್ರೀಂ ಕೋರ್ಟ್ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಪರವಾದ ತೀರ್ಪು ನೀಡಿದರೆ ಶಿಕ್ಷಣದ ವ್ಯಾಪಾರೀಕರಣಕ್ಕೆ ಕುಮ್ಮಕ್ಕು ನೀಡಿದಂತಲ್ಲವೇ?

ಕರ್ನಾಟಕ ರಾಜ್ಯದಲ್ಲಿ ಶಿಕ್ಷಣೋದ್ಯಮವಾಗಿ ಶಿಕ್ಷಣ ಸಾಮಾಜಿಕ ಪ್ರಗತಿಯ ಸಾಧನವಾಗುವ ಬದಲು ಉದ್ಯಮಗಳಿಗೆ ಲಾಭ ತರುವ ಉದ್ಯಮಗಳಾಗಿ ಪರಿವರ್ತನೆಗೊಂಡಿವೆ.

ವೃತ್ತಿ ಶಿಕ್ಷಣಕ್ಕೆ ದ್ರೋಹಬಗೆದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ


ಅಕ್ಟೋಬರ್ 2002ರ ತೀರ್ಪು ಹೊರಬಿದ್ದಾಗ ಅಧಿಕಾರದಲ್ಲಿದ್ದ ಕೋಮುವಾದಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ನ್ಯಾಯಾಲಯದ ಈ ಅಘಾತಕರ ತೀರ್ಪನ್ನು ಬಹುಸಂಖ್ಯಾತ ಬಡವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೂನ್ಯಗೊಳಿಸುವ ಬದಲು ತೀರ್ಪಿನ ಪರವಾಗಿ 'ಏಕರೂಪ ಶುಲ್ಕ'. ನಿಗದಿ ಜಾರಿಗೊಳಿಸುವಂತೆ ರಾಜ್ಯ ಸರ್ಕಾರಗಳಿಗೆ ಆದೇಶ ಹೊರಡಿಸಿತು. ಇದರಿಂದ ಮೊದಲೇ ಉಲ್ಬಣಗೊಂಡಿದ್ದ ವೃತ್ತಿಶಿಕ್ಷಣ ಬಿಕ್ಕಟ್ಟಿಗೆ ಇನ್ನಷ್ಟು ಪುಷ್ಟಿ ನೀಡುವಂತಾಯಿತು. ಸಾಮಾಜಿಕ - ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದೊಡ್ಡ ದ್ರೋಹವನ್ನು ಅಂದಿನ ಕೇಂದ್ರದ ಎನ್‌ಡಿಎ ಸರ್ಕಾರ ಬಗೆಯಿತು. ಇದನ್ನು ಪ್ರತಿಭಟಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಉಗ್ರವಾದ ಹೋರಾಟ ನಡೆಸಿತ್ತು. ಡಿಸೆಂಬರ್ 11, 2003ರಂದು ರಾಜ್ಯವ್ಯಾಪಿ ಅಭೂತಪೂರ್ವ ಯಶಸ್ಸು ಕಂಡ 'ಅಖಿಲ ಭಾರತ ಶೈಕ್ಷಣಿಕ ಬಂದ್' ಸೇರಿದಂತೆ ಎಸ್‌ಎಫ್‌ಐ ನಡೆಸಿದ ಹೋರಾಟಗಳು ಹಲವು. ಕರ್ನಾಟಕದಲ್ಲಿ ಅಂದಿನ ಕೇಂದ್ರ ಮಂತ್ರಿಯಾಗಿದ್ದ ಅನಂತ್‌ಕುಮಾರ್ ಮನೆ ಮುಂದೆ ಧರಣಿ ಸಹ ನಡೆಸಲಾಗಿತ್ತು.

2003-04ರಲ್ಲಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ಅಂದಿನ ರಾಜ್ಯ ಸರ್ಕಾರ ಅದೇ ಹಳೆಯ ಶೇ.50 'ಉಚಿತ ಸೀಟು' ಪದ್ಧತಿ ಹಾಗೂ ಬಹುತೇಕ 2002-03ರ ಸಾಲಿನ ಶುಲ್ಕ ಸ್ವರೂಪವನ್ನೇ ಕಾಯ್ದುಕೊಳ್ಳಲು ತೀರ್ಮಾನಿಸಿತ್ತು. ಈ ಕುರಿತು ಅಧಿಕೃತ ತೀರ್ಮಾನವನ್ನು ಸಹ ಕೈಗೊಳ್ಳಲಾಗಿತ್ತು. ಆದರೆ ಅಂದು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಬಡವರ - ಶ್ರೀಮಂತರು, ದಲಿತರು - ಸಾಮಾಜಿಕವಾಗಿ ಮುಂದುವರಿದವರು ಎಲ್ಲರೂ ಒಂದೇ ಸ್ವರೂಪದ ಶುಲ್ಕ ಕೊಡಬೇಕೆನ್ನುವ 'ಏಕರೂಪ ಶುಲ್ಕ' ನಿಗದಿ ಪದ್ಧತಿ ಜಾರಿ ಮಾಡುವಂತೆ ಆದೇಶ ರಾಜ್ಯ ಸರ್ಕಾರಗಳಿಗೆ ಹೊರಡಿಸಿದ್ದರ ಪರಿಣಾಮ ಎಲ್ಲವೂ ತಿರುಗುಮುರುಗಾಯಿತು. ಇಂಥ ಸಂದರ್ಭದಲ್ಲಿ ಸೊಲ್ಲೆತ್ತದಿದ್ದ ಬಿಜೆಪಿ-ಎಬಿವಿಪಿ ಇಂದು ಮೊಸಳೆ ಕಣ್ಣೀರು ಸುರಿಸುತ್ತಿವೆ. ಅಂದು ಬಡ ವಿದ್ಯಾರ್ಥಿಗಳ ವಿರೋಧಿಯಾದ ನ್ಯಾಯಾಲಯದ ತೀರ್ಮಾನದ ಪರವಾಗಿ ಮೌನವಹಿಸಿದ್ದವು. ತಮ್ಮ ಸರ್ಕಾರವೇ ಕೇಂದ್ರದಲ್ಲಿದ್ದಾಗ ವೃತ್ತಿಶಿಕ್ಷಣ ಸಮಸ್ಯೆ ಪರಿಹಾರಕ್ಕೆ ಕಿಂಚಿತ್ತೂ ಗಮನ ಹರಿಸದೆ, ಈಗ ಜಾಗತೀಕರಣದ ಏಜೆಂಟರಾಗಿ ವರ್ತಿಸುತ್ತಿರುವ ಬಿಜೆಪಿ-ಎಬಿವಿಪಿ ಖಾಸಗಿ ಶಿಕ್ಷಣ ಸಂಸ್ಥೆಗಳ ಜೊತೆ ಹೊಂದಾಣಿಕೆ ಮಾಡಿಕೊಂಡಿವೆ. ಇಂದು ರಾಜಕೀಯ ಲಾಭಕ್ಕಾಗಿ ವಿದ್ಯಾರ್ಥಿಗಳನ್ನು ನಿರಂತರವಾಗಿ ವಂಚಿಸುತ್ತಿವೆ. ವೃತ್ತಿಶಿಕ್ಷಣ ಸಮಸ್ಯೆ ಪರಿಹಾರಕ್ಕೆ ಸ್ಪಷ್ಟ ನಿಲುವು ತಾಳದ ಸಂಘ ಪರಿವಾರದ ಗುಂಪಿನ ಎಬಿವಿಪಿ ವಿದ್ಯಾರ್ಥಿಗಳ ಚಳುವಳಿಯನ್ನು ದಿಕ್ಕು ತಪ್ಪಿಸುತ್ತಿದೆ. ಈಗಲೂ ವೃತ್ತಿ ಶಿಕ್ಷಣ ಬಿಕ್ಕಟ್ಟಿಗೆ ಶಾಶ್ವತ ಪರಿಹಾರದ ಬಗ್ಗೆ ದಿವ್ಯಮೌನ ವಹಿಸಿರುವ ಬಿಜೆಪಿ - ಎಬಿವಿಪಿ ರಾಜಕೀಯ ಲಾಭಕ್ಕಾಗಿ ವೃತ್ತಿ ಶಿಕ್ಷಣ ಬಿಕ್ಕಟ್ಟನ್ನು ನೆಪಮಾಡಿಕೊಂಡು ಕರ್ನಾಟಕ ಬಂದ್‌ಗೆ ಕರೆ ಕೊಟ್ಟಿದ್ದವು. ಕರ್ನಾಟಕದ ಜನತೆ ಆದರಲ್ಲೂ ಬಹುತೇಕ ವಿದ್ಯಾರ್ಥಿಗಳು ಬಹುತೇಕ ಬಂದ್‌ನ್ನು ತಿರಸ್ಕರಿಸಿದ್ದಾರೆ. ಕೇವಲ ಸಂಘ ಪರಿವಾರದ ಪುಡಾರಿಗಳನ್ನು ಸೇರಿಸಿಕೊಂಡು ಹಿಂಸಾಕೃತ್ಯಕ್ಕೆ ಇಳಿದು ವಿದ್ಯಾರ್ಥಿ ಸಮುದಾಯ ಚಳುವಳಿಯಿಂದ ಹಿಂದೆ ಸರಿಯುವಂತೆ ಹುನ್ನಾರವನ್ನು ಎಬಿವಿಪಿ ಕರ್ನಾಟಕದಲ್ಲಿ ಮಾಡುತ್ತಿದೆ. ತನ್ನ ಬೇಡಿಕೆಗಳಲ್ಲಿ ಸಮಸ್ಯೆಗೆ ಯಾವುದೇ ರೀತಿಯ ಶಾಶ್ವತ ಪರಿಹಾರ ಕಂಡುಕೊಳ್ಳುವ ಇಚ್ಛೆ ಇಲ್ಲ. ಮುಂದಿನ ಶೈಕ್ಷಣಿಕ ವರ್ಷದಿಂದಲೇ ಕರ್ನಾಟಕ ರಾಜ್ಯದಲ್ಲಿ ಹೊಸ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ತಾಂತ್ರಿಕ ಕಾಲೇಜನ್ನು ಆರಂಭಿಸಬೇಕೆಂದು ಎಸ್.ಎಫ್.ಐ. ಸಂಘಟನೆ ತೀವ್ರವಾಗಿ ಒತ್ತಾಯಿಸುತ್ತಿದ್ದರೆ, ವೃತ್ತಿ ಶಿಕ್ಷಣ ವ್ಯಾಪಾರೀಕರಣದ ವಿರುದ್ಧ ಉಗ್ರ ಚಳುವಳಿಯ ಮಾತನಾಡುವ ಎಬಿವಿಪಿ ಸಂಘಟನೆ ಈ ಬಗ್ಗೆ ಬಾಯಿ ಬಿಚ್ಚಲೂ ಸಿದ್ಧವಿಲ್ಲ ಎಂಬುದನ್ನು ರಾಜ್ಯದ ವಿದ್ಯಾರ್ಥಿಗಳು ಜನತೆ ಗಮನಿಸಿದರು.

ವೃತ್ತಿ ಶಿಕ್ಷಣ ವ್ಯಾಪಾರೀಕರಣಕ್ಕೆ ಕಾರಣವಾಗಿರುವ ಶಿಕ್ಷಣದ ಖಾಸಗೀಕರಣದ ವಿರುದ್ಧ ತುಟಿ ಬಿಚ್ಚದ , ಎಬಿವಿಪಿಯ ಕಪಟ ನಾಟಕ ಏನೆಂದು ರಾಜ್ಯದ ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಲಾರಂಭಿಸಿದ್ದಾರೆ.

ವೃತ್ತಿ ಶಿಕ್ಷಣಕ್ಕೆ ರಾಜ್ಯದಲ್ಲಿ ಬಿಜೆಪಿ ಬಗೆದ ದ್ರೋಹ

ವೃತ್ತಿ ಶಿಕ್ಷಣ ಶುಲ್ಕ ಭರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಮನೆಗೆ ಭೇಟಿಕೊಟ್ಟ ಕರ್ನಾಟಕ ರಾಜ್ಯ ವಿರೋಧ ಪಕ್ಷದ ಮುಖಂಡರಾದ ಬಿಜೆಪಿ ಬಿ.ಎಸ್.ಯಡಿಯೂರಪ್ಪ ಗಳಗಳನೆ ಅತ್ತು ಕಣ್ಣೀರು ಸುರಿಸಿ ರಾಜ್ಯ ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ ಪರವಾಗಿದೆ ಎಂದು ಖಂಡಿಸಿದ್ದರು.



ಎಸ್ಸೆಫೈ ಬೆಂಗಳೂರು ಜಿಲ್ಲಾ ಸಮಿತಿಯು ಯೋಜಿಸಿದ್ದ ಬೃಹತ್ ರಾಜಭವನ್ ಚಲೋ ಸಂದರ್ಭದಲ್ಲಿ ಬೇಡಿಕೆ ಪಟ್ಟಿ . ಸ್ವೀಕರಿಸುತ್ತಿರುವ ಉನ್ನತ ಶಿಕ್ಷಣ ಸಚಿವ ಡಿ.ಮಂಜುನಾಥ್

ನ್ಯಾಯಾಲಯದ ತೀರ್ಪುಗಳು-ಕಾಮೆಡ್.ಕೆ ದ್ವಂದ್ವ ನಿಲುವು ಸರ್ಕಾರದ ಸೋಗಲಾಡಿತನ - ವಿದ್ಯಾರ್ಥಿ-ಪೋಷಕರ ಆತಂಕ ನಿರಂತರ

ಸರ್ಕಾರ ಮತ್ತು ಖಾಸಗಿ ಆಡಳಿತ ಮಂಡಳಿಗಳ ನಡುವೆ ಸೀಟು ಹಂಚಿಕೆ ಮತ್ತು ಶುಲ್ಕ ಸ್ವರೂಪದ ಬಗೆಗೆ ಒಪ್ಪಂದವಾದ ಮೇಲೆ ಆಡಳಿತ ಮಂಡಳಿ ಕೋಟಾದ ಸೀಟುಗಳಿಗಾಗಿ ತಾವು ಹೆಚ್ಚು ಶುಲ್ಕ ತೆರಬೇಕಾಗಿ ಬಂದಿರುವುದನ್ನು ಪ್ರಶ್ನಿಸಿ ಕೆಲವು ವಿದ್ಯಾರ್ಥಿಗಳು ಕೋರ್ಟಿಗೆ ಹೋಗಿದ್ದರು. ನ್ಯಾಯಾಲಯವು ಇನ್ನೆಂತಹ ಅಘಾತಕಾರಿ ತೀರ್ಪು ಕೊಡುವುದೋ ಎಂದು ರಾಜ್ಯದ ವಿದ್ಯಾರ್ಥಿ ಪೋಷಕರು ಆತಂಕಕ್ಕೊಳಗಾಗಿದ್ದರು. ಸದ್ಯಕ್ಕೆ ನ್ಯಾಯಾಲಯ ಒಪ್ಪಂದವನ್ನು ಎತ್ತಿ ಹಿಡಿದಿದೆ! ಇದೇ ಪ್ರಶ್ನೆಯ ಮೇಲೆ ಕಾಮೆಡ್‌ಕೆ ನವರು ಸುಪ್ರೀಂ ಕೋರ್ಟಿಗೆ ಹೋಗುವುದಾಗಿ ಬೆದರಿಕೆ ಹಾಕಿದ್ದರು. ನಂತರ ಸರ್ಕಾರದೊಂದಿಗೆ ಮಾತುಕತೆ ನಡೆದು ತಕ್ಷಣಕ್ಕೆ ಸುಪ್ರೀಂಕೋರ್ಟಿಗೆ ಹೋಗುವ ತೀರ್ಮಾನವನ್ನು ಕೈಬಿಟ್ಟಿರುವುದಾಗಿ ತಿಳಿಸಿದ್ದಾರೆ. ಆದರೆ ನೆತ್ತಿಯ ಮೇಲಿನ ಕತ್ತಿಯಂತೆ ವೃತ್ತಿ ಶಿಕ್ಷಣದ ವಿಚಾರದಲ್ಲಿ ಯಾವ ಮೂಲೆಯಿಂದ ಯಾವರೀತಿಯ ಅಘಾತ ಕಾದಿದೆಯೋ ಎಂದು ವಿದ್ಯಾರ್ಥಿ-ಪೋಷಕರು ನಿರಂತವಾಗಿ ಪರಿತಪಿಸುವಂತಾಗಿದೆ. ಎಸ್ಸೆಫೈ ಸ್ಪಷ್ಟವಾಗಿ ಪ್ರತಿಪಾದಿಸಿರುವಂತೆ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸುವ ಕೇಂದ್ರೀಯ ಶಾಸನ ಅನಿವಾರ್ಯ ಅಗತ್ಯ ಎಂಬುದನ್ನು ಈ ಬೆಳವಣಿಗೆಗಳು ಮತ್ತೊಮ್ಮೆ ಸಮರ್ಥಿಸುತ್ತಿವೆ.

ಆದರೆ ವಿದ್ಯಾರ್ಥಿ ಚಳುವಳಿ ತಾರಕಕ್ಕೇರಿ ಇನ್ನೇನು ಆಡಳಿತ ಮಂಡಳಿಗಳ ಉದ್ಧಟತನಕ್ಕೆ ಮರಣಾಂತಿಕ ಹೊಡೆತ ಬೀಳುವಂತಹ ನಿರ್ಣಾಯಕ ಘಟ್ಟದಲ್ಲಿ ಕರ್ನಾಟಕ ರಾಜ್ಯ ವೃತ್ತಿ ಶಿಕ್ಷಣಕ್ಕೆ ದ್ರೋಹ ಬಗೆದಂತಹ ಮತ್ತು ಸಂಪೂರ್ಣವಾಗಿ ಖಾಸಗಿ ಆಡಳಿತ ಮಂಡಳಿಗಳ ಲಾಭಕೋರತನಕ್ಕೆ ಪೂರಕವಾಗುವಂತಹ ಹೊಸ ಶುಲ್ಕ ಸ್ವರೂಪವನ್ನು ಬಿ.ಎಸ್.ಯಡಿಯೂರಪ್ಪನವರು ಸರ್ಕಾರದ ಮುಂದಿಟ್ಟರು. ಉದಾ: ವೈದ್ಯಕೀಯ ಉಚಿತ ಸೀಟು ವಿಭಾಗದಲ್ಲಿ ವಾರ್ಷಿಕ 35 ಸಾವಿರ ಇರುವ ಶುಲ್ಕವನ್ನು 40 ಸಾವಿರ ರೂಗಳಿಗೆ ಏರಿಸಬೇಕೆಂದು; ಜೊತೆಗೆ ವೈದ್ಯಕೀಯ ಶೇ.50 ಉಚಿತ ಸೀಟಿಗೆ ತಲಾ 40 ಸಾವಿರ, ಶೇ.10 ರಷ್ಟು ಸೀಟಿಗೆ ತಲಾ 2 ಲಕ್ಷ, ಶೇ.40 ರಷ್ಟು ಆಡಳಿತ ಮಂಡಳಿಯ ಸೀಟಿಗೆ ತಲಾ 4 ಲಕ್ಷ ರೂ.ಗಳ ಶುಲ್ಕವನ್ನು ಯಡಿಯೂರಪ್ಪನವರು ಸೂಚಿಸಿದ್ದು ಮುರುಗೋಡ್ ಸಮಿತಿ ನಿಗದಿಗೊಳಿಸಿದ್ದ ಶುಲ್ಕ ಆಧಾರದಲ್ಲಿ ಸಂಗ್ರಹವಾಗಲಿದ್ದ ಒಟ್ಟು ಮೊತ್ತ 1.65 ಕೋಟಿಗಿಂತ ಯಡಿಯೂರಪ್ಪ ಪ್ರಸ್ತಾವನೆಯಲ್ಲಿ ಆಡಳಿತ ಮಂಡಳಿಗಳಿಗೆ ಪ್ರತಿ ನೂರು ಸೀಟಿಗೆ 35 ಲಕ್ಷ ರೂಗಳು ಅಧಿಕ ಹಣ ಸಂಗ್ರಹವಾಗುವಂತೆ ಒತ್ತಾಯಿಸಿದ್ದರು. ಒಂದೆಡೆ ವೃತ್ತಿ ಶಿಕ್ಷಣ ಸಮಸ್ಯೆಗಳ ವಿರುದ್ಧ ಚಳುವಳಿ ನಾಟಕ ಆಡುವ ಬಿಜೆಪಿ ಆಡಳಿತ ಮಂಡಳಿಯ ಪರವಾದ ಶುಲ್ಕ ಏರಿಕೆಗೆ ಒತ್ತಾಯಿಸುವ ಗೋಸುಂಬೆತನವನ್ನು ಕರ್ನಾಟಕದ ಜನತೆ ಅರಿತರು.

ವೃತ್ತಿ ಶಿಕ್ಷಣದ ಶಾಶ್ವತ ಪರಿಹಾರಕ್ಕೆ ಎಸ್.ಎಫ್.ಐ. ಸ್ಪಷ್ಟ ನಿಲುವು : ದಿಟ್ಟ ಹೋರಾಟ

ಅಕ್ಟೋಬರ್ 2002ರಂದು ಕೋರ್ಟ್ ತೀರ್ಪು ಹೊರಬಂದ ತಕ್ಷಣದಿಂದಲೇ ಎಸ್‌ಎಫ್‌ಐ-ರಾಜ್ಯ ಸಮಿತಿ ವೃತ್ತಿ ಶಿಕ್ಷಣ ಬಿಕ್ಕಟ್ಟಿನ ಶಾಶ್ವತ ಪರಿಹಾರಕ್ಕೆ ಕೇಂದ್ರೀಯ ಶಾಸನ ರೂಪಿಸಬೇಕೆಂದು ಮೊಟ್ಟ ಮೊದಲಿಗೆ ಧ್ವನಿ ಎತ್ತಿತ್ತು. ಅಷ್ಟೇ ಅಲ್ಲ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶುಲ್ಕಗಳನ್ನು ಸರ್ಕಾರವೇ ಭರಿಸಬೇಕು. ಜೊತೆಗೆ ಸಾಮಾನ್ಯ ಜನರು ಶುಲ್ಕ ಭರಿಸುವಂತಹ ರೀತಿಯಲ್ಲಿ ಶುಲ್ಕ ನಿಗದಿಯಾಗಬೇಕು. ಪ್ರಮುಖವಾಗಿ ಸರ್ಕಾರಿ ವೈದ್ಯಕೀಯ-ತಾಂತ್ರಿಕ ಕಾಲೇಜುಗಳನ್ನು ಹೆಚ್ಚಿಸಬೇಕೆಂದು ಮತ್ತು ಪ್ರವೇಶಗಳ ಸಂಖ್ಯೆ ಹೆಚ್ಚಿಸಬೇಕೆಂದು ಎಸ್‌ಎಫ್‌ಐ ರಾಜ್ಯ ಸಮಿತಿ ರಾಜ್ಯಾದ್ಯಂತ ಹೋರಾಟ ರೂಪಿಸಿತ್ತು.

ಎಸ್‌ಎಫ್‌ಐನ ನೇತೃತ್ವದಲ್ಲಿ ವೃತ್ತಿ ಶಿಕ್ಷಣ ಆಕಾಂಕ್ಷಿಗಳ ವಿದ್ಯಾರ್ಥಿ ಪೋಷಕರ ಹೋರಾಟ ಸಮಿತಿ ರಚಿಸಿ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಿತ್ತು. ಕರಪತ್ರಗಳು - ಗೋಡೆಬರಹ, ಪೋಸ್ಟರ್ಸ್, ಆಟೋ ಪ್ರಚಾರ ಮುಂತಾದ ಕ್ರಮಗಳಿಂದ ವೃತ್ತಿ ಶಿಕ್ಷಣ ಸಮಸ್ಯೆ ಪರಿಹಾರಕ್ಕೆ ರಾಜ್ಯಕೇಂದ್ರ ಸರ್ಕಾರಗಳಿಗೆ ಒತ್ತಾಯಿಸಿದೆ. ಜುಲೈ 29 ರಂದು ವೃತ್ತಿ ಶಿಕ್ಷಣ ವ್ಯಾಪಾರೀಕರಣ ವಿರುದ್ಧ, ಕೇಂದ್ರೀಯ ಶಾಸನ ರೂಪಿಸಲು ಒತ್ತಾಯಿಸಿ ಕಾಲೇಜ್‌ಬಂದ್ ಚಳುವಳಿಗೆ ಎಸ್‌ಎಫ್‌ಐ ರಾಜ್ಯ ಸಮಿತಿ ಕರೆ ನೀಡಿತ್ತು. ರಾಜಧಾನಿ ಬೆಂಗಳೂರು ಸೇರಿದಂತೆ ಪ್ರಮುಖ ಜಿಲ್ಲೆಗಳ ಲಕ್ಷಾಂತರ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಕಾಲೇಜ್ ಬಂದ್ ಚಳುವಳಿಯನ್ನು ಯಶಸ್ವಿಗೊಳಿಸಿದರು.

ಕರ್ನಾಟಕ ರಾಜ್ಯಸರ್ಕಾರದ ನಿರ್ಲಕ್ಷತನದಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಉದ್ಧಟತನದಿಂದ ವೃತ್ತಿ ಶಿಕ್ಷಣದ ದುಬಾರಿ ಶುಲ್ಕ ಭರಿಸಲು ಸಾಧ್ಯವಾಗದೆ ಮುಗ್ಧ ಪ್ರತಿಭಾವಂತ, ವಿದ್ಯಾರ್ಥಿಗಳು ಆತ್ಮಹತ್ಯೆಗೆ ಒಳಗಾದರು. ರಾಜ್ಯ ಸರ್ಕಾರ ರಾಜಕೀಯ ಇಚ್ಛಾಶಕ್ತಿಯನ್ನು ತೋರದೇ ಖಾಸಗಿ ಶಿಕ್ಷಣ ಸಂಸ್ಥೆಗಳ ಜೊತೆ ಹೊಂದಾಣಿಕೆ ಮಾಡಿಕೊಂಡಿತ್ತು. ಈ ಮಧ್ಯ ನ್ಯಾಯಾಲಯದ ಆದೇಶದಂತೆ ರಾಜ್ಯ ಸರ್ಕಾರ ಶುಲ್ಕ ನಿಗದಿಗೆ ಸಂಬಂಧಪಟ್ಟಂತೆ ನಿವೃತ್ತ ನ್ಯಾಯಾಧೀಶರನ್ನು ಒಳಗೊಂಡ ಶುಲ್ಕ ನಿಗದಿ ಸಮಿತಿಯನ್ನು ರಚಿಸಿ ಕೈ ತೊಳೆದುಕೊಂಡಿತ್ತು. ನ್ಯಾಯಮೂರ್ತಿ ಮುರಗೋಡ್ ಸಮಿತಿ ಖಾಸಗಿ ಶಿಕ್ಷಣ ಸಂಸ್ಥೆಗಳು ಇಷ್ಟಾನುಸಾರ ಕೊಟ್ಟ ಉತ್ಪ್ರೇಕ್ಷಿತ ಲೆಕ್ಕಪತ್ರವನ್ನು ಪರಿಶೀಲಿಸದೆ ಖಾಸಗೀ ಶಿಕ್ಷಣ ಸಂಸ್ಥೆಗಳ ಪರವಾದ ಶುಲ್ಕಗಳನ್ನಾಗಿ ನಿಗದಿ ಮಾಡಿತ್ತು.

ಮುರಗೋಡ್ ಸಮಿತಿ ನಿಗದಿ ಮಾಡಿದ್ದ ಶುಲ್ಕಗಳು

ವೈದ್ಯಕೀಯ ಸರಾಸರಿ 1,65,000 ರೂ.

ತಾಂತ್ರಿಕ 32,590 ರೂ.

ದಂತ ವೈದ್ಯಕೀಯ ಸರಾಸರಿ - 1,00,000

ಈ ರೀತಿಯಾಗಿ ಮುರಗೋಡ್ ಸಮಿತಿ ಶುಲ್ಕ ನಿಗದಿ ಮಾಡಿದದನ್ನು ಕಡಿಮೆಯಾಗಿತ್ತೆಂದು ವಿರೋಧಿಸಿ ಖಾಸಗಿ ಶಿಕ್ಷಣ ಸಂಸ್ಥೆಗಳು ನ್ಯಾಯಾಲಯಕ್ಕೆ ರಿಟ್ ಹೋದರು, ಎಸ್‌ಎಫ್‌ಐ ಸಂಘಟನೆ, ವಿದ್ಯಾರ್ಥಿಗಳು ಮುರಗೋಡು ಸಮಿತಿ ನಿಗದಿಗೊಳಿಸಿರುವ ಶುಲ್ಕಗಳು ಬಡ-ಪ್ರತಿಭವಂತ ವಿದ್ಯಾರ್ಥಿಗಳಿಗೆ ಭರಿಸಲು ಸಾಧ್ಯವಿಲ್ಲ ಆದ್ದರಿಂದ ಶುಲ್ಕಗಳನ್ನು ಇಳಿಸಬೇಕು. ಜೊತೆಗೆ ಬಡ-ವಿದ್ಯಾರ್ಥಿಗಳಿಗೆ ಸರ್ಕಾರವೇ ಶುಲ್ಕ ಭರಿಸಬೇಕೆಂದು ಚಳುವಳಿಯಲ್ಲಿ ತೊಡಗಿದವು. ರಾಜ್ಯ ಸರ್ಕಾರ ವಿದ್ಯಾರ್ಥಿ ಪೋಷಕ ಸಮುದಾಯದ ತೀವ್ರ ಒತ್ತಡದಿಂದಾಗಿ ಖಾಸಗಿ ಶಿಕ್ಷಣ ಸಮಸ್ಥೆಗಳನ್ನು ನಿಯಂತ್ರಿಸಲು ತೋರಿಕೆಗಾಗಿ ಶಾಸನ ರೂಪಿಸಿತ್ತು. ಶಾಸನ ಸೀಟು ಹಂಚಿಕೆ ಬಗ್ಗೆ ಮಾತ್ರ ಸೀಮಿತಗೊಂಡಿತು. ಆದರೆ ಶುಲ್ಕ ಸ್ವರೂಪದ ಬಗ್ಗೆ ಪ್ರಸ್ತಾಪವಿಲ್ಲ. ಸರ್ಕಾರ ಖಾಸಗಿ ಆಡಳಿತ ಮಂಡಳಿಗಳ ಜೊತೆ ಸಂಪೂರ್ಣ ಶಾಮೀಲಾಗಿರುವುದು ಇದರ ಮೂಲಕವೇ ಸ್ಪಷ್ಟವಾಗುತ್ತದೆ. ಖಾಸಗಿ ಶಿಕ್ಷಣ ಸಂಸ್ಥೆ ಮತ್ತು ಸರ್ಕಾರದ ಪ್ರತಿನಿಧಿಗಳು ಮಾತುಕತೆಗೆ ಕುಳಿತರೆ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ಯಾರು - ಯಾರೂ ಸರ್ಕಾರದ ಪ್ರತಿನಿಧಿಗಳು ಎಂಬುದೇ ಗೊಂದಲವಾಗುತ್ತಿತ್ತು. ಯಾಕೆಂದರೆ ಸರ್ಕಾರದ ನೇತೃತ್ವ ವಹಿಸಿರುವ ಸಂಸದರು, ಶಾಸಕರೇ ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲೀಕರು ಆಗಿದ್ದಾರೆ. ಉದಾ: ಕಾಂಗ್ರೇಸ್ ನ ಆರ್.ಎಲ್.ಜಾಲಪ್ಪ, ಶ್ಯಾಮನೂರು ಶಿವಶಂಕರಪ್ಪ, ಡಿ.ಕೆ. ಶಿವಕುಮಾರ್, ಇನ್ನಿತರ ಪ್ರಭಾವಿ ಜೆಡಿಎಸ್ ಪಕ್ಷದ ಮುಖಂಡರು. ಅದೇ ರೀತಿ ವಿದ್ಯಾರ್ಥಿಗಳ ಪರವಾಗಿ 'ಭಾರಿ ಚಳುವಳಿ'ಯು ಮಾತಾಡುತ್ತಿರುವ ಬಿಜೆಪಿ ಮುಖಂಡರುಗಳು ಕೂಡ ಈ ಖಾಸಗಿ ಶಿಕ್ಷಣ ಕಾಲೇಜುಗಳ ಆಡಳಿತ ಮಂಡಳಿಯಲ್ಲಿರುವುದು ಕರ್ನಾಟಕದ ಜನತೆಗೆ ಗೊತ್ತಿಲ್ಲದ ವಿಷಯವೇನಲ್ಲ.



ಪ್ರತಿಭಾ.... ಮಮತಾ.... ಮುಗ್ಧ ವಿದ್ಯಾರ್ಥಿನಿಯರನ್ನು ಬಲಿತೆಗೆದುಕೊಂಡ ವೃತ್ತಿ ಶಿಕ್ಷಣದ ವ್ಯಾಪಾರಕ್ಕೆ ವಿದ್ಯಾರ್ಥಿನಿಯರ ಧಿಕ್ಕಾರ

ವಿದ್ಯಾರ್ಥಿಗಳ ಪೋಷಕರ ಆಕ್ರೋಶ ತಾರಕಕ್ಕೇರಿದ್ದರ ಪರಿಣಾಮ ಕೊನೆಗೆ ಖಾಸಗಿ ಮಂಡಳಿಗಳು ಹಾಗೂ ರಾಜ್ಯ ಸರ್ಕಾರದ ಮಾತುಕತೆಗೆ ನೀಡುವ ಒತ್ತಡ ನಿರ್ಮಾಣವಾಯಿತು.

ಮಾತುಕತೆಯಲ್ಲಿ ಉಚಿತ ಸೀಟುಗಳ ಪ್ರಮಾಣ ಹಿಂದೆ ಇದ್ದ ಶೇ.50ಕ್ಕೆ ಬದಲಾಗಿ ಕೇವಲ ಶೇ.30 ಮಾತ್ರ ಎಂದು ತೀರ್ಮಾನಕ್ಕೆ ಬರಲಾಗಿದೆ. ಆದರೆ ಮುರಗೋಡ್ ಸಮಿತಿ ನಿಗದಿ ಮಾಡಿದ್ದ ಶುಲ್ಕ



ನೀತಿಯಲ್ಲಿ ಉಚಿತ ಸೀಟುಗಳಿಗೆ ಅವಕಾಶ ಇರಲಿಲ್ಲ. ಆದರೆ ಸರ್ಕಾರ ಮತ್ತು ಖಾಸಗೀ ಶಿಕ್ಷಣ ಸಂಸ್ಥೆಗಳ ಮಾತುಕತೆಯ ಮೂಲಕ ತೀರ್ಮಾನದಲ್ಲಿ ಉಚಿತ ಸೀಟುಗಳ ಅವಕಾಶವಿದೆ ಎಂಬುದು ಬಿಟ್ಟರೆ ಉಳಿದಂತೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಕೂಲಕರ ರೀತಿಯಲ್ಲಿಯೇ ಶುಲ್ಕ ನಿಗದಿಗೊಳಿಸಲಾಗಿದೆ.

ಉಚಿತ ಸೀಟು

ಶೇ.30 X 35,000 = 10,50,000

ಪಾವತಿ ಸೀಟು

ಶೇ.30 X 1,65,000 = 49,50,000

ಆಡಳಿತ ಮಂಡಳಿ ಸೀಟು

ಶೇ.40 X 3,70,000.00 = 1,48,00,000

ಒಟ್ಟು 2,08,00,000

ಮುರಗೋಡ್ ಸಮಿತಿ ಸೂಚನೆ

ಸರಾಸರಿ ಒಂದು ಸೀಟಿಗೆ

1,65,000 X 100 = 1,65,00,000

ಮುರಗೋಡ್ ಸಮಿತಿಯು ವೈದ್ಯಕೀಯ ಕೋರ್ಸಿಗೆ ಸರಾಸರಿ 1.65 ಲಕ್ಷ ರೂ.ಗಳ ಪ್ರತಿ ಸೀಟಿಗೆ ನಿಗದಿಗೊಳಿಸಿತ್ತು. ಈ ಶುಲ್ಕದ ಆಧಾರದಲ್ಲಿ ಪ್ರತಿ ನೂರು ಸೀಟುಗಳಿಗೆ ಆಡಳಿತ ಮಂಡಳಿಗಳಿಗೆ 1.65 ಕೋಟಿ ರೂ.ಗಳು ಸಂಗ್ರಹವಾಗುತ್ತಿತ್ತು. ಆದರೆ ಈಗ ಆಗಿರುವ ಒಪ್ಪಂದದಂತೆ ಆಡಳಿತ ಮಂಡಳಿಗೆ ಪ್ರತಿ ನೂರು ಸೀಟಿಗೆ 2.08 ಕೊಟಿ ರೂಗಳು ಸಂಗ್ರಹವಾಗುತ್ತಿದ್ದು ಮುರಗೋಡ್ ಸಮಿತಿಯ ಶುಲ್ಕದ ಆಧಾರದಲ್ಲಿ ಸಂಗ್ರಹವಾಗುವ ಒಟ್ಟು ಮೊತ್ತಕ್ಕಿಂತ 43 ಲಕ್ಷ ಅಧಿಕ ಹಣ ಈಗ ಸಂಗ್ರಹವಾಗುತ್ತಿದೆ.

ಒಟ್ಟಾರೆ ಖಾಸಗಿ ಶಿಕ್ಷಣ ಸಂಸ್ಥೆ - ಸರ್ಕಾರಗಳ ಶಿಕ್ಷಣದ ವ್ಯಾಪಾರೀಕರಣದ ನೀತಿಯಿಂದ ಮುಗ್ಧ ಬಡ ವಿದ್ಯಾರ್ಥಿಗಳನ್ನು ಬಲಿತೆಗೆದುಕೊಂಡಿತ್ತು. ಎಸ್‌ಎಫ್‌ಐ ವೃತ್ತಿ ಶಿಕ್ಷಣ ಸಮಸ್ಯೆಯನ್ನು ಶಾಶ್ವತವಾಗಿ ಬಗೆ ಹರಿಸಲು ಹಲವು ರೀತಿಯ ಹೋರಾಟಗಳನ್ನು ರೂಪಿಸಿತ್ತು. ಮುಖ್ಯವಾಗಿ ರಾಜಧಾನಿ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆಯ ಮೂಲಕ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಸಾವಿಗೆ ವೃತ್ತಿಶಿಕ್ಷಣ ಸಂಸ್ಥೆಗಳೇ ನೇರ ಹೊಣೆ. ಅವರನ್ನು ಬಂಧಿಸಿ ಹಾಗೂ ತಕ್ಷಣ ಶೀಘ್ರ ಬಗೆಹರಿಸಿ ಎಂದು ರಸ್ತೆ ತಡೆ ಚಳುವಳಿ, ಬೃಹತ್ ಪ್ರತಿಭಟನೆ ಮುಂತಾದ ಉಗ್ರ ಹೋರಾಟಗಳನ್ನು ಎಸ್‌ಎಫ್‌ಐ ರೂಪಿಸಿತ್ತು. ಎಸ್‌ಎಫ್‌ಐನ ಸುಮಾರು 30 ಕಾರ್ಯಕರ್ತರನ್ನು ಪೋಲಿಸರು ಬಂಧಿಸಿ ಬಿಡುಗಡೆ ಮಾಡಿದರು. ಆನಂತರದಲ್ಲಿ ರಾಜ್‌ಭವನ್ ಚಲೋ ನಡೆಸಿ ಕೇಂದ್ರೀಯ ಶಾಸನಕ್ಕೆ ಒತ್ತಾಯಿಸಿ ರಾಜ್ಯಪಾಲರಿಗೆ ಮನವಿ ಪತ್ರ ನೀಡಲಾಯಿತು. ಇದೇ ರೀತಿಯೇ ರಾಜ್ಯದಾದ್ಯಂತ ಕೊಡಗಿನಿಂದ ಬೀದರ್‌ವರೆಗೆ, ಕರಾವಳಿಯಿಂದ ಬಳ್ಳಾರಿಯವರೆಗೆ ಒಟ್ಟಾರೆ ಇಡೀ ರಾಜ್ಯದಲ್ಲಿ ಎಸ್‌ಎಫ್‌ಐ ಹೋರಾಟ ನಡೆಸಿತು. ಮುಖ್ಯವಾಗಿ ಎಸ್‌ಎಫ್‌ಐನ ಬೇಡಿಕೆಗಳು. ವೃತ್ತಿಶಿಕ್ಷಣ ಬಿಕ್ಕಟ್ಟಿಗೆ ಕೇಂದ್ರೀಯ ಶಾಸನ ರೂಪಿಸಬೇಕು. ಸರ್ಕಾರಿ ವೈದ್ಯಕೀಯ ತಾಂತ್ರಿಕ ಕಾಲೇಜುಗಳನ್ನು ಹೆಚ್ಚಿಸಬೇಕು. ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರವೇ ಶುಲ್ಕ ಭರಿಸಬೇಕೆಂದು ಹೋರಾಟದಲ್ಲಿ ಒತ್ತಾಯಿಸಲಾಗಿತ್ತು. ಭವಿಷ್ಯದ ಬಗ್ಗೆ ಆತಂಕಗೊಂಡು ವಿದ್ಯಾರ್ಥಿಗಳು ಸಮಸ್ಯೆಗೆ ಆತ್ಮಹತ್ಯೆಯಲ್ಲ, ಆತ್ಮವಿಶ್ವಾಸದ ಹೋರಾಟ ಎಂಬ ಜಾಥ ಪ್ರಚಾರಾಂದೋಲನಗಳನ್ನು ರಾಜ್ಯದಾದ್ಯಂತ ಎಸ್‌ಎಫ್‌ಐ ಹಮ್ಮಿಕೊಂಡಿತ್ತು ಮುಂದಿನ ದಿನಗಳಲ್ಲಿ ಕೇಂದ್ರೀಯ ಶಾಸನ ರೂಪಿಸಲು ಒತ್ತಾಯಿಸಿ ಪಾರ್ಲಿಮೆಂಟ್ ಚಲೋ ಚಳುವಳಿಗೆ ಎಸ್‌ಎಫ್‌ಐ ಸಜ್ಜುಗೊಳ್ಳುತ್ತಿದೆ. ○

ಕೇರಳ : ವೃತ್ತಿ ಶಿಕ್ಷಣ ವಿದ್ಯಾರ್ಥಿಗಳ ಸಮಾವೇಶ


ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಕೇಂದ್ರ ಸಮಿತಿ ಕೇರಳ ರಾಜ್ಯದ ತ್ರಿವೇಂಡ್ರಂ ಜಿಲ್ಲೆಯಲ್ಲಿ ಅಖಿಲ ಭಾರತ ವೃತ್ತಿ ಶಿಕ್ಷಣ ವಿದ್ಯಾರ್ಥಿಗಳ ಸಮಾವೇಶವನ್ನು ಯೋಜಿಸಿತ್ತು. ವಿವಿಧ ರಾಜ್ಯಗಳಿಂದ ಸುಮಾರು 150 ಕ್ಕೂ ಹೆಚ್ಚಿನ ವೃತ್ತಿ ಶಿಕ್ಷಣ ವಿದ್ಯಾರ್ಥಿ ಪ್ರತಿನಿಧಿಗಳು ಭಾಗವಹಿಸಿದ್ದರು. ಸಮಾವೇಶದಲ್ಲಿ ಉಲ್ಬಣಗೊಂಡಿರುವ ವೃತ್ತಿ ಶಿಕ್ಷಣದ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಯಿತು. ಆಳುವ ಸರ್ಕಾರಗಳು ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಿ, ಸಾಮಾಜಿಕ ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ವಿದ್ಯಾರ್ಥಿಗಳು ವೃತ್ತಿ ಶಿಕ್ಷಣದಿಂದ ವಂಚಿಸುತ್ತಿರುವುದನ್ನು ತಪ್ಪಿಸಲು, ಮುಖ್ಯವಾಗಿ ವೃತ್ತಿ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣಕ್ಕಾಗಿ ಕೇಂದ್ರೀಯ ಶಾಸನ ರೂಪಿಸುವಂತೆ ಒತ್ತಾಯಿಸಿ ಸಮಾವೇಶದಲ್ಲಿ ಮಾದರಿ ಶಾಸನವನ್ನು ಅಂಗೀಕರಿಸಲಾಗಿದೆ.

ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಇಡೀ ದೇಶದಲ್ಲೇ ಮುಂಚೂಣಿಯಲ್ಲಿ ಹೋರಾಟ ಮಾಡುತ್ತಿರುವ SFI ವೃತ್ತಿ ಶಿಕ್ಷಣದ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ರೂಪಿಸಿರುವ 'ಮಾದರಿ ಶಾಸನ' (ಮಾಡಲ್ ಆಕ್ಟ್-2004) ಜಾರಿಗೆ ತರುವಂತೆ ಒತ್ತಾಯಿಸಲು ದೇಶಾದ್ಯಂತ ಪ್ರಚಾರಾಂದೋಲನವನ್ನು ಹಮ್ಮಿಕೊಂಡಿದೆ.

ಅಕ್ಟೋಬರ್ 2, 2004 ರಂದು ದೆಹಲಿಯಲ್ಲಿ ಎಡ ವಿದ್ಯಾರ್ಥಿ ಸಂಘಟನೆಗಳ ಜಂಟಿ ಸಮಾವೇಶವನ್ನು ಸಂಘಟಿಸಲಾಗುತ್ತಿದೆ. ಎಸ್ಸೆಫೈ ಮಾತ್ರವಲ್ಲ ಇತರ ಹಲವು ವಿದ್ಯಾರ್ಥಿ ಸಂಘಟನೆಗಳು ಸೇರಿ ಆಂದೋಲನವನ್ನು ತೀವ್ರಗೊಳಿಸುವ ದೃಷ್ಟಿಯಿಂದ ಎಸ್ಸೆಫೈ ಜಂಟಿ ಹೋರಾಟದ ಮುತುವರ್ಜಿ ವಹಿಸಿದೆ.

ಸಮಾವೇಶದಲ್ಲಿ ಹಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಅಖಿಲ ಭಾರತ ಮಟ್ಟದ ವೃತ್ತಿ ಶಿಕ್ಷಣ ವಿದ್ಯಾರ್ಥಿಗಳ ಉಪಸಮಿತಿಯನ್ನು ರಚಿಸಲಾಗಿದೆ. ಕರ್ನಾಟಕ ರಾಜ್ಯದಿಂದ 7 ಪ್ರತಿನಿಧಿಗಳು ಭಾಗವಹಿಸಿದ್ದರು. ಸಮಿತಿಯ ಸದಸ್ಯರಾಗಿ ವಿಕ್ರಮ(ಬಿ.ಇ. 3ನೇ ಸೆಮಿಸ್ಟರ್) ಆಯ್ಕೆಯಾಗಿದ್ದಾರೆ.

ಇಪಿಎಫ್ : ಜವಾಬ್ದಾರಿಯಿಂದ ವಿಮುಖವಾದ ಯುಪಿಎ ಸರ್ಕಾರ



ಹುದುಗು ಕಾಂಚಾಣ

ಜಿ.ಎಸ್.ಮಣಿ

ನೌಕರರ ಪ್ರಾವಿಡೆಂಟ್ ಫಂಡಿನ ಮೇಲಿನ ಬಡ್ಡಿದರವನ್ನು ಶೇ 8.5 ಕ್ಕೆ ಇಳಿಸಲಾಗಿದೆ. ಎಡಪಕ್ಷಗಳು ಮತ್ತು ಟ್ರೇಡ್ ಯೂನಿಯನ್‌ಗಳ ತೀವ್ರ ವಿರೋಧದ ನಡುವೆಯೂ ಇದನ್ನು ಮಾಡಲಾಗಿದೆ. ಪ್ರತಿಸಾರಿಯೂ ಏಕಾಭಿಪ್ರಾಯ ದಿಂದ ನಿರ್ಧಾರಗಳನ್ನು ಮಾಡಲಾಗುತ್ತಿತ್ತು. ಆದರೆ ಈ ಸಾರಿ ಎಲ್ಲ ಟ್ರಸ್ಟಿಗಳಿಗೆ ಅವಕಾಶ ನೀಡದೆ ಇಂತಹ ನಿರ್ಧಾರವನ್ನು ಮಾಡಲಾಗಿದೆ.



ಸರ್ಕಾರದ ಪ್ರಾವಿಡೆಂಟ್ ಫಂಡ್ ಅಥವಾ ಇಪಿಎಫ್‌ಗೆ ನಾಲ್ಕು ಕೋಟಿ ಸದಸ್ಯರುಗಳಿದ್ದಾರೆ. ಈ ನಿಧಿಯ ಮೇಲಿನ ಬಡ್ಡಿಯನ್ನು ಶೇ 9.5 ರಿಂದ ಶೇ 8.5 ಕ್ಕೆ ಇಳಿಸಿರುವುದರಿಂದ ಈ ನಾಲ್ಕು ಕೋಟಿ ನೌಕರರು ನಷ್ಟ ಅನುಭವಿಸುತ್ತಾರೆ. ಅವರ ಜೀವನದ ದುಡಿಮೆಗೆ ಕಡಿಮೆ ಪ್ರತಿಫಲ ದೊರೆತಂತಾಗುತ್ತದೆ. ಹಿಂದಿನ ಎನ್‌ಡಿಎ ಸರ್ಕಾರವೂ ಇಂತಹ ನಿರ್ಧಾರ ತೆಗೆದುಕೊಂಡು ದುಡಿವ ಜನರ ವಿರೋಧ ಕಟ್ಟಿಕೊಳ್ಳಲು ಹಿಂದೇಟು ಹಾಕಿತ್ತು. ಯುಪಿಎ ಸರ್ಕಾರ ಇಂತಹ ನಿರ್ಧಾರವನ್ನು ಮಾಡಿದೆ. ಈ ನಿರ್ಧಾರದಲ್ಲಿ ಕೇಂದ್ರದ ಹಣಕಾಸು ಸಚಿವರ ಒತ್ತಡ ಇಲ್ಲದೆ ಇರಲು ಸಾಧ್ಯವೇ ಇಲ್ಲ.

ಈ ನಿರ್ಧಾರದ ಪರವಾಗಿರುವವರು ಈ ನಿಧಿಯ ಹೂಡಿಕೆಯ ಮೇಲಿನ ಪ್ರತಿಫಲವನ್ನು ಗಮನದಲ್ಲಿಟ್ಟುಕೊಂಡು ಪ್ರತಿಫಲವೇ ಕಡಿಮೆ ಇರುವಾಗ ಹೆಚ್ಚಿಗೆ ಬಡ್ಡಿ ನೀಡುವುದು ಹೇಗೆ ಎಂದು ಕೇಳುತ್ತಾರೆ. ಬ್ಯಾಂಕುಗಳಲ್ಲಿನ ಠೇವಣಿಗಳಿಗೆ ಶೇ 3.5 ರಷ್ಟು ಬಡ್ಡಿ ದೊರೆಯುತ್ತಿರುವಾಗ ಈ ನಿಧಿಯ ಮೇಲೆ ಶೇ 9.5 ರಷ್ಟು ಬಡ್ಡಿ ಕೊಡುವುದು ಹೇಗೆ ತಾನೆ ಸಾಧ್ಯ ಎಂಬುದು ಅವರ ಪ್ರಶ್ನೆ. ಇಂತಹ ಬೇಡಿಕೆಯು ನ್ಯಾಯಯುತವಾದದ್ದಲ್ಲ ಎಂಬುದು ಅವರ ವಾದ. ಆ ವಾದಕ್ಕೆ ಪ್ರತಿಯಾಗಿ ಇದು ದುಡಿವ ಜನರ ಜೀವನದ ಉಳಿತಾಯ. ಅವರ ಭವಿಷ್ಯಕ್ಕೆ ಆಧಾರ ಎಂಬ ದೃಷ್ಟಿಕೋನದಿಂದ ಈ ನಿಧಿಯನ್ನು ಮತ್ತು ಅದರ ಮೇಲಿನ ಬಡ್ಡಿಯನ್ನು ನೋಡಬೇಕು ಎಂಬ ವಾದವನ್ನು ದುಡಿವ ಜನರ ಪರವಾಗಿರುವವರು ಮತ್ತು ಎಡಪಕ್ಷಗಳು ಹೂಡುತ್ತಾರೆ. ಸರ್ಕಾರ ಈ ಹಣವನ್ನು ತನ್ನ ವಿಶೇಷ ಠೇವಣಿ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದೂ ಇದೆ. ಇದರರ್ಥ ಸರ್ಕಾರ ಬಯಸಿದಾಗ ಈ ಹಣ ಸರ್ಕಾರದ ಬಳಕೆಗೂ ಸಿಗುತ್ತದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಈ ಇಪಿಎಫ್ ಒಂದು ಸಾಮಾಜಿಕ ಭದ್ರತಾ ನಿಧಿ ಎಂಬುದು. ಅದು ನಾಲ್ಕು ಕೋಟಿ ನೌಕರರಿಗೆ ಎಷ್ಟು ಹೆಚ್ಚಿನ ಸಾಮಾಜಿಕ ಭದ್ರತೆ ನೀಡಲು ಸಾಧ್ಯವೋ ಅಷ್ಟು ಹೆಚ್ಚಿನ ಭದ್ರತೆ ನೀಡಬೇಕು. ಈ ದೃಷ್ಟಿಕೋನದಿಂದ ನೋಡಿದರೆ ಸರ್ಕಾರವೇ ಈ ನಿಧಿಯ ಹಣಕ್ಕೆ ಹೆಚ್ಚಿನ ಬಡ್ಡಿ ದರ ನೀಡುವುದು ಸೂಕ್ತ ಎಂಬುದು ಈ ವಾದದ ತಿರುಳು. ಈ ದೃಷ್ಟಿಕೋನದಿಂದ ನೋಡಿದರೆ ಹೆಚ್ಚಿನ ಬಡ್ಡಿ ದರ ನೀಡುವುದು ಅತ್ಯಂತ ಸಾಮಾಜಿಕ ಜವಾಬ್ದಾರಿಯ ಕಾರ್ಯವಾಗುತ್ತದೆ.

ಇಪಿಎಫ್‌ನ ಇತಿಹಾಸವನ್ನು ನೋಡಿದರೆ ಇದು ಹತ್ತೊಂಬತ್ತನೇ ಶತಮಾನದಲ್ಲಿ ಕಾರ್ಮಿಕರ ಚಳುವಳಿಗಳಿಂದಾಗಿ ಪ್ರಾರಂಭಗೊಂಡಿದ್ದು ಗೊತ್ತಾಗುತ್ತದೆ. ಕಾರ್ಮಿಕರಿಗೆ ಇಳಿ ವಯಸ್ಸಿನಲ್ಲಿ ರಕ್ಷಣೆ ನೀಡುವ ನಿಧಿ ಇರಬೇಕೆಂಬ ಬೇಡಿಕೆಗೆ ಪ್ರತಿಯಾಗಿ ಇದು ಬಂದಿದ್ದು. ಇಪ್ಪತ್ತನೇ ಶತಮಾನದಲ್ಲಿ ಭಾರತದಲ್ಲಿ ಕೆಲಸ ಮಾಡುವ ಬ್ರಿಟಿಷರಿಗೆ ನೆರವಾಗುವಂತೆ ಬ್ರಿಟಿಷ್ ಸರ್ಕಾರ ಜನರಲ್ ಪ್ರಾವಿಡೆಂಟ್ ಫಂಡ್‌ನ್ನು ಪ್ರಾರಂಭಿಸಿದರೂ ಭಾರತದ ಔದ್ಯಮಿಕ ಕಾರ್ಮಿಕರು ಈ ಯೋಜನೆಯಿಂದ ಹೊರಗೇ ಉಳಿದರು. ಸ್ವಾತಂತ್ರ್ಯ ಬರುವವರೆಗೂ ಇದು ಹಾಗೆಯೇ ಮುಂದುವರಿಯಿತು.

ಸಿಐಟಿಯು ನ ಕಾರ್ಯದರ್ಶಿಗಳಾದ ಡಬ್ಲ್ಯು.ಆರ್.ವರದರಾಜನ್ ಅವರ ಪ್ರಕಾರ ಬ್ರಿಟಿಷ್ ಸರ್ಕಾರ ಇಂತಹ ಅನುಕೂಲಗಳನ್ನು ನೀಡುವುದನ್ನು ತಪ್ಪಿಸಿಕೊಳ್ಳಲೆಂದೇ ಕಾಂಟ್ರಾಕ್ಟ್ ಪದ್ಧತಿಯನ್ನು ಪ್ರಾರಂಭಿಸಿತು.

ಭಾರತದಲ್ಲಿ ಇಪಿಎಫ್ ಸ್ವಾತಂತ್ರ್ಯಾನಂತರದಲ್ಲಿ ಪ್ರಾರಂಭವಾಯಿತು. ಕಲ್ಲಿದ್ದಲು ಉದ್ದಮೆಯ ಕಾರ್ಮಿಕರು ಇಂತಹ ಬೇಡಿಕೆಯಿಟ್ಟು ಹೋರಾಟ ಮಾಡಿದಾಗ ಈ ಯೋಜನೆಯನ್ನು ಜಾರಿಗೆ ತರಲಾಯಿತು. 1952 ರಲ್ಲಿ ಸಂಸತ್ತು ಇಪಿಎಫ್ ಮತ್ತು ಇತರ ಅವಕಾಶಗಳ ಮಸೂದೆಯನ್ನು ಪಾಸು ಮಾಡಿತು. ಆದರೆ ಕಾರ್ಮಿಕ ಚಳುವಳಿಗಳು ಶಕ್ತಿಯುತವಾಗುವವರೆಗೂ ಸುಮಾರು 1961-62 ರ ವರೆಗೂ ಈ ನಿಧಿಗೆ ಕೊಡುಗೆಯೂ ಕಡಿಮೆ ದರದಲ್ಲೇ ಇತ್ತು. 1988 ರಿಂದ ಎಲ್ಲ ವ್ಯವಸ್ಥಾಪನೆಗಳು ಶೇ 8.33 ರಷ್ಟು ಕೊಡುಗೆಯನ್ನು ಪ್ರತಿ ನೌಕರನ ಪರವಾಗಿ ನೀಡುವ ವ್ಯವಸ್ಥೆ ಜಾರಿಗೆ ಬಂತು.

ಈ ನಿಧಿಯನ್ನು ಇಪಿಎಫ್ ಸಂಘಟನೆ (ಇಪಿಎಫ್‌ಓ) ನಡೆಸಿಕೊಂಡು ಬರುತ್ತಿದೆ. ಇಪಿಎಫ್‌ಓ ಸ್ವಾಯತ್ತತೆ ಉಳ್ಳ ಸಂಸ್ಥೆ. ಆದರೆ ನಿಜದಲ್ಲಿ ಇದು ಕೇಂದ್ರ ಸರ್ಕಾರದ ಸಂಪೂರ್ಣ ಹತೋಟಿಯಲ್ಲಿದೆ. ಈ ನಿಧಿಯ ಮೇಲಿನ ಪ್ರತಿಫಲ ಕಡಿಮೆಯಾಗಿ ಆರ್ಥಿಕದಲ್ಲಿ ಹಣದುಬ್ಬರವೂ ಇದ್ದರೆ ಒಟ್ಟಾರೆಯಾಗಿ ಅದು ಕಾರ್ಮಿಕರಿಗೆ ದೊಡ್ಡ ಆಪತ್ತನ್ನು ತಂದೊಡ್ಡುವಂತಹದ್ದಾಗಿರುತ್ತದೆ. ಆದ್ದರಿಂದಲೇ ಈ ನಿಧಿಯ ಮೇಲಿನ ಪ್ರತಿಫಲವನ್ನು ಉಳಿದೆಲ್ಲ ಹೂಡಿಕೆಗಳ ಮೇಲಿನ ಪ್ರತಿಫಲಗಳಿಗೆ / ಇಳುವರಿಗೆ ಹೋಲಿಸುವುದು ತಪ್ಪಾಗುತ್ತದೆ.

ಜೀವಮಾನವಿಡೀ ಸರ್ಕಾರಿ / ಇತರ ಸೇವೆಯಲ್ಲಿ ಜೀವ ಸವೆಸಿದ ನೌಕರನಿಗೆ ಜೀವನದ ಸಂಧ್ಯೆಯಲ್ಲಿ ಬದುಕು ಮಾಡಲು ಒಂದು ಮೊತ್ತ ನೀಡುವ ಕೆಲಸವನ್ನು ಮಾಡುವುದು ಸರ್ಕಾರದ ಆದ್ಯ ಕರ್ತವ್ಯ. ಈ ಕರ್ತವ್ಯವನ್ನು ಇಪಿಎಫ್ ನ ಮೂಲಕ ಮಾಡಲಾಗುತ್ತದೆ. ಇಂತಹ ಇಪಿಎಫ್ ಎಂಬ ಉಳಿತಾಯ ಯೋಗ್ಯ ಇಳುವಳಿ ಹೊಂದುವಂತೆ ನೋಡಿಕೊಳ್ಳುವುದೂ ಸರ್ಕಾರದ ಕರ್ತವ್ಯ. ಸರ್ಕಾರ ಈ ಜವಾಬ್ದಾರಿಯಿಂದ ಈಗ ವಿಮುಖವಾಗಿರುವುದು ಸ್ಪಷ್ಟ.

ಐಎಂಎಫ್ / ವಿಶ್ವ ಬ್ಯಾಂಕ್ ಪ್ರಣೀತ ಸಾಮ್ರಾಜ್ಯಶಾಹಿ ಪರವಾದ ಆರ್ಥಿಕ ನೀತಿಗಳನ್ನು ಅನುಸರಿಸುತ್ತಿರುವ ಕೇಂದ್ರ ಸರ್ಕಾರ ದುಡಿವ ಜನರ ವಿರುದ್ಧವಾಗಿಯೇ ಕೆಲಸ ಮಾಡುತ್ತಿರುವುದು ಸ್ಪಷ್ಟ. ದುಡಿವ ಜನ ತಮ್ಮ ಹಕ್ಕಿಗಾಗಿ ಹೋರಾಟದ ಹಾದಿಯನ್ನು ಅನುಸರಿಸಲೇಬೇಕಾದ ಅನಿವಾರ್ಯತೆ ಈಗ ಉದ್ಭವವಾಗಿದೆ.

ನೌಕರರ ಪ್ರಾವಿಡೆಂಡ್ ನಿಧಿಯ ಹೂಡಿಕೆಗಳು(ಕೋಟಿ ರೂಪಾಯಿಗಳಲ್ಲಿ)

	ಇಪಿಎಫ್	ಪೆನ್ಷನ್ ನಿಧಿ	ಠೇವಣಿ	ಒಟ್ಟು
ವಿಶೇಷ ಠೇವಣಿ ಯೋಜನೆ	51954.97	1339.37	2.50	532296.63
ಕೇಂದ್ರ ಸರ್ಕಾರದ ಬಾಂಡುಗಳು	6613.31	9640.54	288.73	16542.58
ಸಾರ್ವಜನಿಕ ಖಾತೆ	533.58	496.15	15.24	1044.97
ರಾಜ್ಯ ಸರ್ಕಾರ ಸೆಕ್ಯೂರಿಟಿಗಳು	5419.75	4426.61	134.34	989.70
ಸರ್ಕಾರಿ ವಲಯದ ಉದ್ದಿಮೆಗಳು/ ಹಣಕಾಸು ಸಂಸ್ಥೆಗಳು	7317.19	13508.14	401.55	21226.88
ಒಟ್ಟು	71838.50	52293.87	3904.23	128030.70

ದುಡಿಯುವವರ ಜೀವನ ಭದ್ರತೆಗಾಗಿ....

(ಹಿರಿಯ ಟ್ರೇಡ್ ಯೂನಿಯನ್ ನಾಯಕ, ಸಿಐಟಿಯು ಅಧ್ಯಕ್ಷ ಮತ್ತು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಡಾ. ಎಂ.ಕೆ.ಪಂಧೆ ಅವರೊಂದಿಗಿನ ಸಂದರ್ಶನದ ಸಂಗ್ರಹನುವಾದ. ಸಂದರ್ಶಿಸಿದವರು 'ಫ್ರಂಟ್ ಲೈನ್' ಪತ್ರಿಕೆಯ ವಿ.ಶ್ರೀಧರ್)

ಪ್ರ.: ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯ ಇಪಿಎಫ್ ಮೇಲಿನ ಬಡ್ಡಿಯನ್ನು ಶೇ 9.5 ಕ್ಕೆ ಏರಿಸಲು ಸಾಧ್ಯವೇ ಇಲ್ಲ ಎಂದು ಹೇಳಿದೆಯಲ್ಲಾ. ಮಾರುಕಟ್ಟೆಯಲ್ಲಿ ಬಡ್ಡಿದರಗಳು ಇಳಿಯುತ್ತಿರುವುದರಿಂದ ಇದು ಸಾಧ್ಯವಿಲ್ಲ ಎಂದು ಅದು ಹೇಳಿದೆ. ಇದಕ್ಕೆ ನಿಮ್ಮ ತಕರಾರೇನು?


ಉ: ನಮ್ಮ ವಾದದ ಮುಖ್ಯ ಅಂಶ ಇದು ಇಪಿಎಫ್ ಒಂದು ಸಣ್ಣ ಉಳಿತಾಯ ಯೋಜನೆಯಲ್ಲ. ದುಡಿವ ಜನ ತಮ್ಮ ದುಡಿಮೆಯ 30-40 ವರ್ಷಗಳ ಕಾಲದಲ್ಲಿ ತಮ್ಮ ಅಂತ್ಯದ ಕಾಲಕ್ಕಾಗಿ ಉಳಿತಾಯ ಮಾಡಿರುತ್ತಾರೆ. ಇದೊಂದು ಸಾಮಾಜಿಕ ಭದ್ರತಾ ಯೋಜನೆ. ಆದ್ದರಿಂದಲೇ ಮಾರುಕಟ್ಟೆ ಬಡ್ಡಿ ದರಗಳನ್ನು ಉದಾಹರಿಸಿ ಈ ಯೋಜನೆಗೆ ಬಡ್ಡಿದರ ಕಡಿಮೆ ಮಾಡುವುದು ಸರಿಯಲ್ಲ.

ಪ್ರ.: ಹಾಗಾದರೆ ಇಪಿಎಫ್ ಮೇಲಿನ ಬಡ್ಡಿ ಹೇಗೆ ನಿರ್ಧರಿಸಬೇಕು?

ಉ: ಇಲ್ಲಿ ಸಮಸ್ಯೆ ಏನೆಂದರೆ ಈ ಇಪಿಎಫ್‌ನ ಹಣವನ್ನು ಹೇಗೆ ಹೂಡಿಕೆ ಮಾಡಬೇಕೆಂಬುದನ್ನು ಸರ್ಕಾರ ನಿರ್ದೇಶಿಸುತ್ತದೆ. ಇಪಿಎಫ್‌ನ ಟ್ರಸ್ಟಿ ಮಂಡಳಿಗೆ ಇದರಲ್ಲಿ ಯಾವದೇ ಪಾತ್ರವಿಲ್ಲ. ಇದರಿಂದಾಗಿಯೇ ಕಾರ್ಮಿಕರಿಗೆ ಹಾನಿಯಾಗುತ್ತದೆ.

ಉದಾಹರಣೆಗೆ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಬೇರೆ ಬೇರೆ ಮೂಲಗಳಿಂದ ಹಣಕಾಸು ನೆರವು ಪಡೆಯುತ್ತವೆ. ಅವು ಶೇ 12 ಕ್ಕೂ ಹೆಚ್ಚಿಗೆ ಬಡ್ಡಿ ನೀಡುತ್ತವೆ. ಇಪಿಎಫ್ ನ ಹಣವನ್ನು ಈ ಉದ್ದಿಮೆಗಳಿಗೆ ಸಾಲವಾಗಿ ನೀಡಬಹುದಲ್ಲ.

ಪ್ರ. ಇಪಿಎಫ್ ಉಳಿದ ಸಣ್ಣ ಉಳಿತಾಯ ಯೋಜನೆಗಳಿಗಿಂತ ಹೇಗೆ ಭಿನ್ನವಾಗಿದೆ?



ಉ: ದುಡಿಯುವ ಕಾರ್ಮಿಕರಿಗೆ ವೃದ್ಧಾಪ್ಯದಲ್ಲಿ ಜೀವನ ಸೌಲಭ್ಯಗಳನ್ನು ಒದಗಿಸಬೇಕೆಂಬ ಉದ್ದೇಶದಿಂದಲೇ ಇಪಿಎಫ್ ಜಾರಿಗೆ ಬಂದಿರುವುದು. ಈಗಿರುವ ಮಾರುಕಟ್ಟೆ ಬಡ್ಡಿ ದರದಲ್ಲಿ ಇದು ಪೂರ್ತಿಯಾಗಿ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಯೋಜನೆಗೆ ಸಹಾಯಧನ ನೀಡುವುದು ಸರ್ಕಾರದ ಕರ್ತವ್ಯವಾಗಬೇಕು. ಈ ಹಣವನ್ನು ಸರ್ಕಾರವೇ ಬಹುತೇಕವಾಗಿ ಬಳಸುತ್ತಿರುವುದರಿಂದ ಇದು ಸುಲಭಸಾಧ್ಯ.

ಪ್ರ.: ಇಪಿಎಫ್ ಇತಿಹಾಸವನ್ನು ಸ್ವಲ್ಪ ವಿವರಿಸುತ್ತೀರಾ?

ಉ: ಪ್ರಾವಿಡೆಂಡ್ ಫಂಡ್ ಕಾಯಿದೆ 1952 ರಲ್ಲಿ ಪಾಸಾಯಿತು. ಹಿಂದೆ ಇಪಿಎಫ್ ನ ಉಳಿತಾಯ ಶೇ. 6 ಇದ್ದದ್ದು ಶೇ. 12 ರ ವರೆಗೆ ಕ್ರಮೇಣ ಏರಿತು. ಈ ಏರಿಕೆ ಸಾಕಷ್ಟು ಪ್ರಮಾಣದಲ್ಲಿ ಉಳಿತಾಯ ಮಾಡುವ ಉದ್ದೇಶದಿಂದ ಆಯಿತು. ಹಿಂದಿನ ಭಾರತೀಯ ಕಾರ್ಮಿಕರ ಸಮಾವೇಶದಲ್ಲಿ ಇದನ್ನು ಶೇ. 13 ಕ್ಕೇರಿಸಬೇಕೆಂಬ ಸರ್ವಾನುಮತದ ತೀರ್ಮಾನವು ಇದೆ. ಪೆನ್ಷನ್ ನಿಧಿಯ ಮೇಲಿನ ಬಡ್ಡಿ ದರವೂ ಕಡಿಮೆ ಆಗಿರುವುದರಿಂದ ಈ ನಿಧಿಯು ಬೆಳೆಯದೇ ಹೋಗುತ್ತಿದೆ. ಕಾರ್ಮಿಕರಲ್ಲಿ ಈ ವಿಷಯದಲ್ಲಿ ಅಸಮಾಧಾನ ಇದೆ. 1971 ರಲ್ಲಿ ಪ್ರಾರಂಭ ಮಾಡಿದ ಕುಟುಂಬ ಪೆನ್ಷನ್ ನಿಧಿಯನ್ನು 1995 ರಲ್ಲಿ ಇಪಿಎಫ್ ನಲ್ಲಿ ವಿಲೀನ ಮಾಡಲಾಯಿತು. ಆಗ ಈ ಯೋಜನೆಯಲ್ಲಿ 14000 ಕೋಟಿ ರೂಪಾಯಿಗಳ ಶಿಲ್ಕು ಇತ್ತು. ಇದರರ್ಥ ಕಾರ್ಮಿಕರಿಗೆ ಇಷ್ಟು ಕಡಿಮೆ ದೊರೆತಿದೆ ಎಂದು. ಇಂದೂ ಅದೇ ಆಗುವ ಸಾಧ್ಯತೆ ಇದೆ.

ಪ್ರ: ಇಪಿಎಫ್ ಜಾರಿಗೆ ತರುವಲ್ಲಿ ಮತ್ತು ಇತರ ಕಾರ್ಮಿಕ ಕಲ್ಯಾಣ ಕಾರ್ಯಕ್ರಮವನ್ನು ಜಾರಿಗೆ ತರುವಲ್ಲಿ ಟ್ರೇಡ್ ಯೂನಿಯನ್‌ನ ಪಾತ್ರವೇನು?

ಉ: ಟ್ರೇಡ್ ಯೂನಿಯನ್ ಚಳುವಳಿ ಯಾವಾಗಲೂ ಹೆಚ್ಚೆಚ್ಚು ಕಾರ್ಮಿಕರನ್ನು ಇಪಿಎಫ್ ಯೋಜನೆಯಡಿ ತರಬೇಕೆಂದು ಪ್ರಯತ್ನಿಸುತ್ತಲೇ ಬಂದಿದೆ. ಸರ್ಕಾರ ಇದಕ್ಕೆ ಹಿಂಜರಿಕೆ ತೋರುತ್ತಲೇ ಬಂದಿದೆ. ಪ.ಬಂಗಾಳದ ಸರ್ಕಾರ ಅಸಂಘಟಿತ ವಲಯಕ್ಕೂ ಈ ಯೋಜನೆಯನ್ನು ಅನ್ವಯಗೊಳಿಸುವ ಯೋಜನೆಯೊಂದನ್ನು ಜಾರಿಗೆ ತಂದಿದೆ.

ಪ್ರ: ಕಡಿಮೆ ಬಡ್ಡಿ ದರಗಳಿಂದ ಯಾರಿಗೆ ಲಾಭವಾಗುತ್ತಿದೆ?

ಉ: ಹಿಂದಿನ ಎನ್‌ಡಿಎ ಸರ್ಕಾರದ ಆಡಳಿತದ ಕಾಲದಲ್ಲಿ ಉದ್ದಿಮೆಗಳಿಗೆ ರಿಯಾಯಿತಿ, ಸಹಾಯಧನ ಇತ್ಯಾದಿಗಳಿಂದಾಗಿ ಸುಮಾರು 50000 ಕೋಟಿ ರೂಪಾಯಿಗಳ ಕಂದಾಯ ಸರ್ಕಾರಕ್ಕೆ ನಷ್ಟವಾಯಿತು. ಪಿ.ಚಿದಂಬರಂ ಅವರ ಈ ಸಾರಿಯ ಬಜೆಟ್ ಪ್ರಕಾರ ಸೆಕ್ಯೂರಿಟಿ ವ್ಯವಹಾರಗಳ ಮೇಲಿನ ತೆರಿಗೆಗಳಿಂದಾಗಿ 7000 ಕೋಟಿ ರೂಪಾಯಿಗಳ ಸಂಗ್ರಹಣೆ ಆಗಬೇಕಾಗಿತ್ತು. ಇದರಲ್ಲಿ ಆಗಲೇ 6000 ಕೋಟಿ ರೂಪಾಯಿಗಳ ರಿಯಾಯಿತಿಯನ್ನು ಅವರು ಘೋಷಿಸಿದ್ದಾರೆ. ಈಗ ಇಪಿಎಫ್ ಮೇಲೆ ಹೆಚ್ಚಿನ ಬಡ್ಡಿ ನೀಡುವುದಕ್ಕೆ 3000 ಕೋಟಿ ರೂಪಾಯಿಗಳು ಸಾಕು. ಯಾರಿಗೆ ಲಾಭವಾಗುತ್ತದೆ ಎಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ.

ಪ್ರ: ಇಪಿಎಫ್‌ಓ ಹೂಡಿಕೆ ವಿಷಯದಲ್ಲಿ ಪೂರ್ಣ ಸ್ವಾತಂತ್ರ್ಯ ಹೊಂದಿಲ್ಲ. ಹೀಗಿರುವಾಗ ಹೆಚ್ಚಿನ ಪ್ರತಿಫಲ ಬರಲು ಸಾಧ್ಯವೇ?

ಉ: ಇಪಿಎಫ್‌ಓ ಗೆ ಸ್ವಾಯತ್ತತೆ, ಇದು ಹೂಡಿಕೆಯ ಪ್ರಕ್ರಿಯೆ ಪ್ರಜಾಸತ್ತಾತ್ಮಕವಾಗಿ, ಆದರೆ

ಪುಟ 11 ಕ್ಕೆ

ನೋಂದಣಿಯಾದ ಉದ್ಯೋಗಾಕಾಂಕ್ಷಿಗಳ ಹೆಚ್ಚಳ

ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನೋಂದಣಿಯಾಗುವ ವಿದ್ಯಾವಂತ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಉದ್ಯೋಗಿಗಳು - ನಿರುದ್ಯೋಗಿಗಳ ನಡುವೆ ಸೃಷ್ಟಿಗೊಳ್ಳುತ್ತಿರುವ ಅಂತರ ಎಂತಹದು?

ಭಾರತದಲ್ಲಿ ಹೆಚ್ಚುತ್ತಿರುವ ಉದ್ಯೋಗಾಕಾಂಕ್ಷಿಗಳ ಅರ್ಥಾತ್ ನಿರುದ್ಯೋಗಿಗಳ ಸಂಖ್ಯೆ ದೇಶದ ಸಮಸ್ಯೆಗಳಲ್ಲೇ ಅತಿ ಗಂಭೀರದ್ದಾಗಿದೆ. ಕಾರ್ಮಿಕ ಮಂತ್ರಾಲಯವು ದೇಶದ ಉದ್ಯೋಗ ವಿನಿಮಯಗಳ ಅಂಕಿ ಅಂಶಗಳ ವಿಶ್ಲೇಷಣಾ ಪ್ರಕ್ರಿಯೆಯನ್ನಾರಂಭಿಸಿ. ರುವುದು ಇದೇ ಪ್ರಥಮ ಬಾರಿಯಿರಬಹುದು. ನೊಂದಣಿಯಾದ ಉದ್ಯೋಗಾಕಾಂಕ್ಷಿಗಳ ಸಂಖ್ಯೆ 1998 ರಿಂದ ಸತತವಾಗಿ ಏರುತ್ತಾ ಹೋಗಿದೆಯೆಂದು ಕೇವಲ ಕಳೆದ 5 ವರ್ಷಗಳ ಅಂಕಿ ಅಂಶಗಳು ತಿಳಿಸುತ್ತವೆ. ಇದು ಉದ್ಯೋಗಾಕಾಂಕ್ಷಿಗಳ ಮತ್ತು ಉದ್ಯೋಗ ಪಡೆದವರ ಮಧ್ಯೆ ದೊಡ್ಡ ಅಸಮತೋಲನವನ್ನೇ ಸೃಷ್ಟಿಸಿತು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಆರ್ಥಿಕ ಉದಾರೀಕರಣದಿಂದ ಹೆಚ್ಚು ಉದ್ಯೋಗ ಸೃಷ್ಟಿಯಾಗಿದೆ ಎಂದು ಸರ್ಕಾರ ಎಷ್ಟೇ ಬೊಬ್ಬಿಟ್ಟು ಪ್ರಚಾರ ಮಾಡಿದರೂ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಲಭ್ಯವಿರುವ ಅಧಿಕೃತ ಅಂಶಗಳು ಇದನ್ನು ಅಲ್ಲಗಳೆಯುತ್ತವೆ.

ಅಧಿಕೃತ ಅಂಕಿ ಅಂಶಗಳ ಪ್ರಕಾರ, 31 ಡಿಸೆಂಬರ್ 2003 ರಂತೆ 4.14 ಕೋಟಿಗೂ ಹೆಚ್ಚು ಉದ್ಯೋಗಾಕಾಂಕ್ಷಿಗಳಿದ್ದರು. ಇದೇ ವರ್ಷವೊಂದರಲ್ಲೇ, 945 ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಒಟ್ಟಾರೆ 9.2 ಲಕ್ಷ ಉದ್ಯೋಗಾಕಾಂಕ್ಷಿಗಳ ಪೈಕಿ ಕೇವಲ 1.5 ಲಕ್ಷ ಜನರಿಗೆ ಮಾತ್ರ ಉದ್ಯೋಗಾವಕಾಶ ಒದಗಿಸಲಾಯಿತು. ಇದರಿಂದ ಸ್ಪಷ್ಟವಾಗುವುದೇನೆಂದರೆ, ಉದ್ಯೋಗಾಕಾಂಕ್ಷಿಗಳ ಅಗತ್ಯತೆಗಳನ್ನು ಪರಿಣಾಮಕಾರಿಯಾಗಿ ಈಡೇರಿಸಲು ಮತ್ತು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಉದ್ಯೋಗ ವಿನಿಮಯ ಕೇಂದ್ರಗಳು ತಮ್ಮ ಕಾರ್ಯವೈಖರಿಯನ್ನು ಬದಲಾಯಿಸಿಕೊಂಡು ವೃತ್ತಿಪರವಾಗಬೇಕು. ಇದಲ್ಲದೆ, ದೇಶದಲ್ಲಿನ ಉದ್ಯೋಗಾಕಾಂಕ್ಷೆಗಳ ವಾಸ್ತವ ಅಂಕಿ ಅಂಶಗಳ ಪ್ರಮಾಣವನ್ನು ಪ್ರತಿಬಿಂಬಿಸುವುದನ್ನು ವಿನಿಮಯ ಕೇಂದ್ರಗಳು ನಿಲ್ಲಿಸಿವೆ. ಆದರೆ ಇದೇ ಅವಧಿಯಲ್ಲಿ ಉದ್ಯೋಗ ಕೊಡಿಸುವ ದೃಷ್ಟಿಯಿಂದ ಕೆಲಸ ಮಾಡುತ್ತಿರುವ ಖಾಸಗಿ ಏಜೆನ್ಸಿಗಳು ಮತ್ತು ಅಂತರ್ಜಾಲಗಳು ಬಹಳಷ್ಟು ಸೃಷ್ಟಿಯಾಗಿದ್ದು ಉದ್ಯೋಗಾಕಾಂಕ್ಷಿಗಳ ಅಗತ್ಯತೆಗಳನ್ನು ಉತ್ತಮವಾಗಿ ನಿರ್ವಹಿಸುವಲ್ಲಿ ಸಫಲವಾಗಿವೆ.

ಉದ್ಯೋಗಾವಕಾಶಗಳು 2002 ರಲ್ಲಿ ಸುಮಾರು 1.42 ಲಕ್ಷಗಳಿಂದ 2003 ರಲ್ಲಿ 1.55 ಲಕ್ಷಕ್ಕೇರಿದರೆ ಅಧಿಸೂಚನೆಯಾದ ಖಾಲಿ ಹುದ್ದೆಗಳ ಸಂಖ್ಯೆ ಕೂಡ 2002 ರಲ್ಲಿ 2.2 ಲಕ್ಷದಿಂದ 2003 ರಲ್ಲಿ 2.6 ಲಕ್ಷಕ್ಕೇರಿತು. 1994 ಮತ್ತು 2000 ನೇ ವರ್ಷಗಳ ಮಧ್ಯೆ, ಉದ್ಯೋಗಾಕಾಂಕ್ಷೆಗಳ ಸಂಖ್ಯೆ ಮಾತ್ರ ಸುಮಾರು 50.6 ಮತ್ತು 64.2 ಲಕ್ಷಗಳ ಮಧ್ಯೆ ಏರಿಳಿತವಾಗುತ್ತಿತ್ತು. ಇದೇ ಅವಧಿಯಲ್ಲಿ, ಅಧಿಸೂಚನೆಯಾದ ಖಾಲಿ ಹುದ್ದೆಗಳ ಸಂಖ್ಯೆ 2.2 ಲಕ್ಷದಿಂದ 4.2 ಲಕ್ಷದವರೆಗೆ ಏರಿಳಿತವಾಗುತ್ತಿತ್ತು. ಸಂಕ್ಷಿಪ್ತವಾಗಿ, ದೇಶದಲ್ಲಿನ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಬಲೂನಿನಾಕಾರದಂತೆ ಸರ್ಕಾರ ಉದ್ಯೋಗವಕಾಶ ಒದಗಿಸುವುದಕ್ಕಿಂತ ಬಹಳ ವೇಗವಾಗಿ ಬೆಳೆಯುತ್ತಿದೆ.


ಅಂಕಿ ಅಂಶಗಳಿಂದ ತಿಳಿಯುವ ಬಹುಮುಖ್ಯವಾದ ಅಂಶವೆಂದರೆ, ಶೇ.70 ಮಂದಿ ಉದ್ಯೋಗಾಕಾಂಕ್ಷಿಗಳು 29 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದು, ಚಿಕ್ಕಂದಿನಲ್ಲೇ ಸೂಕ್ತವಾದ ಉದ್ಯೋಗ ಪಡೆಯಲು ಬಹಳ ಕಷ್ಟಗಳನ್ನೆದುರಿಸುತ್ತಾರೆ. ಅದರಲ್ಲೂ ಮುಖ್ಯವಾಗಿ ಚಿಂತೆಗೀಡು ಮಾಡುವ ಅಂಶವೆಂದರೆ ಹೆಚ್ಚಿನ ಯುವಕರು ವಿದ್ಯಾವಂತ ಉದ್ಯೋಗಾಕಾಂಕ್ಷಿಗಳೆಂಬುದು.

ಒಟ್ಟಾರೆ ವಿದ್ಯಾವಂತ ಉದ್ಯೋಗಾಕಾಂಕ್ಷಿಗಳ ಶೇಕಡಾವಾರು ಸಂಖ್ಯೆ 1993 ರಲ್ಲಿ ಶೇ. 65.1 ರಿಂದ 2002ರ ಕೊನೆಯ ಹೊತ್ತಿಗೆ ಶೇ.72.1 ಆಗಿದೆ ಮತ್ತು ಶೇ. 56.8 ವಿದ್ಯಾವಂತ ಉದ್ಯೋಗಾಕಾಂಕ್ಷಿಗಳು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದರೆ ಶೇ.26 ಮಂದಿ ಪಿಯುಸಿ ಓದಿದವರಾಗಿದ್ದು ಶೇ. 17.2 ಮಂದಿ ಪದವಿಧರರಾಗಿರುತ್ತಾರೆ ಮತ್ತು ಅದಕ್ಕಿಂತ ಹೆಚ್ಚು ಓದಿರುತ್ತಾರೆ. ಕಡೆಯ ವಿಭಾಗದಲ್ಲಿ, ಬಹುತೇಕ ಉದ್ಯೋಗಾಕಾಂಕ್ಷಿಗಳು (ಶೇ. 40.5) ಕಲಾ ವಿಭಾಗದಿಂದ ಬಂದವರಿರುತ್ತಾರೆ. ವಿಜ್ಞಾನ ಮತ್ತು ವಿಜ್ಞಾನಾಧಾರಿತ ಕ್ಷೇತ್ರದಿಂದ ಬಂದಂತಹ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಇದಕ್ಕೆ ಹೋಲಿಸಿದರೆ ಕಡಿಮೆ. ಇಷ್ಟೆಲ್ಲಾ ವಿದ್ಯೆ ಗಳಿಸಿ ಕೆಲಸವಿಲ್ಲದೆ ಮತ್ತೆ ತಮ್ಮ ಹಳ್ಳಿಗಳ ಕಡೆ ಅಥವಾ ಮನೆಯ ಕಡೆ ಮುಖ ಮಾಡಿ ಹೊರಡುವುದು ಮಾನಸಿಕವಾಗಿ ಹಿಂಸೆಯಾಗಿರುತ್ತದೆ. ಮುಂದಿನ ಹಾದಿಯ ಗೊತ್ತು ಗುರಿ ಇಲ್ಲದೆ ಮನೆಯವರಿಗೆ ಭಾರವಾಗಿ ಬದುಕುವುದು ಬರ್ಭರವೇ ಸರಿ.

ರಾಜ್ಯಗಳ ಅಂಕಿ ಅಂಶಗಳತ್ತ ಗಮನ ಹರಿಸಿದರೆ, 2003 ರಲ್ಲಿ ಅತಿ ಹೆಚ್ಚು ಉದ್ಯೋಗಾಕಾಂಕ್ಷೆಗಳು ಪಶ್ಚಿಮ ಬಂಗಾಳ (67.2 ಲಕ್ಷ) ದಲ್ಲಿದ್ದರೆ, ತಮಿಳುನಾಡು (50.1 ಲಕ್ಷ), ಮಹಾರಾಷ್ಟ್ರ (43.2 ಲಕ್ಷ) ಮತ್ತು ಕೇರಳ (36.4 ಲಕ್ಷ)ಗಳು ನಂತರದ ಸ್ಥಾನದಲ್ಲಿ ಬರುತ್ತವೆ.

ಅತಿ ಹೆಚ್ಚು ಉದ್ಯೋಗ ವಿನಿಮಯ ಕೇಂದ್ರಗಳಿಂದ ಅಧಿಸೂಚನೆಯಾದ ಖಾಲಿ ಹುದ್ದೆಗಳು ಗುಜರಾತ್ (68.3 ಲಕ್ಷ) ನಲ್ಲಿದ್ದರೆ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಹರಿಯಾಣಗಳು ನಂತರದ ಸ್ಥಾನದಲ್ಲಿವೆ. ಇತರೆ ರಾಜ್ಯಗಳಲ್ಲಿ ಅಧಿಸೂಚನೆಯಾದ ಖಾಲಿ ಹುದ್ದೆಗಳ ಸಂಖ್ಯೆ 30,000 ದಿಂದ 99,000 ದವರೆಗೆ ಇವೆ.

'ಉದ್ಯೋಗ ಕೊಡಿ ಇಲ್ಲವೇ ನಿರುದ್ಯೋಗ ಭತ್ಯೆ ನೀಡಿ' ಎಂದು ಆಗ್ರಹಿಸಿ ಡಿವೈಎಫ್ಐ ದೇಶವ್ಯಾಪಿ ಚಳುವಳಿಯನ್ನು ಹಮ್ಮಿಕೊಂಡಿದೆ. 2 ಕೋಟಿ ಸಹಿ ಸಂಗ್ರಹಣೆಗೆ ಮುಂದಾಗಿದೆ. ಅಕ್ಟೋಬರ್ 15 ರಂದು ಬೃಹತ್ ವಿಧಾನಸೌಧಚಲೋ ನಡೆಸುತ್ತಿದೆ.



ಬೆಂಗಳೂರಿನಲ್ಲಿ ಸಹಿ ಸಂಗ್ರಹಣೆ ಚಳುವಳಿ ಉದ್ಘಾಟನೆ - ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್.ದೊರೆಸ್ವಾಮಿಯವರಿಂದ...

ಟೆಲಿಕಾಂನಲ್ಲಿ ವಿದೇಶಿ ಬಂಡವಾಳಕ್ಕೆ ಏಕೆ ವಿರೋಧ?

ಪುಟ 5 ರಿಂದ

- ಭಾರೀ ಬಂಡವಾಳ ಮತ್ತು ಆಧುನಿಕ ತಂತ್ರಜ್ಞಾನ ಬೇಕು. ಅದು ವಿದೇಶಿ ಬಂಡವಾಳದ ಮೇಲಿನ ಮಿತಿ ತೆಗೆದರೆ ಮಾತ್ರ ಸಾಧ್ಯ.
- ವಿದೇಶಿ ಬಂಡವಾಳ ಈ ಕ್ಷೇತ್ರದಲ್ಲಿ ತೀವ್ರ ಪೈಪೋಟಿ ತಂದು ಸೇವೆ ಉತ್ತಮ ಪಡಿಸುತ್ತದೆ.
- ಚೀನಾ ಇಂತಹ ನೀತಿಯಿಂದಲೇ ಅದ್ಭುತ ಪ್ರಗತಿ ಸಾಧಿಸಿದೆ.

ಈ ಎಲ್ಲಾ ವಾದಗಳು ನಿರಾಧಾರ ಎಂಬುದನ್ನು ಅಂಕೆಸಂಖ್ಯೆಗಳು ಹೇಳುತ್ತವೆ.

ವಿದೇಶಿ ಬಂಡವಾಳ ಇಲ್ಲದೆ ಕಳೆದ ಮೂರು ವರ್ಷದಲ್ಲಿ ಇಂಡಿಯಾದ ಟೆಲಿಕಾಂ ಸಾಂದ್ರತೆ ಇಮ್ಮಡಿಯಾಗಿದೆ. ಇದು ಸಾಧ್ಯವಾದದ್ದು ಮುಖ್ಯವಾಗಿ ಟೆಲಿಕಾಂ ಸೇವಾ ದರಗಳು ಕಡಿಮೆಯಾದದ್ದರಿಂದ. ಬಿಎಸ್‌ಎನ್‌ಎಲ್ ಮೊಬೈಲ್ ಸೇವಾ ಕ್ಷೇತ್ರಕ್ಕೆ ಪ್ರವೇಶಿಸುವ ಮೊದಲು ಖಾಸಗಿ ಮೊಬೈಲ್ ಕಂಪನಿಗಳು ದರಗಳನ್ನು ಬಿಗಿಯಾಗಿ ಇಟ್ಟಿದ್ದವು. ಬಿಎಸ್‌ಎನ್‌ಎಲ್ ಪ್ರವೇಶಿಸುತ್ತಿದ್ದಂತೆ ದರಗಳು ಇಳಿದು ಈ ಕ್ಷೇತ್ರ ವಿಸ್ತಾರಗೊಂಡಿತು. ವಿದೇಶಿ ಬಂಡವಾಳ ಇಲ್ಲದೆ 2005 ರೊಳಗೆ ಶೇಕಡಾ 7 ಟೆಲಿಕಾಂ ಸಾಂದ್ರತೆ ಮುಟ್ಟಲು ಸಾಧ್ಯ ಎಂದು ಮೊಬೈಲ್ ಕಂಪನಿಗಳ ಸಂಘ ಹೇಳಿದೆ. ಆದರೆ ಒಂದು ವರ್ಷದ ಮೊದಲೇ ಈ ಗುರಿ ಸಾಧಿಸಲಾಗಿದೆ. **ಬಂಡವಾಳ ಹೂಡಿಕೆ (ವಿದೇಶಿ ಬಂಡವಾಳ ಸೇರಿದಂತೆ) ಟೆಲಿಕಾಂ ಕ್ಷೇತ್ರದ ವಿಸ್ತಾರಕ್ಕೆ ಪ್ರಮುಖ ಅಡ್ಡಿ ಅಲ್ಲ. ಸೇವೆಯ ಬೆಲೆ ಪ್ರಮುಖ ಅಂಶ.**

ಟೆಲಿಕಾಂ ಕ್ಷೇತ್ರದ ವಿಸ್ತಾರಕ್ಕೆ ಬಂಡವಾಳದ ಅಭಾವ ಅಡ್ಡಿ ಎಂಬುದು ನಿರಾಧಾರ. ಈಗ ಬಿಎಸ್‌ಎನ್‌ಎಲ್ ಸೇರಿದಂತೆ ಭಾರತೀಯ ಟೆಲಿಕಾಂ ಕಂಪನಿಗಳಿಗೆ ಅಗತ್ಯ ಬಂಡವಾಳ ಹೊಂಚಲು - ಶೇರು ಮಾರುಕಟ್ಟೆಯಿಂದ, ಹಣಕಾಸು ಸಂಸ್ಥೆಗಳಿಂದ ಸಾಲ - ಹಲವು ದಾರಿಗಳಿವೆ. ರಿಲೈಯೆನ್ಸ್, ಟಾಟಾ, ಭಾರತಿ ಮತ್ತು ಬಿಎಸ್‌ಎನ್‌ಎಲ್/ ಎಂಟಿಎನ್‌ಎಲ್ -ಟೆಲಿಕಾಂ ಸೇವಾ ವಿಸ್ತಾರಕ್ಕೆ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೊಂಚಿ ಹೂಡುತ್ತಿವೆ. ಕಳೆದ ಮೂರು ವರ್ಷಗಳಲ್ಲಿ ಟೆಲಿಕಾಂ ಸೇವಾ ವಿಸ್ತಾರದ ದೊಡ್ಡ ಭಾಗ ಈ ಕಂಪನಿಗಳ ಹೂಡಿಕೆಯಿಂದ ಬಂದಿದೆ. ವಿದೇಶಿ ಬಂಡವಾಳದ ಪಾತ್ರ ನಗಣ್ಯ. ಈ ಕಂಪನಿಗಳು ದೊಡ್ಡ ರೀತಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸುವಲ್ಲೂ ಪ್ರಮುಖ ಪಾತ್ರ ವಹಿಸಿವೆ. ಆದ್ದರಿಂದ ಬಂಡವಾಳ-ತಂತ್ರಜ್ಞಾನ ತರಲು ವಿದೇಶಿ ಬಂಡವಾಳವೇ ಬೇಕು ಎಂಬುದು ನಿರಾಧಾರ.



ಟೆಲಿಕಾಂ ತಮ್ಮ ಮುಷ್ಟಿಯಲ್ಲಿರಬೇಕು ಎನ್ನುತ್ತಿರುವ ಖಾಸಗಿ ಕಂಪನಿಗಳ ಮಾಲೀಕರು



ಪೈಪೋಟಿ ಈಗಲೇ ಇದೆ

ಇನ್ನು ಇಂಡಿಯಾದ ಟೆಲಿಕಾಂ ಸೇವಾ ಕ್ಷೇತ್ರದಲ್ಲಿ ಪೈಪೋಟಿ ಹೆಚ್ಚಿಸಲು ವಿದೇಶಿ ಬಂಡವಾಳ ಬೇಕು ಎಂಬುದು ಅಷ್ಟೇ ನಿರಾಧಾರ. ಸ್ಥಿರ ಫೋನು ಸೇವೆ, ಮೊಬೈಲ್ ಫೋನು ಸೇವೆ - ಇವೆರಡೂ ಕ್ಷೇತ್ರಗಳಲ್ಲಿ ಕನಿಷ್ಟ ಮೂರು - ನಾಲ್ಕು ಪ್ರಮುಖ ಕಂಪನಿಗಳು ಪೈಪೋಟಿಯಲ್ಲಿದ್ದು, ಇದಕ್ಕಾಗಿ ವಿದೇಶಿ ಬಂಡವಾಳದ ಅಗತ್ಯ ಇಲ್ಲ. ಎರಡು-ಮೂರು ಕಂಪನಿಗಳಿಗಿಂತ ಹೆಚ್ಚಿನ ಪೈಪೋಟಿ ಟೆಲಿಕಾಂನಲ್ಲಿ ಬಂಡವಾಳದ ಪೋಲು. ಅಲ್ಲದೆ ವಿದೇಶಿ ಬಂಡವಾಳದ ಮೇಲೆ ನಿರ್ಬಂಧ ತೆಗೆದರೆ ಒಂದೆರೆಡು ಕಂಪನಿಗಳ ಎಲ್ಲಾ ಕ್ಷೇತ್ರಗಳಲ್ಲಿ ಕಂಪನಿಗಳನ್ನು ಖರೀದಿಸಿ, ಏಕಸ್ವಾಮ್ಯ ಹೇಳುವ ಅಪಾಯವೂ ಇದೆ.

ದುಡಿಯುವವರ ಜೀವನ ಭದ್ರತೆಗಾಗಿ....

ಪುಟ 10 ರಿಂದ

ಹೆಚ್ಚಿನ ಪ್ರತಿಫಲ ದೊರಕೇ ದೊರಕುತ್ತದೆ. ಕಾರ್ಮಿಕರೇ ಈ ಹೂಡಿಕೆಗಳ ಬಗ್ಗೆ ನಿರ್ಧರಿಸುವಂತಾಗಬೇಕು.

ಪ್ರ: ಇಪಿಎಫ್ ಹಣವನ್ನು ಶೇರು ಮಾರುಕಟ್ಟೆಗಳಲ್ಲಿ ಹೂಡಬೇಕು ಎಂಬ ವಾದವಿದೆಯಲ್ಲ?

ಉ: ಇದನ್ನು ಎಲ್ಲಾ ಟ್ರೇಡ್ ಯೂನಿಯನ್‌ಗಳು ವಿರೋಧಿಸಿವೆ.

ಪ್ರ: ಇಪಿಎಫ್ ನ ಪ್ರತಿಫಲಗಳು ಹಣದುಬ್ಬರ ದರಕ್ಕೆ ತಳಕುಹಾಕಿರಬೇಕು ಎಂಬ ವಾದವನ್ನು ಒಪ್ಪುತ್ತೀರಾ?

ಉ: ಹಣದುಬ್ಬರ ದರ ಶೇ 7.61 ರಷ್ಟಿದೆ. ಇಪಿಎಫ್ ಮೇಲೆ ಶೇ 8.5 ರಷ್ಟು ಪ್ರತಿಫಲವೆಂದರೆ ನಿಜವಾದ ಪ್ರತಿಫಲ ಶೇ 1 ಕ್ಕೂ ಕಡಿಮೆಯಾಗುತ್ತದೆ. ಆದ್ದರಿಂದಲೇ ಈ ಪ್ರತಿಫಲವನ್ನು ಹಣದುಬ್ಬರದ ದರವನ್ನು ಗಣನೆಗೆ ತೆಗೆದುಕೊಂಡ ನಂತರ ಲೆಕ್ಕ ಹಾಕುವ ವಿಧಾನವಿರಬೇಕು....

ಪ್ರ: ಕಾರ್ಮಿಕರ ಒಂದು ವರ್ಗಕ್ಕೆ ಮಾತ್ರ ಇಪಿಎಫ್ ಅನುಕೂಲವಿದೆ ಎಂಬ ವಾದವಿದೆಯಲ್ಲ?

ಉ: ನಾವು ಯಾವಾಗಲೂ ಅಸಂಘಟಿತ ವಲಯಕ್ಕೆ ಇಪಿಎಫ್ ನ್ನು ಅನ್ವಯಗೊಳಿಸಬೇಕೆಂದು ಕೇಳುತ್ತಾ ಬಂದಿದ್ದೇವೆ. ಇಂದು ಹಲವು ಸಣ್ಣ ಕೈಗಾರಿಕೆಗಳ ಕಾರ್ಮಿಕರೂ ಈ ಯೋಜನೆಯಲ್ಲಿ ಭಾಗಿಗಳಾಗಿದ್ದಾರೆ. ಆದ್ದರಿಂದ ಈ ವಾದದಲ್ಲಿ ಹುರುಳಿಲ್ಲ.

ಮೌಢ್ಯದ ವಿರುದ್ಧ ಜಾಗೃತಿ ಮೂಡಿಸಿದ ಜನರೆಡೆಗೆ ವಿಜ್ಞಾನ ಜಾಥಾ

ಅಜ್ಞಾನ, ಅಂಧಶ್ರದ್ಧೆ, ಮೌಢ್ಯ ತೊಲಗಿಸಲು ರಾಜ್ಯಾದ್ಯಂತ ನಡೆದ ವಿಜ್ಞಾನ ಜಾಥಾ ರಾಷ್ಟ್ರದಲ್ಲಿಯೇ ವಿಶಿಷ್ಟವಾದದ್ದು. ಅದರ ಸಂಕ್ಷಿಪ್ತ ವರದಿ

ಮೂಢನಂಬಿಕೆ ತೊಲಗಿಸಿ ವೈಜ್ಞಾನಿಕ ಮನೋಭಾವ ಮೂಡಿಸಲು ಆರಂಭದಿಂದಲೂ ಶ್ರಮಿಸುತ್ತಿರುವ ಭಾರತ ಜ್ಞಾನ ವಿಜ್ಞಾನ ಸಮಿತಿ ಈ ಬಾರಿ ಇದಕ್ಕಾಗಿ ರಾಜ್ಯಾದ್ಯಂತ ನಾಲ್ಕು ಜಾಥಾಗಳನ್ನು ಸಂಘಟಿಸಿತ್ತು. ದೇವರಿಗೆ ಕುರಿ ಕೋಳಿ ಬಲಿ ಕೊಡುವುದು ಸಾಮಾನ್ಯವಾದರೆ, ಮಕ್ಕಳನ್ನೇ ಬಲಿಕೊಟ್ಟ ಪ್ರಕರಣಗಳು ರಾಜ್ಯದಲ್ಲಿ ನಡೆದಾಗ ಬಿಜಿವಿಎಸ್ ಇದನ್ನು ತೀವ್ರವಾಗಿ ಪರಿಗಣಿಸಿತು. ಕಳೆದ ಒಂದು ವರ್ಷಪೂರ್ತಿ ನಡೆದ ಚಿಂತನೆ ಮತ್ತು ತಯಾರಿಯ ಫಲಿತಾಂಶವಾಗಿ ಜನರೆಡೆಗೆ ವಿಜ್ಞಾನ ಜಾಥಾ ಸಂಘಟಿಸಲಾಯಿತು. ರಾಜ್ಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ತಲುಪುವಲ್ಲಿ ಇದು



ಯಶಸ್ವಿಯಾಗಿದೆ. ಭಾರತ ಜ್ಞಾನ ವಿಜ್ಞಾನ ಸಮಿತಿ, ಪ್ರಥಮ ಬಾರಿಗೆ ಸ್ವತಂತ್ರವಾಗಿ ಸಂಘಟಿಸಿದ್ದ ಕಾರ್ಯಕ್ರಮ ಇದಾಗಿದ್ದು ಜನರಿಂದ ನಿರೀಕ್ಷೆಗೂ ಮೀರಿದ ಪ್ರತಿಕ್ರಿಯೆ ವ್ಯಕ್ತವಾಯಿತು.


ಪೂರ್ವಬಾವಿ ತಯಾರಿ: ಜಾಥಾ ಪ್ರದರ್ಶನಕ್ಕೆ ಮೊದಲು ಎಲ್ಲ ಕೇಂದ್ರಗಳಲ್ಲೂ ಸ್ವಾಗತ ಸಮಿತಿ ರಚಿಸಲು ನೀಡಿದ ಕರೆಗೆ ಶೇ 75 ಕಡೆಗಳಲ್ಲಿ ಸ್ವಾಗತ ಸಮಿತಿಗಳನ್ನು ರಚಿಸಲಾಗಿತ್ತು. ಬಹುತೇಕ ಕಡೆಗಳಲ್ಲಿ ಸ್ಥಳೀಯ ಶಾಸಕರು ಸ್ವಾಗತಸಮಿತಿಯ ನೇತೃತ್ವ ವಹಿಸಿದ್ದು ವಿಶೇಷವಾಗಿತ್ತು. ಎಲ್ಲಾ ಶಾಸಕರು ಮೌಢ್ಯತೆ ವಿರುದ್ಧ ಜಾಗೃತಿ ಮೂಡಿಸಿದ ಈ ಜನಾಂದೋಲನಕ್ಕೆ ತಮ್ಮ ಬೆಂಬಲ ಸೂಚಿಸಿದರು. ಮೌಢ್ಯತೆಯನ್ನು ವೈಭವೀಕರಿಸುವ ಸಮಾರಂಭದಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಭಾಗವಹಿಸಿದಾಗ ಅದು ಸಾರ್ವಜನಿಕರಲ್ಲಿ ಗೊಂದಲವನ್ನುಂಟು ಮಾಡುತ್ತಿತ್ತು. ಫಿಲಿಫೈನ್ಸ್ ನ ಅಲ್ಟ್ರರ್ಟೋ ಜನಪ್ರತಿನಿಧಿಗಳಿಗೆ ಕೈಬೆರಳಿನಿಂದ ಶಸ್ತ್ರ ಚಿಕಿತ್ಸೆ ಮಾಡಿ ಹಗಲು ದರೋಡೆ ಮಾಡಿದ್ದ. ಈ ಹಿನ್ನೆಲೆಯಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಮೂಲಕ ವೈಜ್ಞಾನಿಕ ಮನೋಭಾವನೆ ಕುರಿತು ಸಂದೇಶ ನೀಡುವ ಉದ್ದೇಶದಿಂದ ಅವರನ್ನೆಲ್ಲ ಒಳಗೊಳ್ಳಲಾಗಿತ್ತು.

ರಾಜ್ಯದ ನಾಲ್ಕು ಕೇಂದ್ರಗಳಲ್ಲಿ ಉದ್ಘಾಟನೆ: ಆಗಸ್ಟ್ 16 ರಂದು ಬೀದರ್ ಜಿಲ್ಲೆಯ ಬಾಲ್ಕಿ ಬೆಳಗಾವಿಯ ದೇವದುರ್ಗ, ಕೋಲಾರ ಜಿಲ್ಲೆಯ ಬಾಗೇಪಲ್ಲಿ ಹಾಗೂ ಚಾಮರಾಜನಗರದಲ್ಲಿ ಏಕಕಾಲಕ್ಕೆ ನಾಲ್ಕೂ ಜಾಥಾಗಳು ಉದ್ಘಾಟನೆಗೊಂಡವು. ಪ್ರತಿಯೊಂದು ತಂಡ ದಿನವೊಂದಕ್ಕೆ ಎರಡು ಪ್ರದರ್ಶನಗಳನ್ನು ನೀಡಿತು. 15 ದಿನಗಳಲ್ಲಿ ಪ್ರತಿಯೊಂದು ತಂಡವೂ 30 ಕಾರ್ಯಕ್ರಮಗಳನ್ನು ನೀಡಿದ್ದು ರಾಜ್ಯಾದ್ಯಂತ 120 ಕೇಂದ್ರಗಳಲ್ಲಿ ಪ್ರದರ್ಶನ ನೀಡಲಾಗಿದೆ.

ಬೆದರುಬೊಂಬೆಯಾದ ಚಾಮರಾಜ ನಗರ : ಚಾಮರಾಜನಗರಕ್ಕೆ ಹೋದವರು ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಭಯ ಕೆಲವು ಜನನಾಯಕರಲ್ಲಿದೆ. ಕಾಕತಾಳೀಯವೆಂಬಂತೆ ಅಂದು ಜಾಥಾವನ್ನು ಉದ್ಘಾಟಿಸಬೇಕಿದ್ದ ವಿಧಾನಸಭಾಧ್ಯಕ್ಷ ಶ್ರೀ ಕೃಷ್ಣರವರು ಸಮಾರಂಭಕ್ಕೆ ಗೈರುಹಾಜರಾದರು. ಇವರ ಅನುಪಸ್ಥಿತಿಯಲ್ಲಿ ಉದ್ಘಾಟನೆಯನ್ನು ನೆರವೇರಿಸಿದ ಶ್ರೀ ವಾಟಾಳ್ ನಾಗರಾಜ್ ಈ ಅಂಶವನ್ನೇ ತಮ್ಮ ಭಾಷಣಕ್ಕೆ ಬಳಸಿಕೊಂಡು ಚಾಮರಾಜನಗರಕ್ಕೆ ಬಂದರೆ ಅಧಿಕಾರ ಹೋಗುತ್ತದೆಂದು ಹೆದರಿ ಅವರು ಗೈರುಹಾಜರಾಗಿದ್ದಾರೆ, ಇದೊಂದು ಆಧುನಿಕ ಮೌಢ್ಯವೆಂದು ಅವರು ಟೀಕಿಸಿದರು.

ಮಂಡ್ಯಜಿಲ್ಲೆಯಾದ್ಯಂತ ನಡೆಯಲಿ: ತಮ್ಮ ಕ್ಷೇತ್ರವಾದ ಕೆ.ಆರ್.ಪೇಟೆಗೆ ಬೆಂಗಳೂರು ವಲಯದ ಜಾಥಾ ಆಗಮಿಸಿದಾಗ ಅದನ್ನು ಉದ್ಘಾಟಿಸಿ ಪ್ರದರ್ಶನವನ್ನು ವೀಕ್ಷಿಸಿದ ವಿಧಾನಸಭಾಧ್ಯಕ್ಷರಾದ ಶ್ರೀ ಕೃಷ್ಣ ಅವರು ಮುಂದೆ ಮಂಡ್ಯ ಜಿಲ್ಲೆಯಾದ್ಯಂತ ಈ ಜಾಥಾ ಸಂಘಟಿಸಲು ಸಲಹೆ ಮಾಡಿ ಇದಕ್ಕೆ ತಮ್ಮ ಬೆಂಬಲವಿದೆ ಎಂದರು.

ಬಂದ್ ಪ್ರತಿಭಟನೆಗಳನ್ನು ಮೀರಿ ಜನ ಬಂದರು: ಆಗಸ್ಟ್ 26 ರಂದು ಮೈಸೂರು ವಲಯ ತಂಡ ಹಾಸನಕ್ಕೆ ಬಂದ ಸಂದರ್ಭದಲ್ಲಿ ಕರ್ನಾಟಕ ಬಂದ್ ಮತ್ತು ಇದನ್ನು ಮೀರಿ ಸಾವಿರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರು, ಜನಪ್ರತಿನಿಧಿಗಳು ಆಗಮಿಸಿ ಜಾಥಾ ಕಾರ್ಯಕ್ರಮವನ್ನು ವೀಕ್ಷಿಸಿದರು. ಹಾಸನದ ಕಲಾಭವನದ ತುಂಬ ಜನವೋ ಜನ. ಜಾಥಾ ಪ್ರದರ್ಶನಕ್ಕೆ ಯಾವುದೂ ಅಡ್ಡಿಯಾಗಲಿಲ್ಲ.



ಮನೆಗೊಂದು ರೊಟ್ಟಿ: ಜಾಥಾ ತಂಡಕ್ಕೆ ಸ್ಥಳೀಯರೇ ಊಟ ವಸತಿ ಏರ್ಪಾಟು ಮಾಡಿದ್ದರು. ಹೊಸಪೇಟೆಗೆ ಗುಲ್ಬರ್ಗಾ ವಲಯ ತಂಡ ಆಗಮಿಸಿದಾಗ ಅಂದು ರಾತ್ರಿ ಅಲ್ಲಿನ ಸ್ಲಂ ಒಂದು ಜನ ಮನೆ ಮನೆಯಿಂದ ರೊಟ್ಟಿಗಳನ್ನು ತಂದು ಜಾಥಾ ತಂಡಕ್ಕೆ ಉಣಬಡಿಸಿದ್ದು ಜನರೆಡೆಗೆ ವಿಜ್ಞಾನ ಎಂಬ ಹೆಸರಿಗೆ ಅರ್ಥ ನೀಡುವಂತಿತ್ತು.

ಈ ಸಾಲು ಯಾವಾಗ ಮುಗಿಯುತ್ತೆ?

ಹಾವೇರಿ ಜಿಲ್ಲೆಯ ಹಾನಗಲ್‌ಗೆ ಧಾರವಾಡ ವಲಯ ತಂಡ ಆಗಮಿಸಿದಾಗ ಶಾಲಾ ವಿದ್ಯಾರ್ಥಿಗಳಿಂದ ಭವ್ಯ ಸ್ವಾಗತ ದೊರೆಯಿತು. ವಿದ್ಯಾರ್ಥಿಗಳ ಸಂಖ್ಯೆ ಎಷ್ಟಿತ್ತೆಂದರೆ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು ಬರುತ್ತಾ ಇದ್ದರು. ಇದು ಯಾವಾಗ ಮುಗಿಯುತ್ತೆ ಎಂದು ಜನ ಹೇಳುತ್ತಿದ್ದುದು ಕೇಳಿ ಬಂತು. ಇಂತಹ ಅನುಭವ ನೂರಾರು.

● ಇ. ಬಸವರಾಜು

ರಾಷ್ಟ್ರದ ಪ್ರಗತಿ ವೈಜ್ಞಾನಿಕ ದೃಷ್ಟಿಕೋನದಿಂದ ಸಾಧ್ಯವೇ ಹೊರತು ಧರ್ಮ-ಸಂಪ್ರದಾಯಗಳಿಂದಲ್ಲ

ಒಂದು ರಾಷ್ಟ್ರದ ಭವಿಷ್ಯದ ಪ್ರಗತಿ,ಅದು ಪ್ರಗತಿ ಪಥದೆಡೆಗೆ ಸಾಗಲು ಅನುಸರಿಸುವ ಯೋಜನಾಬದ್ಧ ವೈಜ್ಞಾನಿಕ ದೃಷ್ಟಿಕೋನಗಳಲ್ಲಡಗಿದೆಯೇ ಹೊರತು ಅಲ್ಲಿನ ಜನರು ಅನುಸರಿಸುವ ಧರ್ಮ-ಸಂಪ್ರದಾಯಗಳಿಂದಲ್ಲ ಎಂದುಆಂಧ್ರದ ಏಥೀಸ್ಟ್ ಸೆಂಟರ್‌ನ ಡಾ. ವಿಜಯಂ ಅಭಿಪ್ರಾಯಪಟ್ಟರು.

ಅವರು ದಾವಣಗೆರೆಯ ಅಕ್ಕ ಮಹಾದೇವಿ ಕಲ್ಯಾಣ ಮಂಟಪದಲ್ಲಿ, ಭಾರತ ಜ್ಞಾನ ವಿಜ್ಞಾನ ಸಮಿತಿಯ ಆಶ್ರಯದಲ್ಲಿ ಸಂಜಯನಗೊಂಡಿದ್ದ ಜನರೆಡೆಗೆ ವಿಜ್ಞಾನ ಜಾಥಾದ ರಾಜ್ಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಈ ಜಾಥಾ ವಿವಿಧೆಡೆಗಳಲ್ಲಿನ ಕಾರ್ಯಕ್ರಮಗಳಲ್ಲಿ ಜಿ.ಕೆ.ಗೋವಿಂದರಾವ್, ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಪ್ರೊ. ನರೇಂದ್ರ ನಾಯಕ್ ಮುಂತಾದವರು ಭಾಗವಹಿಸಿ ಮಾತನಾಡಿದರು.

T.V. ಟೋಕ — ದೂರದರ್ಶನದಲ್ಲಿ ರೈತರ ವೀರಗಾಥೆ 'ಚಿರಸ್ಮರಣೆ'

ಸುಮಾರು ಆರು ದಶಕಗಳ ಹಿಂದೆ ನಡೆದ ತ್ಯಾಗ ಬಲಿದಾನಗಳ ಪ್ರತೀಕವಾದ ಕಯ್ಯೂರಿನ ರೈತರ ವೀರಗಾಥೆಯನ್ನು ಕಣ್ಣಿಗೆ ಕಟ್ಟುವಂತೆ ರೂಪಿಸಿದ್ದ ಹೆಸರಾಂತ ಸಾಹಿತಿ ನಿರಂಜನರವರ ಕಾದಂಬರಿ 'ಚಿರಸ್ಮರಣೆ'ಯ ಧಾರಾವಾಹಿ ಅವತರಣಿಕೆಯು ದೂರದರ್ಶನದಲ್ಲಿ ಮನೋಜ್ಞವಾಗಿ ಮೂಡಿಬರುತ್ತಿದೆ. ಧಾರಾವಾಹಿಯ ಚಿತ್ರಣವು ಜಮೀನ್ದಾರರ ದೌರ್ಜನ್ಯ, ರೈತರ ಬವಣೆ, ರೈತ ಸಂಘಟನೆಗೆ ಅಡ್ಡ ಬರುವ ನಂಬಿಯಾರ್ ಮತ್ತು ನಂಬೂದರಿ ಜಮೀನ್ದಾರರು, ಮಾಸ್ತರು ರೈತರನ್ನು ಸಂಘಟಿಸುವ ಜೊತೆಗೆ ವಯಸ್ಕರ ಶಿಕ್ಷಣ, ಮಹಿಳೆಯರ ಸಂಘಟನೆ, ಎಲ್ಲವನ್ನೂ ಪರಿಣಾಮಕಾರಿಯಾಗಿ ಸೆರೆ ಹಿಡಿದು ಕಾಸರ ಗೋಡು ಪರಿಸರದ ಹಿನ್ನೆಲೆ ಮತ್ತು ಸಹಜತೆಯನ್ನು ಯಥಾವತ್ತಾಗಿ ಪ್ರತಿಬಿಂಬಿಸಲಾಗಿದೆ.

ಪ್ರಸಾರ ಸಮಯ
(ಸೋಮವಾರದಿಂದ ಗುರುವಾರದವರೆಗೆ)
ಸಂಜೆ
6.30 ರಿಂದ 7.00

ಜಮೀನ್ದಾರ ನಂಬಿಯಾರ್ ಹೇಳುವ 'ರೈತರು ಬಹಳ ಕೆಟ್ಟ ಜನ. ಅವರಿಕೆ ಅಕ್ಷರದ ಜ್ಞಾನ ಬಂದಷ್ಟು ಹಾವಿಗೆ ಹಾಲೆರದಂತಷ್ಟೆ. ಅವರು ಸಹಿ ಹಾಕುವಷ್ಟು ಮಾತ್ರ ಸಾಕ್ಷರರಾದರೆ ಸಾಕು. ಅದು ಬಿಟ್ಟು ನೀವು ವಯಸ್ಕರ ಶಿಕ್ಷಣ, ರೈತ ಸಂಘಟನೆ ಅಂದ್ಕೊಂಡು ನಿಂತರೆ ನಿಮಗೂ ಕ್ಷೇಮ ಇಲ್ಲ ಮತ್ತು ನನಗೂ ನೆಮ್ಮದಿ ಇರುವುದಿಲ್ಲ' ಎಂಬ ಮಾತುಗಳಿಗೆ ಮೊದ ಮೊದಲು ಮೌನವಾಗಿರುವ ಮಾಸ್ತರರು ರೈತರ ಸಂಘಟನೆ, ಐಕ್ಯತೆ ಬಲವಾಗುತ್ತಿದ್ದಂತೆ 'ಜಮೀನ್ದಾರ್ರೇ, ಇತಿಹಾಸದಲ್ಲಿ ನೀವು ಕಿರಾತಕರ ಸಾಲಿನಲ್ಲಿ ನಿಲ್ರೀ ನಾವು ಜನಪರವಾದ ಸಾಲಿನಲ್ಲಿ ನಿಲ್ತೀವಿ ಎಂದು ಸೆಡ್ಡೊಡೆದು ಮಿಂಚುತ್ತಾರೆ.. ಗುಲಾಮರಂತಿದ್ದ ರೈತರು ಅಪ್ಪ, ಚಿರುಕಂಡ, ಕುಂಞಂಬು, ಅಬೂಬಕರರ ಬಿಸಿ ರಕ್ತದ ಯುವಕರ ದಿಟ್ಟತನದಿಂದ, ಮಾಸ್ತರರ ಮಾರ್ಗದರ್ಶನ, ಸಲಹೆಗಳಿಂದ ಗಟ್ಟಿಯಾಗುತ್ತಾರೆ. ರೈತರ ಧೈರ್ಯ ಜಮೀನ್ದಾರರ ಒತ್ತಡ, ಮಾನಸಿಕ ತೊಳಲಾಟ ಮತ್ತು ಆತಂಕಕ್ಕೆ ನಾಂದಿಯಾಗುತ್ತದೆ.

ಪ್ರೇಮ ಪ್ರೀತಿಗಳ ಕೆಲವು ದೃಶ್ಯಗಳು ಕ್ಲೀಶೆಯಾಗಿಯೂ, ಸ್ವಲ್ಪ ಅತಿಯೆನಿಸುವಂತೆ ಕಂಡರೂ ರಹಸ್ಯವಾಗಿ ರೈತ ಸಂಘಟನೆ ಕಟ್ಟುತ್ತಿರುವ ವಿಷಯ ಜಮೀನ್ದಾರನ ಕಿವಿ ತಲುಪಿ ಇದಕ್ಕೆ ವಿರೋಧವೊಡ್ಡಿದಾಗ ರೈತರು 'ಸಂಘಟನೆಯನ್ನು ಗರ್ಭದಲ್ಲೇ ಅಡಗಿಸಿಡಲು ಯಾರಿಗೂ ಸಾಧ್ಯವಿಲ್ಲ. ಎಲ್ಲರ ಮನೆಯ ಮೇಲೂ ಬಾವುಟ ಹಾರಿಸಿ ಜಮೀನ್ದಾರರ ಧಿಮಾಕು ಮತ್ತು ದರ್ಪ ಗಾಳಿಯಲ್ಲಿ ತೂರಿ ಹೋಗುವಂತೆ ಮಾಡೋಣ' ಎಂದು ಹುರಿದುಂಬಿಸುವ ಮಾಸ್ತರರ ಪಾತ್ರದ ಕಾಸರ ಗೋಡು ಚಿನ್ನಾ ಅಭಿನಯ ಮನಮುಟ್ಟುವಂತೆ ಬಂದಿದೆ.

ಶೋಷಿತರ ಬವಣೆ, ಜಮೀನ್ದಾರರ ಏಜೆಂಟರಾದ ಪೋಲಿಸರ ಬೆದರಿಕೆ, ಒಂದೊಂದೇ ಮೆಟ್ಟಿಲೇರಿ ದಿಗಂತದತ್ತ ಸಾಗುವಂಥ ರೈತರ ಐಕ್ಯತೆ ಮತ್ತು ಧೈರ್ಯ ಇವೆಲ್ಲವುಗಳು ಸಮಕಾಲೀನ ಭಾರತದ ರೈತ ಚಳುವಳಿ ಮತ್ತು ಆಳುವ ವರ್ಗಗಳ ವರ್ಗ ಸಂಘರ್ಷಕ್ಕೆ ಹಿಡಿದ ಕನ್ನಡಿಯಂತಿದೆ.

ನದಿ ತೀರಗಳಲ್ಲಿನ ಛಾಯಾಗ್ರಹಣ, ಸುತ್ತಮುತ್ತಲ ಪರಿಸರ ಸೌಂದರ್ಯ ನೋಡುವವರ ಕಣ್ತಣಿಸಿ ಮನಕ್ಕೆ ಮುದನೀಡುತ್ತವೆ. ಧಾರಾವಾಹಿಯ ಸಂಗೀತ ಉತ್ತಮ ಅಭಿರುಚಿಯ ಸಾಹಿತ್ಯ ಮಿಲನದೊಂದಿಗೆ ಧಾರಾವಾಹಿಯನ್ನು ಶ್ರೀಮಂತಗೊಳಿಸಿದೆ ಎನ್ನಲು ಅಡ್ಡಿಯಿಲ್ಲ. ಕನ್ನಡ ಧಾರಾವಾಹಿಗಳು ಬರೇ ವಠಾರದೊಳಗೂ, ಕೌಟುಂಬಿಕ ಸಮಸ್ಯೆಗಳೊಳಗೂ ಗಿರಕಿ ಹೊಡೆಯುತ್ತಿರುವ ಈ ವೇಳೆಯಲ್ಲಿ ಇದೊಂದು ಉತ್ತಮ ಪ್ರಯತ್ನ. ಕಳಪೆ ಪಾತ್ರಗಳಿಗಷ್ಟೆ ಸೀಮಿತರಾಗಿದ್ದ ಸಿಹಿಕಹಿ ಚಂದ್ರುರವರು ತಮ್ಮ ಸುಪ್ತ ಪ್ರತಿಭೆಯನ್ನು ನಿರ್ದೇಶಕರಾಗಿ ಕಲಾತ್ಮಕವಾಗಿ ನಿರೂಪಿಸುವಲ್ಲಿ ಗೆದ್ದಿದ್ದಾರೆ.

ಜಯ



ಮಾಸ್ತರ ಕಾಸರಗೋಡು ಚಿನ್ನಾ ಮತ್ತಿತರರು

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH